ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 30 | ಜುಲೈ 22-28, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಕರ್ನಾಟಕದಲಿ ಕಾನೂನು ಕಗ್ಗಂಟು

'ಕಾರ್ಮಿಕ ಸಂಹಿತೆ'ಗಳನು ಹೇರಲು' ಬಿಜೆಪಿ ಸರ್ಕಾರದ ತರಾತುರಿ







ಕಲಬುರಗಿ ಜಿಲ್ಲಾ ಮಹಿಳಾ ಸಮ್ಮೇಳನ





ಅಸ್ಸಾಂನಲ್ಲಿ ಎನ್‌ಆರ್‌ಸಿ ಪ್ರಹಸನ

ತ್ರಿಪುರಾದಲ್ಲಿ ಬಿಜೆಪಿಯ ಸರ್ವಾಧಿಕಾರಶಾಹೀ ಮತ್ತು ಪ್ರಜಾಪ್ರಭುತ್ವ-ವಿರೋಧಿ ತಂತ್ರಗಳಿಂದ ನಗೆಪಾಟಲಾಗುತ್ತಿರುವ ಪಂಚಾಯತು ಚುನಾವಣೆಗಳು-ಸಿಪಿಐ(ಎಂ) ಪೊಲಿಟ್ ಬ್ಯುರೊ ಖಂಡನೆ

ತ್ರಿಪುರಾದಲ್ಲಿ ಜುಲೈ 27 ರಂದು ನಡೆಯಲಿರುವ ಮೂರು ಹಂತಗಳ ಪಂಚಾಯತು ಚುನಾವಣೆಗಳು ಪ್ರಜಾಪ್ರಭುತ್ವ ಪ್ರಕ್ರಿಯೆಯ ಮೇಲೆ ಒಂದು ಬೃಹತ್ ಮತ್ತು ವ್ಯಾಪಕ ದಾಳಿಗಳನ್ನು ಕಾಣುತ್ತಿವೆ.

ನಾಮಪತ್ರ ಸಲ್ಲಿಸುವ ಜುಲೈ 1ರಿಂದ 8ರ ಅವಧಿಯಲ್ಲಿ ಬಿಜೆಪಿಯ ಶಸ್ತ್ರಸಜ್ಜಿತ ಪಡೆಗಳು ಸಿಪಿಐ(ಎಂ) ಮತ್ತು ಇತರ ಪ್ರತಿಪಕ್ಷಗಳ ಅಭ್ಯರ್ಥಿಗಳು ನಾಮಪತ್ರಗಳನ್ನು ಪಡೆಯದಂತೆ ಮತ್ತು ಪಡೆದರೂ ಸಲ್ಲಿಸದಂತೆ ತಡೆದಿವೆ. ಚುನಾವಣಾ ಕಚೇರಿಗಳ ಮುಂದೆ ಬೈಕ್-ಸವಾರ ಬಿಜೆಪಿ ಗಲಭೆಕೋರರನ್ನು ನಿಲ್ಲಿಸಲಾಗಿತ್ತು. ಈ ಮೂಲಕ ಯಾವ ಪ್ರತಿಪಕ್ಷದ ಅಭ್ಯರ್ಥಿಯೂ ನಾಪತ್ರ ಪಡೆಯದಂತೆ ಮತ್ತು ಪಡೆದರೂ ಸಲ್ಲಿಸದಂತೆ ಮಾಡಲಾಗಿದೆ. ಬಹಳಷ್ಟು ಕಡೆ ಪೋಲೀಸರು ಮೂಕ ಪ್ರೇಕ್ಷಕರಾಗಿದ್ದರು.

ಭಯ ಮತ್ತು ಬೆದರಿಕೆಯ ವಾತಾವರಣ ಸೃಷ್ಟಿಸಲು ಸಿಪಿಐ(ಎಂ)ನ ಅಭ್ಯರ್ಥಿಗಳಾಗಬಹುದಾದವರ ಮೇಲೆ ದೈಹಿಕ ಹಲ್ಲೆಗಳನ್ನು ಮತ್ತು ಪಕ್ಷದ ಕಚೇರಿಗಳ ಮೇಲೆ ದಾಳಿಗಳನ್ನು ನಡೆಸಲಾಗುತ್ತಿದೆ. ಉದಾ: ಸಿಪಿಐ(ಎಂ)ನ ಉತ್ತರ ತ್ರಿಪುರಾ ಜಿಲ್ಲಾಸಮಿತಿ ಮತ್ತು ಧರ್ಮನಗರ ಉಪ-ವಿಭಾಗ ಕಚೇರಿಯ ಮೇಲ ದಾಳಿ ನಡೆಸಲಾಗಿದೆ.

ಈ ಬೆದರಿಕೆಗಳನ್ನು ಎದುರಿಸಿ ನಾಮಪತ್ರ ಸಲ್ಲಿಸುವಲ್ಲಿ ಯಶಸ್ವಿಯಾಗಿರುವ ಅಭ್ಯರ್ಥಿಗಳು ಮತ್ತು ಅವರ ಕುಟುಂಬಗಳನ್ನು ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವಂತೆ ಬೆದರಿಸಲಾಗುತ್ತಿದೆ. ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನವಾದ ಜುಲೈ 11ರಂದು, ಇದರಿಂದಾಗಿ 121 ಸಿಪಿಐ(ಎಂ) ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದಿದೆ.

ಈ ಭಯೋತ್ಪಾದಕ ಪ್ರಚಾರದಿಂದಾಗಿ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನಾಂಕದ ನಂತರ ಪಂಚಾಯತು ಸಮಿತಿಗಳಲ್ಲಿ ಮತ್ತು ಗ್ರಾಮ ಪಂಚಾಯತುಗಳಲ್ಲಿ 90ಶೇ. ಸ್ಥಾನಗಳು ಸ್ಪರ್ಧೆಯಿಲ್ಲದೇ ಬಿಜೆಪಿಗೆ ಹೋಗಿವೆ. ಜುಲೈ 27ರಂದು ನಡೆಯಲಿರುವ ಪಂಚಾಯತು ಚುನಾವಣೆಗಳಲ್ಲಿ ಈಗ 6111 ಗ್ರಾಮ ಪಂಚಾಯತು ಸ್ಥಾನಗಳಲ್ಲಿ ಎಡರಂಗದ 306 ಅಭ್ಯರ್ಥಿಗಳು ಮತ್ತು 419 ಪಂಚಾಯತು ಸಮಿತಿ ಸೀಟುಗಳಲ್ಲಿ 56 ಅಭ್ಯರ್ಥಿಗಳು ಉಳಿದುಕೊಂಡಿದ್ದಾರೆ. ಜಿಲ್ಲಾ ಪರಿಷದ್‌ನ 116 ಸೀಟುಗಳಲ್ಲಿ 69 ಎಡರಂಗ ಅಭ್ಯರ್ಥಿಗಳು ಇದ್ದಾರೆ.

ಈ ಎಲ್ಲ ಸೀಟುಗಳಲ್ಲಿ ಎಲ್ಲ ದಾಳಿಗಳನ್ನೂ ಎದುರಿಸಿ ಸ್ಪರ್ಧಿಸಿಯೇ ತೀರುತ್ತೇವೆ, ಆಳುವ ಪಕ್ಷದ ಪ್ರಜಾಪ್ರಭುತ್ವ-ವಿರೋಧಿ ಮತ್ತು ಫ್ಯಾಸಿಸ್ಟ್ ಮಾದರಿ ವಿಧಾನಗಳನ್ನು ಬಯಲಿಗೆಳೆಯುತ್ತೇವೆ ಎಂದು ಸಿಪಿಐ(ಎಂ) ಮತ್ತು ಎಡರಂಗ ದೃಢ ನಿರ್ಧಾರ ಮಾಡಿವೆ.

ಬಿಜೆಪಿ, ಈ ಹಿಂದೆ ಸೆಪ್ಟಂಬರ್ 2018ರಲ್ಲಿ ಮೂರು ಹಂತಗಳ ಪಂಚಾಯತು ಸಂಸ್ಥೆಗಳಿಗೆ ಉಪಚುನಾವಣೆಗಳ ಸಂದರ್ಭದಲ್ಲಿ ಮಾಡಿದ್ದನ್ನೇ ಈಗ ಇನ್ನೂ ದೊಡ್ಡ ಪ್ರಮಾಣದಲ್ಲಿ ಪುನರಾವರ್ತಿಸುತ್ತಿದೆ. ಆಗ 96 ಶೇ. ಸ್ಥಾನಗಳಲ್ಲಿ ಪ್ರತಿಪಕ್ಷಗಳಿಗೆ ನಾಮಪತ್ರಗಳನ್ನೂ ಸಲ್ಲಿಸಲಾಗದಂತೆ ಮಾಡಿ ಅದು ಸ್ಪರ್ಧೆಯಿಲ್ಲದೇ ಗೆದ್ದು ಕೊಂಡಿತ್ತು.

ಇದೇ ಬಿಜೆಪಿ ಪಶ್ಚಿಮ ಬಂಗಾಲದಲ್ಲಿ ಪಂಚಾಯತು ಚುನಾವಣೆಗಳಲ್ಲಿ ಮೋಸ ಮಾಡಲಾಗುತ್ತಿದೆ ಎಂದು ಬೊಬ್ಬೆ ಹಾಕಿ ಈ ವಿಷಯದಲ್ಲಿ ಸುಪ್ರಿಂ ಕೋರ್ಟಿಗೂ ಹೋಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಆದರೆ ತ್ರಿಪುರಾದಲ್ಲಿ ಅದು ತನ್ನ ರಾಜ್ಯ ಸರಕಾರದ ಅಡಿಯಲ್ಲಿ ಅದನ್ನೇ ಮಾಡುತ್ತಿದೆ.

ತ್ರಿಪುರಾದಲ್ಲಿ ಬಿಜೆಪಿಯ ಈ ಸರ್ವಾಧಿಕಾರಶಾಹಿ ಮತ್ತು ಪ್ರಜಾಪ್ರಭುತ್ವ-ವಿರೋಧಿ ತಂತ್ರಗಳನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಇದು ಪಂಚಾಯತು ಚುನಾವಣೆಗಳಲ್ಲಿ ಪ್ರಜಾಪ್ರಭುತ್ವ ಹಕ್ಕಿನ ಚಲಾವಣೆಯನ್ನು ನಗೆಪಾಟಲು ಮಾಡಿದೆ ಎಂದಿರುವ ಅದು ತ್ರಿಪುರಾದಲ್ಲಿ ಪ್ರಜಾಪ್ರಭುತ್ವದ ಈ ಕೊಲೆಯ ವಿರುದ್ಧ ಪ್ರತಿಭಟನೆಯ ದನಿಯೆತ್ತಬೇಕು ಎಂದು ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಕರೆ ನೀಡಿದೆ.

ಅರಣ್ಯ ಹಕ್ಕುಗಳ ಕಾಯ್ದೆಗೆ ಬೆಂಬಲವಾಗಿ ಸುಪ್ರಿಂ ಕೋರ್ಟ್ ಕೇಸಿನಲ್ಲಿ ಪಾರ್ಟಿಯಾಗಲು ಎಎಆರ್‌ಎಂ ಅರ್ಜಿ

ಆದಿವಾಸಿ ಅಧಿಕಾರ ರಾಷ್ಟ್ರೀಯ ಮಂಚ್ (ಎಎಆರ್‌ಎಂ) ಅರಣ್ಯ ಹಕ್ಕುಗಳ ಕಾಯ್ದೆಗೆ ಸಂಬಂಧಪಟ್ಟಂತೆ ಸುಪ್ರಿಂ ಕೋರ್ಟಿನಲ್ಲಿ ನಡೆಯುತ್ತಿರುವ ಮೊಕದ್ದಮೆಯಲ್ಲಿ ಒಂದು ಪಾರ್ಟಿಯಾಗಬೇಕು ಎಂದು ಅರ್ಜಿ ಸಲ್ಲಿಸಿದೆ. ಕೆಲವು ನಿವೃತ್ತ ಅಧಿಕಾರಿಗಳು ಮತ್ತು ವನ್ಯಪ್ರಾಣಿ ರಕ್ಷಣಾ ಸಂಘಟನೆಗಳು ಅರಣ್ಯ ಹಕ್ಕುಗಳ ಕಾಯ್ದೆಗೆ ಸವಾಲು ಹಾಕುವ ಒಂದು ಮೊಕದ್ದಮೆಯನ್ನು ಸುಪ್ರಿಂ ಕೋರ್ಟಿನಲ್ಲಿ ಹಾಕಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸಂಸತ್ತಿಗೆ ಇಂತಹ ಕಾಯ್ದೆಯನ್ನು ಮಾಡುವ ಅರ್ಹತೆ ಇಲ್ಲ ಎಂಬ ಆಧಾರದಲ್ಲಿ ಈ ಮೊಕದ್ದಮೆ ಹಾಕಲಾಗಿತ್ತು.

ಆದರೆ ಸಂಸತ್ತು ಮತ್ತು ಸಂವಿಧಾನಕ್ಕೆ ಈ ಸವಾಲನ್ನು ಸುಪ್ರಿಂ ಕೋರ್ಟ್ ಸ್ವೀಕರಿಸಿ ಫೆಬ್ರುವರಿ 13, 2019ರಂದು ಸುಪ್ರಿಂ ಕೋರ್ಟ್ ಈ ಕಾಯ್ದೆಯ ಅಡಿಯಲ್ಲಿ ರಾಜ್ಯ ಸರಕಾರದಿಂದ ಹಕ್ಕುಪತ್ರ ಪಡೆಯದವರು ಮತ್ತು ಅರ್ಜಿಗಳು ತಿರಸ್ಕೃತವಾಗಿರುವ ಎಲ್ಲ ಕುಟುಂಬಗಳನ್ನು ಎಬ್ಬಿಸಬೇಕು ಎಂದು ನಿರ್ದೇಶನಗಳನ್ನು ಕೊಟ್ಟಿತು. ಇದು ಜಾರಿಯಾಗಿದ್ದರೆ 23 ಲಕ್ಷ ಕುಟುಂಬಗಳು, ಅವುಗಳಲ್ಲಿ ಬಹುಪಾಲು ಬುಡಕಟ್ಟು ಕುಟುಂಬಗಳು ಬಾಧಿತರಾಗುತ್ತಿದ್ದರು. ಈ ಬಗ್ಗೆ ದೇಶಾದ್ಯಂತ ಎದ್ದುಬಂದ ಆಕ್ರೋಶದಿಂದಾಗಿ ಕೇಂದ್ರ ಸರಕಾರ ಈ ಆದೇಶದ ವಿರುದ್ಧ ಅರ್ಜಿಯನ್ನು ಸಲ್ಲಿಸಿತು, ಸುಪ್ರಿಂ ಕೋರ್ಟ್ ಈ ಆದೇಶಕ್ಕೆ ಜುಲೈ ವರೆಗೆ ತಡೆಯಾಜ್ಞೆ ನೀಡಿತು. ಜುಲೈ 24ಕ್ಕೆ ಈ ಮೊಕದ್ದಮೆ ಮತ್ತೆ ವಿಚಾರಣೆಗೆ ಬರಲಿದೆ.

ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಬೆಂಬಲಿಸುತ್ತ ಈ ಮೊಕದ್ದಮೆಯಲ್ಲಿ ತನ್ನನ್ನೂ ಒಂದು ಪಾರ್ಟಿಯಾಗಿ ಮಾಡಬೇಕು ಎಂದು ಅರ್ಜಿ ಸಲ್ಲಿಸಿದ್ದು ಜುಲೈ 24 ರಂದು ಮುಖ್ಯ ಅರ್ಜಿಯೊಂದಿಗೆ ಇದರ ವಿಚಾರಣೆಯೂ ನಡೆಯುವ ಸಂಭವ ಇದೆ.

ಅಸ್ಸಾಂ ರಾಷ್ಟ್ರೀಯ ಪೌರತ್ವ ದಾಖಲೆಪಟ್ಟಿಯ ಮರು ದೃಢೀಕರಣ ಬೇಡಿಕೆಯ ಹಿಂದೆ ಬಿಜೆಪಿಯ ದುರುದ್ದೇಶಪೂರಿತ ಅಜೆಂಡ- ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕೇಂದ್ರ ಸರಕಾರ ಮತ್ತು ಅಸ್ಸಾಂ ರಾಜ್ಯ ಸರಕಾರ ಜುಲೈ 30, 2018ರಂದು ಪ್ರಕಟಿಸಿದ ರಾಷ್ಟ್ರೀಯ ಪೌರತ್ವ ದಾಖಲೆ(ಎನ್‌ಆರ್‌ಸಿ)ಯಲ್ಲಿ ಸೇರಿಸಲ್ಪಟ್ಟ ಹೆಸರುಗಳ ಸ್ಯಾಂಪಲ್ ಮರು-ದೃಢೀಕರಣ ನಡೆಸಬೇಕು ಎಂದು ಸುಪ್ರಿಂ ಕೋರ್ಟಿಗೆ ಅರ್ಜಿ ಹಾಕಿವೆ. ಇದಕ್ಕಾಗಿ ಎನ್‌ಆರ್‌ಸಿ ಪಟ್ಟಿಯ ಅಂತಿಮ ಪ್ರಕಟಣೆಯ ಕೊನೆಯ ದಿನಾಂಕವನ್ನು ಜುಲೈ 31 ರಿಂದ ಆಚೆಗೆ ವಿಸ್ತರಿಸಬೇಕು ಎಂದು ಅದು ಬಯಸಿದೆ.

ಕೇಂದ್ರ ಮತ್ತು ರಾಜ್ಯ ಸರಕಾರ ಬಾಂಗ್ಲಾದೇಶದೊಂದಿಗೆ ಗಡಿ ಹೊಂದಿರುವ ಜಿಲ್ಲೆಗಳಲ್ಲಿ 20% ಹೆಸರುಗಳ ಮತ್ತು ಇತರೆಡೆಗಳಲ್ಲಿ 10% ಹೆಸರುಗಳ ಮರು ದೃಢೀಕರಣ ಕೋರಿವೆ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಮತ್ತೊಂದು ಸುತ್ತಿನ ದೃಢೀಕರಣವನ್ನು ಪಕ್ಷ ವಿರೋಧಿಸುವುದಾಗಿ ಹೇಳಿದೆ. ಲಕ್ಷಾಂತರ ನಾಗರಿಕರು ಈಗಾಗಲೆ ಮತ್ತೆ-ಮತ್ತೆ ವಿಚಾರಣೆಗಳು ಮತ್ತು ದಾಖಲೆಗಳ ಸಲ್ಲಿಕೆಗಾಗಿ ಬಹಳಷ್ಟು ಹಣ ಮತ್ತು ಸಮಯವನ್ನು ವ್ಯಯ ಮಾಡಿದ್ದಾರೆ. ಈ ಮರು-ದೃಢೀಕರಣ ಇವರ ಬವಣೆಗಳನ್ನು ಮುಂದುವರೆಸುತ್ತದೆ, ಇನ್ನಷ್ಟು ಕಿರುಕುಳಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಅದು ಹೇಳಿದೆ.

ಜುಲೈ 31ರ ಅಂತಿಮ ಗಡುವಿನ ಸ್ವಲ್ಪವೇ ಮೊದಲು ಇದ್ದಕ್ಕಿದ್ದಂತೆ ಬಂದಿರುವ ಈ ಬೇಡಿಕೆ ಬಿಜೆಪಿಯ ದುರುದ್ದೇಶಪೂರಿತ ಅಜೆಂಡಾದಂತೆ ಕಾಣುತ್ತದೆ. ಅದು ಧಾರ್ಮಿಕ ಸಂಯೋಜನೆಯ ಆಧಾರದಲ್ಲಿ ಪೌರತ್ವ ವನ್ನು ಗುರುತಿಸುವ ಪ್ರಯತ್ನ ನಡೆಸಿದೆ.

ಎನ್ ಆರ್‌ಸಿಗೆ ಸಂಬಂಧಪಟ್ಟ ಸಮಸ್ಯೆಗಳು ಬೇರೆಯೇ ಆಗಿವೆ. ತಪ್ಪಾಗಿ ಕೈಬಿಟ್ಟವರಿಗೆ ನ್ಯಾಯ ಒದಗಿಸಲು ಒಂದು ತ್ವರಿತ ಕಾನೂನು ಪ್ರಕ್ರಿಯೆ ಇರುತ್ತದೆಯೇ? ಎನ್ ಆರ್‌ಸಿ ಯಲ್ಲಿ ಸೇರಿಸದಿರುವ ಲಕ್ಷಾಂತರ ಮಂದಿಯ ಗತಿಯೇನಾಗುತ್ತದೆ, ಅವರ ಸ್ಥಾನಮಾನವೇನಾಗುತ್ತದೆ ಇತ್ಯಾದಿ ಪ್ರಶ್ನೆಗಳಿವೆ.

ಈ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಆಂಭಿಸಿರುವ ಮತ್ತು ಇದರ ಉಸ್ತುವಾರಿ ಮಾಡುತ್ತಿರುವ ಸುಪ್ರಿಂ ಕೋರ್ಟ್ ಈ ಪ್ರಶ್ನೆಗಳ ಬಗ್ಗೆ ಪೂರ್ಣ ಜವಾಬ್ದಾರಿಯನ್ನು ವಹಿಸಬೇಕಾಗುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಭಾರತೀಯ ನಾಗರಿಕತ್ವ ಮತ್ತು ನಾಗರಿಕರ ಮೂಲ ಹಕ್ಕುಗಳನ್ನು ಕುರಿತ ಮೂಲಭೂತ ವಿಷಯಗಳು ಪಣಕ್ಕೊಡ್ಡಲ್ಪಟ್ಟಿವೆ ಎಂದು ಹೇಳಿದೆ.

ಮನರೇಗ ಬಗ್ಗೆ ಕೇಂದ್ರ ಮಂತ್ರಿಗಳ ಅಪಲಾಪ: ಗ್ರಾಮೀಣ ಬಡವರ ಉದ್ಯೋಗದ ಹಕ್ಕಿನ ಮೇಲೆ ದಾಳಿ ಸಹಿಸುವುದಿಲ್ಲ-ಎಐಎಡಬ್ಲ್ಯುಯು

ಉದ್ಯೋಗದ ಕೇಂದ್ರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಮಂತ್ರಿ ನರೇಂದರ್ ತೋಮರ್ ಸರಕಾರ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ಮನರೇಗ)ಯನ್ನು ಸದಾಕಾಲವೂ ನಡೆಸಿಕೊಂಡು ಹೋಗ ಬಯಸುವುದಿಲ್ಲ ಎಂದು ಹೇಳಿರುವುದನ್ನು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಬಲವಾಗಿ ಖಂಡಿಸಿದೆ. ಮನರೇಗವನ್ನು ವಿರೋಧಿಸಿಕೊಂಡೇ ಬಂದಿರುವ ಬಿಜೆಪಿಯ ಸರಕಾರದ ನಿಜ ಆಶಯವನ್ನು ಇದು ತೋರಿಸುತ್ತದೆ ಎಂದು ಅದು ಹೇಳಿದೆ.

ಈ ಮೊದಲು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ತಾವುಗಳು ಈ ಹಿಂದಿನ ಕಾಂಗ್ರೆಸ್ ಸರಕಾರಗಳ ವಿಫಲತೆಯನ್ನು ತೋರಿಸುವುದಕ್ಕಾಗಿಯಷ್ಟೇ ಈ ಯೋಜನೆಯನ್ನು ಇಟ್ಟುಕೊಂಡಿರುವುದಾಗಿ ಸಂಸತ್ತಿನಲ್ಲಿ ಹೇಳಿದ್ದರು. ಇದು ಯಾವುದೇ ಉದ್ಯೋಗಾವಕಾಶಗಳಿಲ್ಲದೆ ಬಿಕ್ಕಟ್ಟನ್ನು ಎದುರಿಸುತ್ತಿರುವ ಗ್ರಾಮೀಣ ಬಡವರ ಬಗ್ಗೆ ಬಿಜೆಪಿ ಸರಕಾರದ ಅಜೆಂಡಾದ ನಿಜ ಬಣ್ಣವನ್ನು ತೋರಿಸುತ್ತದೆ ಎಂದು ಎಐಎಡಬ್ಲ್ಯುಯು ಅಭಿಪ್ರಾಯ ಪಟ್ಟಿದೆ.

ಮನರೇಗ ಕಳೆದ ದಶಕದಲ್ಲಿ ಆರ್ಥಿಕ ಮತ್ತು ಕರ್ಷಕ ಸಂಕಟದ ಅವಧಿಗಳಲ್ಲಿ ಗ್ರಾಮೀಣ ಭಾರತದಲ್ಲಿ ತನ್ನ ಉಪಯುಕ್ತತೆಯನ್ನು ಸಾಬೀತು ಮಾಡಿದೆ. ಗ್ರಾಮೀಣ ಜನಸಮೂಹಗಳ ಬದುಕಿಗೆ ಆಸರೆಯಾಗಿ ನಿಂತಿದೆ. ಮನರೇಗದ ಅನುಭವಗಳ ಇತರ ಸಕಾರಾತ್ಮಕ ಅಂಶಗಳಲ್ಲಿ ಅದು ಉದ್ಯೋಗಾಕಾಂಕ್ಷಿಗಳು ಸಾಮೂಹಿಕವಾಗಿ ಭಾಗವಹಿಸುವಂತೆ ನೀಡಿರುವ ಒತ್ತು ಕೂಡ ಸೇರಿದೆ. ದುರ್ಬಲ ವಿಭಾಗಗಳಿಗೆ ಹೆಚ್ಚಿನ ಮಹತ್ವ ಪಡೆದಿರುವುದು ಈ ಶಾಸನ ಎಲ್ಲರನ್ನೂ ಒಳಗೊಳ್ಳುವ ಚಾರಿತ್ರ್ಯ ಹೊಂದಿರುವುದನ್ನು ತೋರಿಸುತ್ತದೆ. ಆದ್ದರಿಂದ ಇದನ್ನು ಮತ್ತಷ್ಟು ಬಲಯುತಗೊಳಿಸುವುದು ಮತ್ತು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಇನ್ನೂ ಹೆಚ್ಚು ಮಹತ್ವದ್ದಾಗುತ್ತದೆ ಎಂದು ಎಐಎಡಬ್ಲ್ಯುಯು ಹೇಳಿದೆ.

ಈಗಾಗಲೇ ಮನರೇಗಕ್ಕೆ ಬಿಜೆಪಿ ಸರಕಾರ ಅಗತ್ಯ ಹಣವನ್ನು ಒದಗಿಸುತ್ತಿಲ್ಲ. ಈ ವರ್ಷ ಕೇವಲ 60,000 ಕೋಟಿ ರೂ. ನೀಡಿದೆ. ಇದು ಕಳೆದ ವರ್ಷದ ಪರಿಷ್ಕೃತ ಬಜೆಟಿನಲ್ಲಿ ನೀಡಿರುವುದಕ್ಕಿಂತಲೂ 1084 ರೂ.ಗಳಷ್ಟು ಕಡಿಮೆ. 2017-18ರಲ್ಲಿ ಗ್ರಾಮೀಣ ಕುಟುಂಬಗಳಿಗೆ ನೀಡಿದ ಕೆಲಸ ಸರಾಸರಿ 45 ದಿನಗಳದ್ದು ಮಾತ್ರ ಎಂಬುದು ಪರಿಸ್ಥಿತಿ ಎಷ್ಟು ಭಯಾನಕವಾಗಿದೆ ಎಂಬುದನ್ನು ತೋರಿಸುತ್ತದೆ. ಕೆಲಸದ ದಿನಗಳನ್ನು ಮಾತ್ರವಲ್ಲ, ಕೆಲಸ ಪಡೆದ ಜನಗಳ ಸಂಖ್ಯೆಯನ್ನೂ ಕಡಿತಗೊಳಿಸಲಾಗಿದೆ. 8.4 ಕೋಟಿ ಜನಗಳು ಉದ್ಯೋಗ ಕೇಳಿದ್ದರು, ಅವರಲ್ಲಿ 7.2 ಕೋಟಿ ಮಂದಿಗಷ್ಟೇ ಅವಕಾಶ ಸಿಕ್ಕಿತು. 1.2 ಕೋಟಿ ಜನಗಳಿಗೆ, ಅಂದರೆ 15% ದಷ್ಟು ಮಂದಿಗೆ ಅವರ ಹಕ್ಕುಗಳನ್ನು ನಿರಾಕರಿಸಲಾಗಿದೆ.

ಬಿಜೆಪಿ ಸರಕಾರ ಮತ್ತು ಪ್ರಧಾನ ಮಂತ್ರಿಗಳೂ ಸೇರಿದಂತೆ ಅದರ ಮಂತ್ರಿಗಳಿಗೆ ಮನರೇಗದ ಬಗ್ಗೆ ಸಂಪೂರ್ಣ ತಪ್ಪಾದ ತಿಳಿವು ಇದೆ ಎಂಬುದನ್ನು ಗಮನಿಸಬೇಕಾಗಿರುವುದು ಮಹತ್ವದ ಸಂಗತಿ. ಏಕೆಂದರೆ ಇದು ಯಾವುದೇ ಕಾಲಘಟ್ಟದಲ್ಲಿ ನಿಲ್ಲಿಸಿ ಬಿಡಬಹುದಾದ ಒಂದು ಯೋಜನೆಯಲ್ಲ. ಬದಲಿಗೆ ಇದು ಭಾರತದ ಸಂಸತ್ತು ಅಂಗೀಕರಿಸಿದ ಒಂದು ಶಾಸನ. ಉದ್ಯೋಗದ ಹಕ್ಕಿಗಾಗಿ ಜನಗಳ ದೀರ್ಘ ಹೋರಾಟದ ಒತ್ತಡದಿಂದಾಗಿ ಬಂದಿರುವ ಶಾಸನ ಎಂದು ನೆನಪಿಸಿರುವ ಅಖಿಲ ಭಾರತ ಕೃಷಿ ಕೂಲಿಗಾರರ ಸಂಘ ಗ್ರಾಮೀಣ ಬಡಜನರ ಉದ್ಯೋಗದ ಹಕ್ಕಿನ ಮೇಲೆ ಯಾವುದೇ ಹಲ್ಲೆಯನ್ನು ಸಹಿಸಲು ಸಾಧ್ಯವಿಲ್ಲ, ನಮ್ಮ ಹಕ್ಕಿನ ರಕ್ಷಣೆಗೆ ಕಟುವಾದ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದೆ.

ರೈತ-ವಿರೋಧಿ ಧೋರಣೆಗಳ ವಿರುದ್ಧ ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಎಐಕೆಸಿ ನಿರ್ಧಾರ

ಜುಲೈ 22- ಅರಣ್ಯ ಕಾಯ್ದೆ ತಿದುಪಡಿ ವಿರುದ್ಧ ಆದಿವಾಸಿ ಪ್ರತಿಭಟನೆಗೆ ಬೆಂಬಲ; ಆಗಸ್ಟ್ 3-ರೈತರಿಗೆ ಬಿಜೆಪಿ ಸರಕಾರದ ವಿಶ್ವಾಸಘಾತದ ವಿರುದ್ಧ ಮತಪ್ರದರ್ಶನ; ಸೆಪ್ಟಂಬರ್ 5- ನಾಚಿಕೆಹೀನ ಕನಿಷ್ಟ ಕೂಲಿ ಪ್ರಕಟಣೆಯ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆ

ದೇಶದಲ್ಲಿನ ಕೃಷಿ ಪ್ರಶ್ನೆಗಳನ್ನು ಚರ್ಚಿಸಲು ಮತ್ತು ಮುಂದಿನ ಕಾರ್ಯಾಚರಣೆಯನ್ನು ರೂಪಿಸಲು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ದ 'ಅಖಿಲ ಭಾರತ ಕಿಸಾನ್ ಮಂಡಳಿ(ಎಐಕೆಸಿ) ಜುಲೈ 12ರಂದ 14 ರವರೆಗೆ ಹೈದರಾಬಾದಿನಲ್ಲಿ ಸಭೆ ಸೇರಿತು.

ದೇಶದಲ್ಲಿ ಈಗಿರುವ ಅಸಾಧಾರಣ ಬರ ಪರಿಸ್ಥಿತಿಯನ್ನು ವಿವರವಾಗಿ ಚರ್ಚಿಸಿದ ಮಂಡಳಿ ಈ ಬಗ್ಗೆ ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಮತ್ತು ವಿವಿಧ ರಾಜ್ಯಸರಕಾರಗಳ ಸಂಪೂರ್ಣ ನಿರ್ಲಕ್ಷ್ಯದ ಬಗ್ಗೆ ಗಂಭೀರ ಆತಂಕವನ್ನು ವ್ಯಕ್ತಪಡಿಸಿತು. ಈ ಬಗ್ಗೆ ಒಂದು ಪ್ರತ್ಯೇಕ ನಿರ್ಣಯವನ್ನು ಅಂಗೀಕರಿಸಿ, ಅದರಲ್ಲಿ 2016ರ 'ಬರ ನಿರ್ವಹಣೆ ಕೈಪಿಡಿ'ಯನ್ನು ರದ್ದು ಮಾಡಬೇಕು ಎಂದು ಕರೆ ನೀಡಿದೆ. ಏಕೆಂದರೆ ಇದು ಬರಗಾಲದಲ್ಲಿ ಕೇಂದ್ರ ಸರಕಾರಕ್ಕೆ ಸುಮಾರಾಗಿ ಯಾವ ಹೊಣೆಯೂ ಇಲ್ಲ ಎಂಬಂತೆಯೇ ಬಿಂಬಿಸಿದೆ. ಈ

ಪುಟ 10 ನೋಡಿ

ಸಂಪಾದಕೀಯ

ಕಗ್ಗಂಟಾಗುತ್ತಿರುವ ಅತೃಪ್ತರ ಪ್ರಹಸನ

ಬಿಜೆಪಿಯ ಪರೋಕ್ಷ ಬೆಂಬಲದೊಂದಿಗೆ ತಮ್ಮ ಸ್ವಂತ ಪಕ್ಷಗಳ ಸಮ್ಮಿಶ್ರ ಸರ್ಕಾರವನ್ನು ಉರುಳಿಸುವ ಉದ್ದೇಶದಿಂದ ಬಂಡೆದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರ ಪ್ರಹಸನ ಒಂದು ಕಾನೂನಾತ್ಮಕವಾದ ಕಗ್ಗಂಟಾಗುತ್ತಿರುವುದು ಇಡೀ ದೇಶದ ಗಮನ ಸೆಳೆಯುತ್ತಿದೆ. ಹದಿನೈದು ಜನ ಬಂಡಾಯ ಶಾಸಕರು 'ತಾವು ಶಾಸಕ ಸ್ಥಾನಗಳಿಗೆ ನೀಡಿದ ರಾಜೀನಾಮೆಯನ್ನು ಶೀಘ್ರ ಇತ್ಯರ್ಥ ಮಾಡಲು ಸಭಾಧ್ಯಕ್ಷರಿಗೆ ನಿರ್ದೇಶನ ನೀಡಿ' ಎಂದು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಅರ್ಜಿಯ ವಿಚಾರಣೆ ನಡೆಸಿದ ತ್ರಿಸದಸ್ಯ ಪೀಠವು 'ಸಭಾಧ್ಯಕ್ಷರಿಗೆ ಯಾವುದೇ ನಿರ್ದೇಶನ ನೀಡಲು ಸಾಧ್ಯವಿಲ್ಲ. ರಾಜೀನಾಮೆಗಳ ಕುರಿತು ಸಭಾಧ್ಯಕ್ಷರು ತಮ್ಮದೇ ಕಾಲಮಿತಿಯಲ್ಲಿ ನಿರ್ಧಾರ ಕೈಗೊಳ್ಳಲು ಸ್ವತಂತ್ರರು ಎಂದು ಮಧ್ಯಂತರ ತೀರ್ಪು ನೀಡಿದೆ. ತೀರ್ಪಿನ ಈ ಭಾಗ ಮತ್ತೊಮ್ಮೆ ಇಡೀ ದೇಶಕ್ಕೆ ಅನ್ವಯವಾಗುವಂತೆ ಸಭಾಧ್ಯಕ್ಷರ ಸಂವಿಧಾನಾತ್ಮಕವಾದ ಪರಮಾಧಿಕಾರವನ್ನು ಎತ್ತಿಹಿಡಿದಿದೆ. ಸಭಾಧ್ಯಕ್ಷರ ನಿರ್ಧಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಎಂದು ಇದರ ಅರ್ಥವಲ್ಲ. ಸಭಾಧ್ಯಕ್ಷರಿಗೆ ತಮ್ಮ ಕರ್ತವ್ಯವನ್ನು ಮುಕ್ತವಾಗಿ, ಸ್ವತಂತ್ರವಾಗಿ ನಿರ್ವಹಿಸುವ ಅಧಿಕಾರ ಇದೆ ಎಂದು ಇದರ ಅರ್ಥವಾಗುತ್ತದೆ. ಇದನ್ನು ಬಹುತೇಕವಾಗಿ ಎಲ್ಲರೂ ಸ್ವಾಗತಿಸಿದ್ದಾರೆ.

ಆದರೆ ತೀರ್ಪಿನ ಇನ್ನೊಂದು ಭಾಗ ವಿವಾದಾಸ್ಪದವಾಗಿದೆ. 'ರಾಜೀನಾಮೆ ನೀಡಿದ 15 ಜನ ಶಾಸಕರು ಸದ್ಯದ ಅಧಿವೇಶನದ ಕಲಾಪಗಳಲ್ಲಿ ಭಾಗವಹಿಸಲೂ ಬಹುದು, ಭಾಗವಹಿಸದೆ ಇರಬಹುದು' ಎಂದು ಮಧ್ಯಂತರ ತೀರ್ಪು ಹೇಳಿದೆ. ಇದು ಮಧ್ಯಂತರ ತೀರ್ಪು ಆಗಿದ್ದು ಅದು ಬದಲಾಗಬಹುದು. ಆದರೆ ತೀರ್ಪಿನ ಈ ಭಾಗ ಬಂಡುಕೋರ ಶಾಸಕರಿಗೆ ಮತ್ತು ಅವರ ಬೆಂಬಲಕ್ಕೆ ನಿಂತಿರುವ ಬಿಜೆಪಿಗೆ ನೈತಿಕ ಗೆಲುವು ತಂದುಕೊಟ್ಟಿದೆ ಎಂದು ವಾದಿಸಲಾಗುತ್ತದೆ. ಶಾಸಕರು ಅಧಿವೇಶನದಲ್ಲಿ ಭಾಗವಹಿಸುವಂತೆ ಹಾಗೂ ನಿರ್ದಿಷ್ಟವಾಗಿ ಮತ ನೀಡುವಂತೆ ಒಂದು ರಾಜಕೀಯ ಪಕ್ಷ ತನ್ನ ಶಾಸಕರಿಗೆ ಒತ್ತಾಯ ಮಾಡುವಂತಿಲ್ಲ ಎಂದು ತೀರ್ಪು ಹೇಳಿದೆ ಎಂದು ಚರ್ಚೆ ನಡೆಯುತ್ತಿದೆ.

ಗುರುವಾರದ ಅಧಿವೇಶನದಲ್ಲಿ ಮುಖ್ಯ ಮಂತ್ರಿ ಕುಮಾರಸ್ವಾಮಿ ಅವರು ತಮ್ಮ ಬಹುಮತವನ್ನು ಸಾಬೀತುಪಡಿಸಲು ಭಾಷಣವನ್ನು ಆರಂಭಿಸಿದಾಗ ಕಾಂಗ್ರೆಸ್ ಶಾಸಕಾಂಗ ಪಕ್ಷದ ಮುಖಂಡರಾದ ಸಿದ್ದಾರಾಮಯ್ಯರವರು ಕ್ರಿಯಾ ಲೋಪವನ್ನು ಎತ್ತಿ ಸಭಾಧ್ಯಕ್ಷರ ಅನುಮತಿ ಪಡೆದು ಸುಪ್ರೀಂ ಕೋರ್ಟಿನ ಮಧ್ಯಂತರ ತೀರ್ಪು ಕಾಂಗ್ರೆಸ್ ಪಕ್ಷಕ್ಕೆ ಭಾರೀ ಅನ್ಯಾಯ ಮಾಡಿದಂತಾಗಿದೆ. ಪಕ್ಷದ ಶಾಸಕರಿಗೆ ವಿಪ್ ನೀಡುವುದು ರಾಜಕೀಯ ಪಕ್ಷಗಳ ಹಕ್ಕು. ಇದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ, ಎಲ್ಲಾ ಪಕ್ಷಗಳಿಗೂ ಅತ್ಯಗತ್ಯವಾದ ಹಕ್ಕು. ಆದರೆ ಗಮನಿಸಬೇಕಾದ ವಿಷಯ ಏನೆಂದರೆ, ಸುಪ್ರೀಂ ಕೋರ್ಟ್ ತನ್ನ ಮಧ್ಯಂತರ ಆದೇಶದಲ್ಲಿ, ರಾಜಕೀಯ ಪಕ್ಷ ವಿಪ್ ನೀಡಬಾರದು ಎಂದು ಹೇಳಿಲ್ಲ. ವಿಪ್ ನೀಡುವುದು, ಬಿಡುವುದು ಆಯಾ ರಾಜಕೀಯ ಪಕ್ಷಕ್ಕೆ ಬಿಟ್ಟ ವಿಚಾರ ಎಂದು ಸಭಾಧ್ಯಕ್ಷರು ಸರಿಯಾಗಿಯೇ ವಿವರಣೆ ನೀಡಿದ್ದಾರೆ. ಒಂದು ರಾಜಕೀಯ ಪಕ್ಷಕ್ಕೆ ತನ್ನ ಶಾಸಕರನ್ನು ನಿಯಂತ್ರಿಸಲು ಯಾವುದೇ ಅಸ್ತ್ರ ಇಲ್ಲದೆ ಇದ್ದರೆ ಅದು ಅರಾಜಕತೆಗೆ ದಾರಿ ಮಾಡುತ್ತದೆ. ಯಾವುದೇ ಸರ್ಕಾರ ಸಂವಿಧಾನಾತ್ಮಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದಿಲ್ಲ.

ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ತಮ್ಮ ಅತೃಪ್ತ ಶಾಸಕರಿಗೆ ವಿಪ್ ನೀಡಿವೆ. ಆದರೆ ಅವರಲ್ಲಿ ಅನೇಕ ಮಂದಿ ಅಧಿವೇಶನಕ್ಕೆ ಗೈರು ಹಾಜರಾಗಿದ್ದಾರೆ. ಮೈತ್ರಿ ಸರ್ಕಾರದ ವಿಶ್ವಾಸ ಮತಯಾಚನೆ ಪರವಾಗಿ ಮತ ಹಾಕಲು ಅವರು ಉಪಸ್ಥಿತರಿಲ್ಲ. ಅವರ ವಿರುದ್ಧ ಕ್ರಮ ಜರಗಿಸಬೇಕು. ಸಭಾಧ್ಯಕ್ಷರರು ಈ ಬೆಳವಣಿಗೆಯನ್ನು ಗಣನೆಗೆ ತೆಗೆದುಕೊಳ್ಳಬೇಕು. ಅತೃಪ್ತರ ವಿರುದ್ಧ ಕಾನೂನು ಪ್ರಕಾರ ಕ್ರಮ ಜರಗಿಸಬೇಕೆಂದು ಮಾತನಾಡಿದ ಎಚ್.ಕೆ. ಪಾಟೀಲ್, ಕೃಷ್ಣ ಬೈರೇಗೌಡ, ದೇಶ್‌ಪಾಂಡೆ, ದಿನೇಶ್ ಗುಂಡುರಾವ್ ಮೊದಲಾದವರು ಸಿದ್ದಾರಾಮಯ್ಯನವರನ್ನು ಬೆಂಬಲಿಸಿ ಮಾತನಾಡಿದರು. ಬಿಜೆಪಿ ಪರವಾಗಿ ಯಡಿಯೂರಪ್ಪ ಜಗದೀಶ್ ಶೆಟ್ಟರ್, ಮಧುಸ್ವಾಮಿ, ಸುರೇಶ್ ಕುಮಾರ್ ಮೊದಲಾದವರು ಕಾಂಗ್ರೆಸ್ ನಿಲುಮೆಯನ್ನು ವಿರೋಧಿಸಿ ಮಾತನಾಡಿದರಲ್ಲದೆ ಮುಖ್ಯಮಂತ್ರಿಯವರ ವಿಶ್ವಾಸಮತ ಯಾಚನೆಯ ಮೇಲಿನ ತೀರ್ಮಾನಕ್ಕೆ ಒತ್ತಾಯಿಸಿದರು. ನಂತರ ಸದನದಲ್ಲಿ ಉಂಟಾದ ಗದ್ದಲದ ಕಾರಣಕ್ಕಾಗಿ ಅದಿವೇಶನವನ್ನು ಮರುದಿನಕ್ಕೆ ಮುಂದೂಡಲಾಯಿತು. ಮುಂದಿನ ಬೆಳವಣಿಗೆಗಳು ಕುತೂಹಲಕಾರಿಯಾಗಿದ್ದು ಕಾನೂನು ಪಂಡಿತರ ಜಿಜ್ಞಾಸೆಗೆ ಕಾರಣವಾಗಿದೆ. ■

ರಾಜ್ಯಪಾಲರು ಹಾಗೂ ರಾಜ್ಯಪಾಲರ ಕಛೇರಿಯ ದುರುಪಯೋಗ – ಸಿಪಿಐಎಂ ಖಂಡನೆ

ದಿನಾಂಕ: 19 ಜುಲೈ 2019 ರ ಪತ್ರಿಕಾ ಹೇಳಿಕೆ

ರಾಜ್ಯದಲ್ಲಿ ಮೈತ್ರಿ ಸರಕಾರವನ್ನು ಆಪರೇಷನ್ ಕಮಲದ ಮೂಲಕ ಬೀಳಿಸಿ ಅಧಿಕಾರವನ್ನು ಹಿಡಿಯುವ ಬಿಜೆಪಿಯ ತೀವ್ರ ಅಧಿಕಾರದಾಹಿ ಹಾಗೂ ಪ್ರಜಾತಂತ್ರ ವಿರೋಧಿ ಪ್ರಯತ್ನದ ಭಾಗವಾಗಿ ಮಗದೊಮ್ಮೆ ಬಿಜೆಪಿ, ಯುನಿಯನ್ ಸರಕಾರದ ಅಧಿಕಾರವನ್ನು ಮತ್ತು ರಾಜ್ಯಪಾಲರ ಕಛೇರಿಯನ್ನು ದುರುಪಯೋಗಪಡಿಸಿಕೊಂಡು ರಾಜ್ಯ ಸರಕಾರವನ್ನ ಉರುಳಿಸುವ ಕ್ರಮವನ್ನು ಸಿಪಿಐಎಂ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ.

ಬಿಜೆಪಿ ಈ ಹಿಂದೆ ವಿಧಾನ ಸಭಾ ಚುನಾವಣೆಯಾದ ತಕ್ಷಣವೇ ತನಗೆ ಬಹುಮತವಿಲ್ಲದಿದ್ದರೂ ಮತ್ತು ಅದನ್ನು ಸಾಬೀತುಪಡಿಸಲು ಸಾಧ್ಯವಿಲ್ಲವೆಂದು ಗೊತ್ತಿದ್ದರೂ ಆಪರೇಷನ್ ಕಮಲವೆಂಬ ನಿರ್ಲಜ್ಜ ಭ್ರಷ್ಟತೆಯ ಮೂಲಕ ವಿಶ್ವಾಸ ಮತಗಳಿಸಲು ನಡೆಸಿದ ವಿಫಲ ಯತ್ನದ ಸಂದರ್ಭದಲ್ಲೂ, ಇದೇ ರೀತಿ, ಕೇಂದ್ರ ಸರಕಾರದ ಹಾಗೂ ರಾಜ್ಯಪಾಲರ ಕಛೇರಿಯನ್ನು ದುರುಪಯೋಗ ಪಡಿಸಿಕೊಂಡದ್ದನ್ನು ರಾಜ್ಯದ ಹಾಗೂ ದೇಶದ ನಾಗರೀಕರು ಗಮನಿಸಿದ್ದರೆಂಬುದನ್ನು ಇಲ್ಲಿ ನೆನಪಿಸಬಹುದಾಗಿದೆ.

ಸದನದಲ್ಲಿ ಮುಖ್ಯಮಂತ್ರಿಯವರು ವಿಶ್ವಾಸ ಮತ ಯಾಚನೆಯನ್ನು ಅದಾಗಲೇ, ನಡೆಸಿರುವಾಗ ರಾಜ್ಯಪಾಲರ ಮೂಲಕ ಈ ದಿನ ಮದ್ಯಾಹ್ನ ಒಂದೂವರೆ ಘಂಟೆಯೊಳಗೆ ಆ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಬೇಕೆಂದು ತಾಕೀತು ಮಾಡಿ ಸರಕಾರವನ್ನು ಕಿತ್ತು ಹಾಕುವ ಯತ್ನ ಮಾಡುತ್ತಿದ್ದೆಯೆಂಬುದನ್ನು ರಾಜ್ಯದ ಜನತೆ ಗಮನಿಸಬೇಕೆಂದು ಮತ್ತು ಜನ ಹಾಗೂ ಪ್ರಜಾಪ್ರಭುತ್ವ ವಿರೋಧಿ ಬಿಜೆಪಿಗೆ ಸರಿಯಾದ ಪಾಠ ಕಲಿಸಬೇಕೆಂದು ಮನವಿ ಮಾಡಿದೆ.

ಬಿಜೆಪಿ ಮತ್ತು ಕೇಂದ್ರ ಸರಕಾರ ತಕ್ಷಣವೇ ಇಂತಹ ಪ್ರಜಾಪ್ರಭುತ್ವ ವಿರೋಧಿ ಕೆಲಸಗಳನ್ನು ನಿಲ್ಲಿಸಬೇಕೆಂದು ಸಿಪಿಐಎಂ ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸುತ್ತದೆ.

ಸದನವು ಸಾಕಷ್ಟು ಮಹತ್ವದ ವಿಷಯಗಳನ್ನು ಗಂಭೀರವಾಗಿ ಚರ್ಚಿಸುತ್ತಿರುವಾಗ ಮತ್ತು ಮುಖ್ಯವಾಗಿ, ಕ್ರಿಯಾಲೋಪದ ಪ್ರಶ್ನೆಯ ಹಿನ್ನೆಲೆಯಲ್ಲಿ ರಾಜಕೀಯ ಪಕ್ಷಗಳ ವಿಪ್ ವಿಚಾರಕ್ಕೆ ಸಂಬಂಧಿಸಿ ಮಾನ್ಯ ಸ್ಪೀಕರ್ ತಮ್ಮ ರೂಲಿಂಗ್ ನೀಡಬೇಕಿರುವಾಗಲೇ, ಮುಖ್ಯಮಂತ್ರಿಗಳಿಗೆ ಈ ರೀತಿಯ ಸೂಚನೆಯನ್ನು ರಾಜ್ಯಪಾಲರು ನೀಡುತ್ತಾರೆ. ಇದು ಸದನದ ಸದಸ್ಯರ ಚರ್ಚಿಸುವ ಹಕ್ಕಿನ ಮೇಲಿನ ದಮನವು ಆಗಿದೆ. ಸದನವನ್ನು ನಡೆಸುವ ಸ್ಪೀಕರ ರವರ ಕೈಗೊಳ್ಳಬೇಕಾದ ನಿಯಮಾವಳಿಗಳ ಉಲ್ಲಂಘನೆಗೆ ಅವಕಾಶ ನೀಡಲಿದೆ.

ರಾಜ್ಯಪಾಲರು ಮುಂದುವರೆದು ತನ್ನ ಆದೇಶವನ್ನು ಮುಖ್ಯಮಂತ್ರಿಗಳು ಪಾಲಿಸಲಿಲ್ಲವೆಂಬ ನೆಪವನ್ನು ಮುಂದೆ ಮಾಡಿ, ತಕ್ಷಣವೇ ಕೇಂದ್ರ ಸರಕಾರಕ್ಕೆ ವರದಿ ಕಳುಹಿಸಿರುವುದನ್ನು ಗಮನಿಸಿದರೂ, ಇದು ಬಿಜೆಪಿಯ, ವಿರೋದಿ ಮುಕ್ತ ಭಾರತ ನಿರ್ಮಿಸುವುದರ ಭಾಗವಾಗಿದೆಯೆಂಬುದು ಸ್ಪಷ್ಟವಾಗುತ್ತದೆ.

ಈ ಹಿಂದೆ ಬಹುಮತವಿಲ್ಲದ ಬಿಜೆಪಿಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಬಹುಮತ ಸಾಬೀತು ಪಡಿಸಲು ಅವರು ಒಂದು ವಾರ ಸಮಯ ಕೋರಿದ್ದರೆ, ಇದೇ ರಾಜ್ಯಪಾಲರು 15 ದಿನಗಳ ಸಮಯಾವಕಾಶ ನೀಡಿದ್ದರು.

ಈಗ ನೋಡಿದರೇ ಪದೇ ಪದೇ ಕೆಲವೇ ಘಂಟೆಗಳ ಗಡುವಿನ ಆದೇಶ ನೀಡುತ್ತಿದ್ದಾರೆ. ಈ ತಾರತಮ್ಯವು ಬಹಳ ಸ್ಪಷ್ಟವಾಗಿ ರಾಜ್ಯಪಾಲರ ಕಛೇರಿಯನ್ನು ಬಿಜೆಪಿ ದುರುಪಯೋಗ ಮಾಡುತ್ತಿರುವುದನ್ನು ಸಾಬೀತು ಪಡಿಸುತ್ತದೆ.

ರಾಜ್ಯವು ಭೀಕರ ಬರಗಾಲವನ್ನೆದುರಿಸುತ್ತಿರುವಾಗ ಮತ್ತು ರೈತರ ಆತ್ಮಹತ್ಯೆಗಳು ಬೆಳೆಯುತ್ತಿರುವಾಗ, ಬೆಲೆ ಏರಿಕೆಗಳ ಮತ್ತಷ್ಟು ದಾಳಿಗಳು ಸಂಕಷ್ಟದಲ್ಲಿರುವ ಜನಗಳ ಮೇಲೆ ಮುಂದುವರೆದಿರುವಾಗ, ಜನಪ್ರತಿನಿಧಿಗಳಾದ ರಾಜ್ಯದ ಶಾಸಕರು ಮತ್ತು ವಿರೋಧ ಪಕ್ಷವಾದ ಬಿಜೆಪಿ, ವಿಧಾನಸಭಾ ಅಧಿವೇಶನದಲ್ಲಿ ರಚನಾತ್ಮಕ ಚರ್ಚೆಯಲ್ಲಿ ತೊಡಗಿ ಜನತೆಗೆ ಸರಿಯಾದ ಪರಿಹಾರ ಹುಡುಕಬೇಕಾದ ಈ ಸಂದರ್ಭದಲ್ಲಿ, ಜನಪರವಾದ ಈ ಕೆಲಸವನ್ನು ತೀವ್ರವಾಗಿ ಕಡೆಗಣಿಸಿ, ಕೇವಲ ಅಧಿಕಾರದಾಹಿ ಮನೋಭಾವದಿಂದ ಮೈತ್ರಿ ಸರಕಾರವನ್ನ ಅಸ್ಥಿರಗೊಳಿಸುವ ಬೆಳವಣಿಗೆ ತೀವ್ರ ನಾಚಿಕೆಗೇಡಿನದಾಗಿದೆಯೆಂದು ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿ ಬಲವಾಗಿ ಪ್ರತಿರೋಧಿಸಿದೆ.

ಯು. ಬಸವರಾಜ
ಕಾರ್ಯದರ್ಶಿ

ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ಹೆಚ್ಚಿನ ಏಜೆನ್ಸಿ ಬಾಕಿ ಹಣವನ್ನು ಉಳಿಸಿಕೊಂಡಿರುವವರು ತಕ್ಷಣವೇ ಬಾಕಿಯನ್ನು ಪಾವತಿ ಮಾಡದಿದ್ದರೆ ಪ್ರತಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣವನ್ನು ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಿ ಚಂದಾಗಳನ್ನು ನವೀಕರಿಸಬೇಕೆಂದು ಕೋರುತ್ತೇವೆ.

–ಸಂಪಾದಕರು

ಗುಂಪು ಹಿಂಸೆ ಮತ್ತು ಹತ್ಯೆಗಳನ್ನು ವಿರೋಧಿಸಿ ಉಡುಪಿಯಲ್ಲಿ ಪ್ರತಿಭಟನೆ

ವರದಿ: ವಾ.ಉ.

ದಲಿತ ಹಿಂದುಳಿದ ಅಲ್ಪಸಂಖ್ಯಾತ ಪ್ರಗತಿಪರ ಸಂಘಟನೆಗಳ ಒಕ್ಕೂಟ ಉಡುಪಿ ಇದರ ನೇತೃತ್ವದಲ್ಲಿ ಗುಂಪು ಹಿಂಸೆ ಹಾಗೂ ಹತ್ಯೆಗಳನ್ನು ವಿರೋಧಿಸಿ ಜುಲಾಯಿ 12 ರಂದು ಉಡುಪಿಯ ಅಜ್ಜರಕಾಡು ಹುತಾತ್ಮ ಸ್ಮಾರಕದ ಬಳಿ ಪ್ರತಿಭಟನಾ ಸಭೆ ನಡೆಯಿತು.

ಹಿರಿಯ ಚಿಂತಕ ಪ್ರೊ. ಕೆ. ಫಣಿರಾಜ್ ಮಾತನಾಡಿ, ದೇಶದಲ್ಲಿ ನಡೆಯುತ್ತಿರುವ ಗುಂಪು ಹತ್ಯೆಯನ್ನು ಕೇವಲ ಅಪರಾಧವಾಗಿ ನೋಡದೆ, ಅದನ್ನು ಸಂವಿಧಾನ ಮತ್ತು ಅದರ 15ನೇ ಪರಿಚ್ಛೇದವನ್ನು ಬುಡಮೇಲು ಮಾಡುವ ಕೃತ್ಯವಾಗಿ ನೋಡಬೇಕಾಗಿದೆ. ಗುಂಪು ಹತ್ಯೆಗಳು ಸಂವಿಧಾನ ಮತ್ತು ಸಮಾನತೆಯನ್ನು ಬುಡಮೇಲು ಮಾಡುವ ಷಡ್ಯಂತ್ರದ ಒಂದು ಭಾಗವಾಗಿದೆ. ಈ ರೀತಿಯ ಸಂವಿಧಾನ ವಿರೋಧಿ ಗುಂಪು ಹತ್ಯೆಗಳಿಗೆ 1990ರ ಹಿಂದುತ್ವ ಮತ್ತು ಕೋಮುವಾದಿ ರಾಜಕೀಯವೇ ಕಾರಣ. ದೇಶದಲ್ಲಿರುವ ಸಂವಿಧಾನವನ್ನು ನಿಷ್ಕ್ರಿಯಗೊಳಿಸುವುದೇ ಈ ರಾಜಕೀಯದ ಉದ್ದೇಶವಾಗಿದೆ ಎಂದು ಹೇಳಿದರು.

ಪ್ರತಿಭಟನಾ ಪ್ರದರ್ಶನದಲ್ಲಿ ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಮುಖಂಡರಾದ ಪಿ.ವಿಶ್ವನಾಥ ರೈ, ಶಶಿಧರ ಗೊಲ್ಲ, ಕವಿರಾಜ್, ದಲಿತ ದಮನಿತರ ಸ್ವಾಭಿಮಾನ ಸಮಿತಿಯ ಮುಖಂಡರು, ದಸಂಸ ಜೆಡಿ(ಎಸ್) ಮುಖಂಡರು, ಮುಸ್ಲಿಂ ಕ್ರೈಸ್ತ ಒಕ್ಕೂಟಗಳ ಮುಖಂಡರು ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಉಡುಪಿಯ ಸರ್ವಿಸ್ ಬಸ್‌ನಿಲ್ದಾಣದಿಂದ ಅಜ್ಜರಕಾಡು ಹುತಾತ್ಮ ಸ್ಮಾರಕದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗಿತ್ತು.

ಹಮಾಲಿ ಕಾರ್ಮಿಕರಿಂದ ಮಂಗಳೂರು ಎಪಿಎಂಸಿ ಚಲೋ:

ಬೈಕಂಪಾಡಿ ಎಪಿಎಂಸಿ ಕಚೇರಿ ಎದುರು ಹಳೆ ಬಂದರು ಸಗಟು ಮಾರುಕಟ್ಟೆಯ ಹಮಾಲಿ ಕಾರ್ಮಿಕರ ಸಂಘಟನೆಯಾದ ಬಂದರು ಶ್ರಮಿಕ ಸಂಘ (ಸಿಐಟಿಯು) ನೇತೃತ್ವದಲ್ಲಿ ಬಂದರು ಸಗಟು ಮಾರುಕಟ್ಟೆಯ ಎಲ್ಲಾ ಹಮಾಲರಿಗೆ ಎಪಿಎಂಸಿ ಪರವಾನಿಗೆ ನೀಡಲು ಒತ್ತಾಯಿಸಿ ಹಾಗೂ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜುಲಾಯಿ 12 ಎಂದು ಎಪಿಎಂಸಿ ಚಲೋ ಭಾಗವಾಗಿ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಧರಣಿಯನ್ನುದ್ದೇಶಿಸಿ ಮಾತನಾಡಿದ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ಅಧ್ಯಕ್ಷ ಕೆ.ಮಹಾಂತೇಶ್ ಮಾತನಾಡಿ, ಕೃಷಿ ಮಾರಾಟ ಮಂಡಳಿ ಮತ್ತು ಇಲಾಖೆಯಲ್ಲಿ ಜಾರಿ ಮಾಡಲಾದ ಯಾವುದೇ ಯೋಜನೆಗಳು ಮಂಗಳೂರಿನ ಹಮಾಲಿಗಳಿಗೆ ಸಿಗುತ್ತಿಲ್ಲ. ಆಡಳಿತ ಮಂಡಳಿಯ ಇಚ್ಛಾಶಕ್ತಿಯ ಕೊರತೆ ಮತ್ತು ಸಿಬ್ಬಂದಿ ಕೊರತೆ ಇದಕ್ಕೆ ಕಾರಣ ಎಂದು ಟೀಕಿಸಿದರು.

ಮಂಗಳೂರು ಎಪಿಎಂಸಿ ಮಾರುಕಟ್ಟೆಯು ಮಂಗಳೂರು ಪ್ರಧಾನ ಮಾರುಕಟ್ಟೆಯ ಉಪ ಮಾರುಕಟ್ಟೆ ಎಂದು ಕರ್ನಾಟಕ ರಾಜ್ಯ ಹೈಕೋರ್ಟು 8 ವರ್ಷಗಳ ಹಿಂದೆ ತೀರ್ಪು ನೀಡಿದೆ. ಆದರೂ ಇದುವರೆಗೂ ಹಮಾಲಿ ಪರವಾನಿಗೆಯನ್ನು ಸಮರ್ಪಕವಾಗಿ ನೀಡಿಲ್ಲ. ಪರವಾನಿಗೆ ಇಲ್ಲದಿದ್ದರೆ ಹಮಾಲಿಗಳಿಗೆ ಯಾವುದೇ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿಲ್ಲ. 1000ಕ್ಕೂ ಮೀರಿ ವರ್ತಕರು ಮಂಗಳೂರು ಎಪಿಎಂಸಿ ಮಾರುಕಟ್ಟೆಯಲ್ಲಿದ್ದರೂ, ಕೇವಲ 83 ಮಂದಿಗೆ ಮಾತ್ರ ಹಮಾಲಿ ಪರವಾನಿಗೆ ಇದೆ. ಅವರ ಪರವಾನಿಗೆ ನವೀಕರಿಸುವಾಗಲೂ ಸತಾಯಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಟೀಕಿಸಿದರು.

ಬಂದರು ಶ್ರಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್, ಅಧ್ಯಕ್ಷ ಪಿ.ಎಸ್.ವಿಲ್ಲಿ ವಿಲ್ಸನ್ ಮಾತನಾಡಿದರು. ಸತ್ಯಾಗ್ರಹಿಗಳ ಒತ್ತಾಯಕ್ಕೆ ಮಣಿದು, ಮಂಡಳಿ ಅಧ್ಯಕ್ಷರು ಧರಣಿ ನಿರತರ ಸ್ಥಳಕ್ಕೆ ಬಂದು ಮನವಿಯನ್ನು ಸ್ವೀಕರಿಸಿದರು. ಬಂದರು ಶ್ರಮಿಕರ ಸಂಘದ ಮುಖಂಡರು ಧರಣಿಯಲ್ಲಿ ಭಾಗವಹಿಸಿದ್ದರು.

ಮಂಗಳೂರಿನಲ್ಲಿ ಶಾಲಾ ವಾಹನ ಚಾಲಕರ ಮುಷ್ಕರ:

ಇತ್ತೀಚೆಗೆ ರಾಜ್ಯದ ಉಚ್ಚ ನ್ಯಾಯಾಲಯವು ಶಾಲಾ ಮಕ್ಕಳನ್ನು ಸಾಗಿಸುವಂತಹ ವಾಹನಗಳಲ್ಲಿ ಮಿತಿಗಿಂತ ಜಾಸ್ತಿ ಮಕ್ಕಳನ್ನು ಸಾಗಾಟ ಮಾಡಬಾರದೆಂದು ನಿರ್ದೇಶಿಸಿದೆ. ಇದನ್ನು ಜಾರಿಗೊಳಿಸುವ ನೆಪದಲ್ಲಿ ಮಂಗಳೂರಿನಲ್ಲಿ ಪೊಲೀಸ್ ಇಲಾಖೆ ಶಾಲಾ ಮಕ್ಕಳನ್ನು ಸಾಗಿಸುವ ವಾಹನಗಳನ್ನೇ ಕೇಂದ್ರೀಕರಿಸಿ ಕಳೆದ ಒಂದು ತಿಂಗಳಿನಿಂದ ನಿರಂತರ ಕೇಸ್ ಹಾಗೂ ವಿಪರೀತ ದಂಡ ವಸೂಲಿ ಮಾಡಲಾಗುತ್ತಿದ್ದು, ಇದರ ಶಾಲಾ ವಾಹನ ಚಾಲಕರು ಭೀತಿಗೊಳಗಾಗಿದ್ದರು.


ಇದನ್ನು ವಿರೋಧಿಸಿ ದ.ಕ.ಜಿಲ್ಲಾ ಶಾಲಾ ಮಕ್ಕಳ ವಾಹನ ಚಾಲಕರ ಸಂಘ ಸ್ವಯಂಪ್ರೇರಿತ ಅನಿರ್ದಿಷ್ಟಾವಧಿ ಬಂದ್‌ಗೆ ಕರೆ ನೀಡಿತ್ತು. ಜುಲಾಯಿ 10 ಮತ್ತು 11 ರಂದು 2 ದಿನಗಳ ಮುಷ್ಕರ ನಡೆದಾಗ ಮಕ್ಕಳ ಹೆತ್ತವರು ಮಕ್ಕಳನ್ನು ಶಾಲೆಗೆ ಸಕಾಲಕ್ಕೆ ತಲುಪಿಸಲು ಕಷ್ಟಪಡಬೇಕಾಯಿತು. ಮುಷ್ಕರಕ್ಕೆ ಸಂಘದ ಗೌರವಾಧ್ಯಕ್ಷ ಸಿಐಟಿಯು ದ.ಕ.ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ನೇತೃತ್ವ ನೀಡಿದ್ದರು.

ಮಕ್ಕಳ ಪೋಷಕರು ಶಾಸಕರ ಮೇಲೆ ಒತ್ತಡ ಹಾಕಿದ ಪರಿಣಾಮವಾಗಿ ಮಂಗಳೂರು ನಗರ ದಕ್ಷಿಣ ಶಾಸಕರು ಸಂಘದ ಮುಖಂಡರೊಡನೆ ಮಾತುಕತೆ ನಡೆಸಿ ಮುಷ್ಕರ ಹಿಂತೆಗೆದುಕೊಳ್ಳಲು ವಿನಂತಿಸಿದರು. ಅದರಂತೆ ಸಂಘವು ಮುಷ್ಕರವನ್ನು ಹಿಂದೆಗೆದಿದ್ದು ಜುಲಾಯಿ 13 ರಿಂದ ಶಾಲಾ ಮಕ್ಕಳ ವಾಹನ ಸಂಚಾರ ಮರು ಪ್ರಾರಂಭವಾಗಿದೆ.

ಕೆ.ಆರ್. ಶ್ರೀಯಾನ್ ಅವರಿಗೆ ಪುತ್ರ ವಿಯೋಗ:

ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡರಲ್ಲೊಬ್ಬರಾದ ಕೆ.ಆರ್.ಶ್ರೀಯಾನ್ ಅವರ ಹಿರಿಯ ಪುತ್ರ ವಿನೋದ್ ಕುಮಾರ್ ಜುಲಾಯಿ 11 ರಂದು ಮಂಗಳೂರು ಕೊಂಚಾಡಿಯ ಮನೆಯಲ್ಲಿ ನಿಧನ ಹೊಂದಿದರು. ಕಳೆದೆರಡು ವರ್ಷಗಳಿಂದ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು.

ಮೃತರಿಗೆ 48 ವರ್ಷ ವಯಸ್ಸಾಗಿತ್ತು. ಅವರು ತಂದೆ ಪತ್ನಿ, ಇಬ್ಬರು ಸಹೋದರರು ಹಾಗೂ ಸೋದರಿ ಮತ್ತು ಕುಟುಂಬಸ್ಥರನ್ನು ಅಗಲಿದ್ದಾರೆ. ಪಕ್ಷದ ದ.ಕ. ಜಿಲ್ಲಾ ಸಮಿತಿ ಸಂತಾಪ ವ್ಯಕ್ತಪಡಿಸಿದೆ.



ಉರ್ವಸ್ಟೋರ್ ಘಟಕದಿಂದ ರಕ್ತದಾನ ಶಿಬಿರ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್ಐ) ಉರ್ವಸ್ಟೋರ್ ಘಟಕದ ನೇತೃತ್ವದಲ್ಲಿ ಅಶೋಕನಗರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿ| ಹರೀಶ್ಚಂದ್ರ ರಾವ್ ಸ್ಮರಣಾರ್ಥ (ನಿವೃತ್ತ ಟೆಲಿಕಾಂ ಅಧಿಕಾರಿ) ರಕ್ತದಾನ ಶಿಬಿರ ತಾ. 14–07–2019 ರಂದು ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿವೈಎಫ್ಐ ಉರ್ವಸ್ಟೋರ್ ಘಟಕದ ಅಧ್ಯಕ್ಷರಾದ ಇಕ್ಬಾಲ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಜಿಲ್ಲಾ ಕಾರ್ಯದರ್ಶಿಯಾದ ಸಂತೋಷ್ ಬಜಾಲ್, ಎ.ಜೆ ರಕ್ತನಿಧಿ ಕೇಂದ್ರದ ಮ್ಯಾನೇಜರ್ ಪಿ. ಆರ್. ಗೋಪಾಲಕೃಷ್ಣ, ದಿ| ಹರೀಶ್ಚಂದ್ರ ರಾವ್ರವರ ಪುತ್ರಿಯಾದ ಮಮತ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಮುನೀರ್ ಕಾಟಿಪಳ್ಳ ಉದ್ಘಾಟಿಸಿ ಮಾತನಾಡುತ್ತಾ, ಹಿಂದೆ ರಕ್ತದಾನ ಮಾಡಲು ಜನರು ಹಿಂಜರಿಯುತ್ತಿದ್ದ ಸಮಯದಲ್ಲಿ ಡಿವೈಎಫ್ಐ ಸಂಘಟನೆಯು ರಕ್ತದಾನ ಶಿಬಿರವನ್ನು ನಡೆಸುತ್ತಾ ಜನರಿಗೆ ರಕ್ತದಾನದ ಮಹತ್ವವನ್ನು ತಿಳಿಸುತ್ತಾ ಬಂದಿದ್ದಾರೆ. ಕಾರ್ಯಕ್ರಮದಲ್ಲಿ ಸ್ಥಳೀಯ ಡಿವೈಎಫ್ಐ ಮುಖಂಡರಾದ ಕಿಶೋರ್, ಮನೋಜ್ ಕುಲಾಲ್, ಪ್ರಶಾಂತ್ ಎಂ. ಬಿ, ನಾಗೇಂದ್ರ, ಸುಧಾಕರ್, ಸುಕೇಶ್, ಪುನೀತ್, ಸಾಗರ್, ರಕ್ಷಿತ್, ರವಿ, ರಾಜೇಶ್ ಮುಂತಾದವರು ಉಪಸ್ಥಿತರಿದ್ದರು. ಡಿವೈಎಫ್ಐ ಉರ್ವಸ್ಟೋರ್ ಘಟಕದ ಕಾರ್ಯದರ್ಶಿಯಾದ ಧನರಾಜ್ ಕಾರ್ಯಕ್ರಮ ನಿರೂಪಿಸಿದರು.

–ಧನರಾಜ್


ಸಾಮಾಜಿಕ ಸುರಕ್ಷತೆ ಹೆಸರಿನಲ್ಲಿ ಕಟ್ಟಡ ಕಾರ್ಮಿಕರಿಗೆ ಮೋದಿ ಸರ್ಕಾರದಿಂದ ಅನ್ಯಾಯ

'ಕಳೆದ ಅವಧಿಯಲ್ಲಿ ಅಧಿಕಾರದಲ್ಲಿದ್ದ ನರೇಂದ್ರ ಮೋದಿ ಸರಕಾರವು ನೋಟು ಅಮಾನ್ಯೀಕರಣ ಹಾಗೂ GST ನೀತಿಗಳನ್ನು ಜಾರಿ ಮಾಡಿ ಕೋಟ್ಯಾಂತರ ಕಟ್ಟಡ ಕಾರ್ಮಿಕರನ್ನು ನಿರುದ್ಯೋಗಿಗಳನ್ನಾಗಿಸಿದೆ. ಮಾತ್ರವಲ್ಲದೆ ದೇಶದ ಅರ್ಥ ವ್ಯವಸ್ಥೆಯೇ ವಿನಾಶದತ್ತ ಸಾಗಿದೆ. ದೇಶದ ಅಭಿವೃದ್ಧಿ ಎಂಬುದು ಪೊಳ್ಳು ಭರವಸೆಯಾಗಿದೆ. ಈ ಬಾರಿ ಮತ್ತೊಮ್ಮೆ ಅಧಿಕಾರಕ್ಕೇರಿದ ನರೇಂದ್ರ ಮೋದಿ ಸರಕಾರವು ತನ್ನ100 ದಿನಗಳ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಸುರಕ್ಷತಾ ಮಸೂದೆ 2018 ನ್ನು ಜಾರಿಗೊಳಿಸುವ ಮೂಲಕ 4 ಕೋಟಿ ಕಟ್ಟಡ ಕಾರ್ಮಿಕರು ಪಡೆಯುತ್ತಿರುವ ಹಲವಾರು ಸವಲತ್ತುಗಳನ್ನು ಕಸಿಯಲು ಹೊರಟಿದೆ. ಕಟ್ಟಡ ಕಾರ್ಮಿಕರ ಬದುಕಿಗೆ ಅನ್ಯಾಯವೆಸಗಿದ ನರೇಂದ್ರ ಮೋದಿ ಸರಕಾರದ ವಿರುದ್ಧ ಕಾರ್ಮಿಕ ವರ್ಗ ಒಂದಾಗಿ ನಿಂತು ಹೋರಾಡಬೇಕಾಗಿದೆ' ಎಂದು ಸಿಐಟಿಯು ಸಂಯೋಜಿತ ಕಟ್ಟಡ ಕಾರ್ಮಿಕರ ಸಂಘಟನೆ (CWFI) ಯ ದ.ಕ. ಜಿಲ್ಲಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ರವರು ಕರೆ ನೀಡಿದರು.

ಅವರು ಗುರುಪುರ ವಲಯದ ಮುಚ್ಚೂರು ಪ್ರದೇಶ ಮಟ್ಟದ ಕಟ್ಟಡ ಕಾರ್ಮಿಕರ ವಾರ್ಷಿಕ ಸಮಾವೇಶವನ್ನು ಉದ್ಘಾಟಿಸುತ್ತಾ, ಈ ಮಾತುಗಳನ್ನು ಹೇಳಿದರು.

ಮುಂದುವರಿಸುತ್ತಾ ಅವರು, 'ದೇಶದ ಕಾರ್ಮಿಕ ವರ್ಗ ಸ್ವಾತಂತ್ರ್ಯ ಪೂರ್ವದಿಂದಲೂ ಹೋರಾಡುತ್ತಾ ಗಳಿಸಿದ್ದ 44 ಕಾರ್ಮಿಕ ಕಾನೂನುಗಳನ್ನು ನರೇಂದ್ರ ಮೋದಿ ಸರಕಾರವು ಮಾಲಕರ ಪರವಾಗಿ ತಿದ್ದುಪಡಿ ಮಾಡುವ ಮೂಲಕ ತಾನು ಕಾರ್ಪೊರೇಟ್

➔



ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು)

ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆ

7–10 ಆಗಸ್ಟ್ 2019
ಡಾ. ಬಿ.ಆರ್. ಅಂಬೇಡ್ಕರ್ ಭವನ, ಹಾಸನ

ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಸಾರ್ವಜನಿಕ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಅಂದಿನ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಹಲವು ಮಹತ್ವದ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ದೇಶದಲ್ಲಿ ಕಾರ್ಮಿಕ ಪರವಾದ ಕಾಯ್ದೆಗಳನ್ನು ಸ್ಥಾಪಿಸಲು ಮೊದಲ ಪ್ರಯತ್ನ ಇದಾಗಿತ್ತು ಎಂದು ಹೇಳಿದರೆ ತಪ್ಪಾಗಲಾರದು ಎಂದು ಸಿಐಟಿಯುನ ರಾಜ್ಯ ಉಪಾಧ್ಯಕ್ಷರಾದ ವಿಜೆಕೆ ನಾಯರ್ ರವರು ಹೇಳಿದರು. ಹಾಸನ ನಗರದಲ್ಲಿ ಆಗಸ್ಟ್ ತಿಂಗಳ 7,8,9,10 ರಂದು ನಾಲ್ಕು ದಿನಗಳ ಕಾಲ ನಡೆಯುತ್ತಿರುವ ಸಿಐಟಿಯುನ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯ ಪೂರ್ವಭಾವಿಯಾಗಿ ಹಮ್ಮಿಕೊಂಡಿದ್ದ "ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮತ್ತು ಕಾರ್ಮಿಕ ಕಾನೂನುಗಳ ಬದಲಾವಣೆ" ಕುರಿತ ವಿಚಾರ ಸಂಕಿರಣವನ್ನು ಉದ್ಘಾಟನೆ ಮಾಡಿ ಮಾತನಾಡುತ್ತಾ ಭಾರತವು ಸ್ವಾತಂತ್ರ್ಯ ಪೂರ್ವದಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ಬೇಕಾದಂತಹ ಮತ್ತು ಅವರಿಗೆ ಅನುಕೂಲವಾಗಲು 1919 ರಲ್ಲಿ ಐ.ಎಲ್.ಓ ಸ್ಥಾಪನೆ ಮಾಡಲಾಯಿತು. ಆ ಮುಖಾಂತರ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕರನ್ನ ಕುರಿತು ಅವರಿಗೆ ಹಕ್ಕುಗಳನ್ನು ನೀಡಲು ತೀರ್ಮಾನ ಮಾಡಲಾಯಿತು. ಈ ವಿಚಾರದಲ್ಲಿ ಹೆಚ್ಚು ಶ್ರಮ ಹಾಕಿದವರಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ರವರ ಪಾತ್ರ ಬಹಳ ಮುಖ್ಯವಾಗಿದೆ ಎಂದರು.

1930 ರಲ್ಲಿ 'ಲೇಬರ್ ಕಮಿಷನ್' ಸ್ಥಾಪನೆ ಮಾಡಲಾಯಿತು. ಈ ಸಮಿತಿಯು ಕಾರ್ಮಿಕರ ಸಮಸ್ಯೆ, ಹಕ್ಕುಗಳು, ಕೂಲಿ, ಭತ್ಯೆ ಇವುಗಳನ್ನು ಕುರಿತ ವಸ್ತುನಿಷ್ಠ ಅಧ್ಯನ ನಡೆಸಿ ವರದಿ ನೀಡುವಂತೆ ಕೇಳಲಾಗಿತ್ತು. ನಂತರದಲ್ಲಿ ಈ ಸಮಿತಿಯ ವರದಿಯ ಆಧಾರದ ಮೇಲೆ 1931ರಲ್ಲಿ ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಜಾರಿಗೆ ತರಲಾಯಿತು. ಲಿವಿಂಗ್ ವೇಜಸ್, ಫೇರ್‌ವೇಜ್, ಮಿನಿಮಮ್ ವೇಜಸ್, ಕಾನೂನುಗಳನ್ನು ಜಾರಿಗೆ ತರಲಾಯಿತು. ಕಾರ್ಮಿಕ ಸಂಘಟನೆಗಳ ನಿರಂತರ ಹೋರಾಟದಿಂದಾಗಿ ಈ ಕಾನೂನುಗಳನ್ನು ಜಾರಿಗೆ ತಂದರು. ಆದರೆ ಸ್ವಾತಂತ್ರ್ಯಾ ನಂತರ ಈ ಕಾನೂನುಗಳು ಸಮರ್ಪಕವಾಗಿ ಜಾರಿಯಾಗುತ್ತಿಲ್ಲದಿರುವುದು ವಿಷಾಧನೀಯವೆಂದರು. ಇದಾದ ನಂತರ 1965ರಲ್ಲಿ ಬೋನಸ್ ಆಕ್ಟ್ ಜಾರಿಗೊಳಿಸಲಾಯಿತು ನಂತರದಲ್ಲಿ 1971 ರಲ್ಲಿ 'ರವೀಂದ್ರವರ್ಮ ಸಮಿತಿ'ಯನ್ನು ಸ್ಥಾಪಿಸಲಾಗಿ ಈ ಸಮಿತಿಯು 4 ಕೋಡ್‌ಗಳನ್ನು ಜಾರಿಗೆ ತಂದಿತು ಅದರಲ್ಲಿ ಪ್ರಮುಖವಾಗಿ 'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬುದು ಬಹಳ ಪ್ರಮುಖವಾದದ್ದು ಆದರೆ ಇಂದಿನ ಮೋದಿ ಸರ್ಕಾರ ಈ ಕಾನೂನುಗಳನ್ನು ರದ್ದುಗೊಳಿಸಲು ಪ್ರಯತ್ನಿಸುತ್ತಿದ್ದು ಕಾರ್ಪೋರೇಟ್ ಕಂಪನಿಗಳಿಗೆ ತೆರಿಗೆ ವಿನಾಯಿತಿ, ಮುಕ್ತ ಅವಕಾಶ ನೀಡುವ ಮೂಲಕ ದೇಶದ ದುಡಿಯುವ ಜನರನ್ನು ಬೀದಿಪಾಲು ಮಾಡಲು ಹೊರಟಿದೆ ಎಂದರು.

ವಿಚಾರ ಸಂಕಿರಣದಲ್ಲಿ ವಿಷಯ ಮಂಡನೆ ಮಾಡಿ ಮಾತನಾಡಿದ ಅಖಿಲ ಭಾರತ ವಿಮಾ ನೌಕರರ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿಯಾದ ಜೆ.ಸುರೇಶ್‌ರವರು ಮಾತನಾಡಿ 1951 ರ ಕೈಗಾರಿಕಾ ನೀತಿ ಜಾರಿಯಾದ ಮೇಲೆ ಸುಮಾರು 17 ಕ್ಷೇತ್ರಗಳನ್ನು ಸಾರ್ವಜನಿಕ ಕ್ಷೇತ್ರಗಳೆಂದು ಗುರುತಿಸಲಾಗಿತ್ತು. ಈ ಕ್ಷೇತ್ರಗಳು ಸಾರ್ವಜನಿಕರಿಗೆ ಸೇವೆ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದವು ಆದರೆ 1991 ರಲ್ಲಿ ಕಾಂಗ್ರೆಸ್ ಪಕ್ಷವು ಕೈಗಾರಿಕಾ ನೀತಿಗಳನ್ನು ಪುನಹ ವಿಮರ್ಶಿಸಿ ತಿದ್ದುಪಡಿ ಮಾಡಲು ನಿರ್ಧರಿಸಿತು ಇದಾದ ಬಳಿಕ ಕೇವಲ 3 ಸಾರ್ವಜನಿಕ ಕ್ಷೇತ್ರಗಳು ಮಾತ್ರ ಉಳಿದುಕೊಂಡವು. ಇನ್ನುಳಿದ ಕ್ಷೇತ್ರಗಳು ಖಾಸಗೀಕರಣಗೊಳ್ಳುವ ಪ್ರಯತ್ನಕ್ಕೆ ಬಲಿಯಾದವುಗಳಾಗಿವೆ. ದೇಶದಲ್ಲಿರುವ ನೂರು ಜನ ಶ್ರೀಮಂತರ ಆಸ್ತಿ ದುಪ್ಪಟ್ಟಾಗಲು ಹೊಸ ಕೈಗಾರಿಕಾ ನೀತಿಗಳೇ ಕಾರಣವಾಗಿವೆ ಜೊತೆಗೆ ವಿದೇಶಿ ಬಂಡವಾಳ ಹೂಡಿಕೆಗೆ ಮುಕ್ತ ಅವಕಾಶ ನೀಡಲಾಗಿದ್ದು ಪ್ರಸ್ತುತ ಮೋದಿ ಸರ್ಕಾರವು ಖಾಸಗೀ ಕಂಪನಿಗಳಿಗೆ ಸಾರ್ವಜನಿಕ ಉದ್ದಿಮೆಗಳನ್ನು ಮಾರಲು ಹೊರಟಿದೆ. ದೇಶದ ಅತ್ಯುತ್ತಮ ಟೆಲಿಫೋನ್ ಸಂಸ್ಥೆಯಾಗಿದ್ದ ಬಿಎಸ್‌ಎನ್‌ಎಲ್ ಇಂದು ಮುಚ್ಚುವ ಹಂತಕ್ಕೆ ತಂದು ನಿಲ್ಲಿಸಿದ್ದಾರೆ. ಸುಮಾರು 45 ಸಾವಿರ ನೌಕರರು ಕೆಲಸ ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ. ಖಾಸಗೀ ಕಂಪನಿಗಳಿಗೆ ಉತ್ತೇಜನ ಕೊಡುತ್ತಿದ್ದಾರೆ ಇದರ ಜೊತೆಗೆ ರೈಲ್ವೇ ಇಲಾಖೆಯನ್ನೂ ಸಹ ಖಾಸಗೀಕರಣ ಮಾಡಲು ಹೊರಟಿದ್ದಾರೆ ಆ ಮೂಲಕ ದೇಶದ ಸಾರ್ವಜನಿಕ ಉದ್ದಿಮೆಗಳಿಗೆ ಬೀಗ ಹಾಕಲಾಗುತ್ತಿದೆ ಎಂದರು. ಖಾಸಗೀ ಒಡೆತನದ ಕಂಪನಿಗಳು ತಮ್ಮ ಆದಾಯವನ್ನು ಹೆಚ್ಚಿಸಿಕೊಂಡಿವೆ ಆದರೆ ಕಾರ್ಮಿಕರ ವೇತನ ಮಾತ್ರ ಜಾಸ್ತಿಯಾಗಲಿಲ್ಲವಾಗಿದೆ ಅವರ ಆದಾಯ ಜಾಸ್ತಿಯಾಗಲಿಲ್ಲವಾಗಿದೆ. ಅವರಿಗೆ ಕೆಲಸದ ಭದ್ರತೆ ಇಲ್ಲವಾಗಿದೆ ಇದಕ್ಕೆಲ್ಲಾ ಮುಖ್ಯ ಕಾರಣವೆಂದರೆ ಆಳುವ ಪಕ್ಷಗಳು ಉದಾರೀಕರಣ ಖಾಸಗೀಕರಣ ನೀತಿಯನ್ನು ಅನುಸರಿಸಿರುವುದಾಗಿದೆ ಎಂದರು.

ಈ ಹಿನ್ನೆಲೆಯಲ್ಲಿ ಹಾಸನದಲ್ಲಿ ನಡೆಯುತ್ತಿರುವ ಸಿಐಟಿಯುವಿನ ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯು ಮಹತ್ವದ್ದಾಗಿದ್ದು ಕಾರ್ಮಿಕ ವಲಯವನ್ನು, ಕೈಗಾರಿಕಾ ವಲಯವನ್ನು ರಕ್ಷಿಸುವ ಹಿನ್ನೆಲೆಯೊಂದಿಗೆ ನಡೆಯುತ್ತಿದ್ದು ನಾವೆಲ್ಲರೂ ಸೇರಿ ಯಶಸ್ವಿಗೊಳಿಸಬೇಕಿದೆ ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷರಾದ ಧರ್ಮೇಶ್, ಎನ್‌ಪಿಎಸ್ ನೌಕರರ ಮುಖಂಡರಾದ ವೇಣುಗೋಪಾಲ್, ಕೆ.ಎಸ್.ಆರ್.ಟಿ.ಸಿ ನೌಕರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್. ಎಸ್ ಮಂಜುನಾಥ್, ಬ್ಯಾಂಕ್ ನೌಕರರ ಸಂಘದ ಪರಮಶಿವಯ್ಯ, ಸಿಐಟಿಯುವಿನ ಗೌರವಾಧ್ಯಕ್ಷರಾದ ವಿ.ಸುಕುಮಾರ್ ಉಪಸ್ಥಿತರಿದ್ದರು. ಅಖಿಲ ಭಾರತ ವಿಮಾ ನೌಕರರ ಸಂಘದ ವಿಜಯ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು, ಸರ್ಕಾರಿ ನೌಕರರ ಒಕ್ಕೂಟದ ಮುಖಂಡರಾದ ಡಿ.ಟಿ ಶಿವಣ್ಣನವರು ಕಾರ್ಯಕ್ರಮವನ್ನು ನಿರೂಪಿಸಿದರು, ಮಂಜುನಾಥ್ ಸ್ವಾಗತಿಸಿದರು, ಜಯಪ್ರಕಾಶ್ ವಂದಿಸಿದರು. ■





➔ಕಂಪೆನಿಗಳ ಪ್ರತಿನಿಧಿ ಎಂಬುದನ್ನು ಸಾಬೀತು ಪಡಿಸಿದೆ. ಇದರಲ್ಲಿ ಕಟ್ಟಡ ಕಾರ್ಮಿಕರಿಗೆ ಸಂಬಂಧಿಸಿದ 2 ಪ್ರಮುಖ ಕಾನೂನುಗಳು ಒಳಗೊಂಡಿದ್ದು, ಮುಂದಿನ ದಿನಗಳಲ್ಲಿ ಕಟ್ಟಡ ಕಾರ್ಮಿಕರ ಎಲ್ಲಾ ಸೌಲಭ್ಯಗಳನ್ನು ರದ್ದು ಮಾಡುವ ಮೂಲಕ ಕಲ್ಯಾಣ ಮಂಡಳಿಯಲ್ಲಿ ಜಮೆಯಾಗಿದ್ದ ಕೋಟ್ಯಾಂತರ ಹಣವು ಕೇಂದ್ರ ಸರಕಾರದ ಮೂಲಕ ಕಾರ್ಪೊರೇಟ್ ಕಂಪೆನಿಗಳ ಪಾಲಾಗಲಿದೆ' ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಐಟಿಯು ದ.ಕ. ಜಿಲ್ಲಾ ನಾಯಕರಾದ ಸದಾಶಿವ ದಾಸ್ ರವರು ಮಾತನಾಡುತ್ತಾ, 'ಕಟ್ಟಡ ಕಾರ್ಮಿಕರ ಸಂಘಟನೆ ಹಾಗೂ ಹೋರಾಟವು ಬೆಳೆದು ಬಂದ ಹಿನ್ನೆಲೆಯನ್ನು ವಿವರಿಸುತ್ತಾ, ದೇಶದ ಇಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗ ತನ್ನ ಹಕ್ಕು ಭಾಧ್ಯತೆಗಳಿಗಾಗಿ ಹೋರಾಡುತ್ತಾ, ದೇಶದ ಜಾತ್ಯತೀತ ಪರಂಪರೆಯನ್ನು ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಲು ಕಟಿಬದ್ಧರಾಗಬೇಕಾಗಿದೆ' ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಟ್ಟಡ ಕಾರ್ಮಿಕರ ಸಂಘಟನೆಯ ಮುಖಂಡರಾದ ವಸಂತಿ ಕುಪ್ಪೆಪದವುರವರು 'ಸರ್ಕಾರದ ಸವಲತ್ತುಗಳ ಬಗ್ಗೆ ವಿವರಿಸುತ್ತಾ, ಎಲ್ಲಾ ಸವಲತ್ತುಗಳನ್ನು ಪಡೆಯಲು ಕಟ್ಟಡ ಕಾರ್ಮಿಕರು ಮುಂದಾಗಬೇಕೆಂದು' ಹೇಳಿದರು.

ವೇದಿಕೆಯಲ್ಲಿ ಮುಚ್ಚೂರು ಪ್ರದೇಶದ ಕಟ್ಟಡ ಕಾರ್ಮಿಕರ ಸಂಘಟನೆಯ ಮುಖಂಡರಾದ ರಾಮಣ್ಣ ಶೆಟ್ಟಿಗಾರ್, ರವೀಂದ್ರ ಶೆಟ್ಟಿಗಾರ್, ಆನಂದ ದೇವಾಡಿಗ ಮುಂತಾದವರು ಉಪಸ್ಥಿತರಿದ್ದರು. ■

ವಿಜಯಪುರ: ಅಂಗನವಾಡಿ ನೌಕರರ ಬೇಡಿಕೆಗಳ ಕುರಿತು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಸಭೆ

ಕರ್ನಾಟಕ ರಾಜ್ಯ ಅಂಗನವಾಡಿ ವಿಜಯಪುರ ಜಿಲ್ಲಾ ಸಮಿತಿ ವತಿಯಿಂದ ದಿನಾಂಕ 10 ಜುಲೈ 2019 ರಂದು ಜಿಲ್ಲಾಧಿಕಾರಿಗಳಿಗೆ 14 ಹಾಗೂ ಸ್ಥಳೀಯ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸಲಾಗಿತ್ತು. ಜಿಲ್ಲಾಧಿಕಾರಿಗಳು 16 ಜುಲೈ 2019 ರಂದು 12 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ಜರುಗಿತು.

ಜಿಲ್ಲೆಯ ಡಿ.ಡಿ. 5 ತಾಲೂಕಿನ ಸಿಡಿಪಿಓ ಹಾಗೂ ಎಲ್ಲ ಅಂಗನವಾಡಿ ತಾಲೂಕಿನ ಪದಾಧಿಕಾರಿಗಳು ಹಾಜರಿದ್ದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ವೈ. ಎಸ್.ಪಾಟೀಲ ಅವರು ಅಂಗನವಾಡಿ ನೌಕರರ ಬೇಡಿಕೆಗಳನ್ನು ಆಲಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆ ಬಗೆಹರಿಸಲು ಸೂಚಿಸಿದರು.

ವಿಜಯಪುರ ಜಿಲ್ಲಾಧ್ಯಕ್ಷ ಸುನಂದಾ ನಾಯಕ 11 ಬೇಡಿಕೆಗಳನ್ನು ಶಾಂತಚಿತ್ತದಿಂದ ತಿಳಿ ಹೇಳಿ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟರು.

ರಾಜ್ಯ ಉಪಾಧ್ಯಕ್ಷರಾದ ಭಾರತಿ ವಾಲಿ ಮಾತನಾಡಿ, ಅಂಗನವಾಡಿ ಕಾಯಕರ್ತರ ಮೇಲೆ ಕ್ರಮ ಕೈಗೊಳ್ಳಬೇಕಾದರೆ 1, 2, 3 ನೋಟಿಸ್ ನೀಡಿ ಆ ಮೇಲೆ ಕ್ರಮ ಕೈಗೊಳ್ಳಬೇಕು ಅದರಂತೆ ಶೀಘ್ರವಾಗಿ ಸ್ಥಳೀಯ ಬೇಡಿಕೆಗಳ ಬಗ್ಗೆ ಸವಿಸ್ತಾರವಾಗಿ ಹೇಳಿದರು.

ಅಶ್ವಿನಿ ತಳವಾರ ಮಾತನಾಡಿ, ಅಂಗನವಾಡಿ ಸಹಾಯಕಿ ಹಾಗೂ ಶಿಕ್ಷಕರ ಸಮಸ್ಯೆಯಗಳ ಕುರಿತು ಸವಿಸ್ತಾರವಾಗಿ ಹೇಳಿದರು.

ರೈತ ಕಾರ್ಮಿಕ ಮುಖಂಡ ಭೀಮಶಿ ಕಲಾದಗಿ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಎಲ್.

ಪುಟ 6 ಕ್ಕೆ



ಅತಿಥಿ ಅಂಕಣ




ರಾಜೇಂದ್ರ ಚೆನ್ನಿ

ಟರ್ನ್‌ಕೋಟ್ ರಾಜಕಾರಣವನ್ನು ತಡೆಯುವುದು ಹೇಗೆ?

ಇಂದು ಬೀದಿಯಲ್ಲಿ ಕೂಡ ಸಾಮಾನ್ಯರು ಈ ಶಾಸಕರಿಗೆ, ಸಂದಾಯವಾಗಿರುವ/ವಾಗಲಿರುವ 50 ಅಥವಾ 100 ಕೋಟಿ ಕಪ್ಪದ ಬಗ್ಗೆ ಮಾತನಾಡುತ್ತಿದ್ದಾರೆ. ಈ ಹಣಕ್ಕೆ ಲೆಕ್ಕವಿಲ್ಲವೆ? ವಿರೋಧ ಪಕ್ಷದ ರಾಜಕಾರಣಿಗಳ ಮೇಲೆ ಅವರ ಮನೆಯಲ್ಲಿ ಪೋಲೀಸರ ಸಹಾಯದಿಂದ ರೇಡ್ ಮಾಡುವ ಇಲಾಖೆಗಳು ಇದುವರೆಗೆ ಒಬ್ಬನೇ ಒಬ್ಬ ಪಕ್ಷಾಂತರಿಯ ಮನೆಯ ರೇಡ್ ಯಾಕೆ ಮಾಡಿಲ್ಲ? ಪಕ್ಷಾಂತರ ಮಾಡಿದ ಮೇಲೆ ಕೊನೇ ಪಕ್ಷ 5 ವರ್ಷಗಳ ಕಾಲ ಅಂಥ ಶಾಸಕರ ಆದಾಯ ಆಸ್ತಿಗಳ ಮೇಲೆ ತೀವ್ರ ನಿಗಾ ಇಡುವಂತಾಗಬೇಕಲ್ಲವೆ? ಈಗ ಪಕ್ಷಾಂತರ ಮಾಡುತ್ತಿರುವ 16 ಜನ ಶಾಸಕರು ಪ್ರತಿನಿಧಿಸುವ ಮತದಾರರ ಸಂಖ್ಯೆ ಎಷ್ಟು? ಅವರಲ್ಲಿ ಕಾಂಗ್ರೆಸ್ ಅಥವಾ ಜೆ.ಡಿ.ಎಸ್ ಪರವಾಗಿ ಮತಚಾಲಾಯಿಸಿದವರ ಸಂಖ್ಯೆ ಎಷ್ಟು? ಇಷ್ಟು ಲಕ್ಷ ಜನರ ಅಭಿಪ್ರಾಯವನ್ನು /ಸಹಮತವನ್ನು ಪಡೆದ ಇವರುಗಳು ತಮ್ಮ ವೈಯಕ್ತಿಕ ನಿರ್ಧಾರದ ಮೂಲಕ ಈ ಎಲ್ಲ ಜನರ ಅಭಿಪ್ರಾಯವನ್ನು ತಿರಸ್ಕರಿಸುವುದಾದರೆ ಆ ಜನರ ಕ್ಷಮೆ ಕೇಳಿ ತಮ್ಮ ಶಾಸಕತ್ವವನ್ನೇ ಬಿಟ್ಟುಕೊಡಬೇಕು. ಯಾವ ಕಾರಣಕ್ಕೂ ಆ ಸ್ಥಾನದಲ್ಲಿಯೇ ಮುಂದುರೆಯುವ ಅವಕಾಶವಿರಬಾರದು.

ಇಂಗ್ಲೀಷ್ ಭಾಷೆಯಲ್ಲಿ **turncoat** ಎನ್ನುವ ಕುತೂಹಲಕಾರಿ ಪದವಿದೆ. ಅದನ್ನು ಪಕ್ಷಾಂತರಿಗಳಿಗೆ ಅಥವಾ ತಮ್ಮ ನಿಷ್ಠೆಯನ್ನು ಬದಲಾಯಿಸುವವರ ಬಗ್ಗೆ ಬಳಸುತ್ತಾರೆ. ಇದರ ಹಿನ್ನೆಲೆಯೆಂದರೆ ಇಂಗ್ಲೆಂಡ್‌ನ ಪಾರ್ಲಿಮೆಂಟ್ ರಾಜಕೀಯವು ಸ್ಥಿರತೆಯನ್ನು ತಲುಪಿ ಎರಡು ಪ್ರಮುಖ ರಾಜಕೀಯ ಪಕ್ಷಗಳು ಅಸ್ತಿತ್ವಕ್ಕೆ ಬಂದವು. ಒಂದು Tory ಪಕ್ಷ. ಇದು ಸಂಪ್ರದಾಯವಾದಿ ಪಕ್ಷ. ಅಂದರೆ ತೀವ್ರವಾದ ಬದಲಾವಣೆಗಳನ್ನಾಗಲಿ, ದಿಡೀರ್ ಕ್ರಾಂತಿಗಳನ್ನಾಗಲಿ ಒಪ್ಪದ ಪಕ್ಷ. ಇನ್ನೊಂದು ವ್ಹಿಗ್ (whig) ಪಕ್ಷ. ಇದು ಸ್ವಲ್ಪಮಟ್ಟಿಗೆ ಪ್ರಗತಿಪರವಾದ ಪಕ್ಷ. ಅಂದಿನ ಇಂಗ್ಲೆಂಡ್‌ನ ಸಂಕೀರ್ಣ ಸಂದರ್ಭದಲ್ಲಿ ಕ್ರಾಂತಿಕಾರಿ ಚಿಂತನೆ ಅಥವಾ ಕ್ರಿಯೆಗಳು 17ನೇ ಶತಮಾನದಲ್ಲಿಯೇ ತಣ್ಣಗಾಗಿದ್ದವು. ಮುಂದೆ ಫ್ರೆಂಚ್ ಕ್ರಾಂತಿಯ ಪ್ರಭಾವದಲ್ಲಿ ಕ್ರಾಂತಿಕಾರಿ ರಾಜಕೀಯ ಚಿಂತನೆಗಳು ಹುಟ್ಟಿಕೊಂಡರೂ ಅವುಗಳಿಗೆ ಇಂಗ್ಲೆಂಡ್‌ನ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಅವಕಾಶವಿರಲಿಲ್ಲ. ಹೀಗಾಗಿ ಬಹುಪಾಲು ಈ ಎರಡು ಪಕ್ಷಗಳು ಹೇಗೆ ವಿಭಿನ್ನ ಎನ್ನುವುದು ಸ್ಪಷ್ಟವಾಗಿರಲಿಲ್ಲ. ಅಂತೆಯೇ ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ನಿಷ್ಠೆ ಬದಲಾಯಿಸುವುದು ಸುಲಭವಾಗಿತ್ತು. ವ್ಹಿಗ್ ಪಕ್ಷದ ಗುರುತು ಹಾಗೂ ಟೋರಿಗಳ ಗುರುತು ಬೇರೆ ಬಣ್ಣಗಳಾಗಿದ್ದವು. ಥೇಟು ನಮ್ಮ ಶಾಸಕರಂತೆ ಎರಡೂ ಪಕ್ಷಗಳಿಂದ ಪ್ರಯೋಜನ ಪಡೆಯಲು ಕೆಲವರು ಎರಡು ಬಣ್ಣಗಳಿರುವ ಕೋಟುಗಳನ್ನು ಹೊಲಿಸುತ್ತಿದ್ದರು. ಕೆಂಪು ಕೋಟನ್ನು ಟರ್ನ್ ಮಾಡಿ(ತಿರುಗಿಸಿ) ಹಾಕಿಕೊಂಡರೆ ಅದು ಬೇರೆ ಬಣ್ಣದ coat ಆಗುತ್ತಿತ್ತು. ಹೀಗೆ ಮಾಡುವವರಿಗೆ Turn coat ಎಂದು ಕರೆಯಲಾಗುತ್ತಿತ್ತು.



ಕೃಪೆ: ಪಿ. ಮಹಮ್ಮದ್, ವಾ. ಭಾ.

ಇದೇ ರೀತಿ ಇಂಗ್ಲೆಂಡ್ ನಲ್ಲಿ ನಡೆದ ಆಂತರಿಕ ಯುದ್ಧದಲ್ಲಿ ರಾಜನ ಪರವಾಗಿ ಹೋರಾಡಿದ ಸೈನಿಕರು ಮತ್ತು ಅವನ ವಿರುದ್ಧ ಹೋರಾಡಿದ ಸೈನಿಕರು ತಮ್ಮ ಕೋಟುಗಳನ್ನು ಟರ್ನ್ ಮಾಡಿ ಯುದ್ಧ ಭೂಮಿಯಲ್ಲಿಯೂ ಪಕ್ಷಾಂತರ ಮಾಡಿದರು! ನಮ್ಮ ಕರ್ನಾಟಕದ ಶಾಸಕರಿಗೆ ಕೋಟು ಹೊಲಿಸುವ ರಗಳೆಯೂ ಇಲ್ಲ, ಅವರು ಉಟ್ಟ ಪಂಚೆಯಲ್ಲಿಯೇ ಪುಕ್ಕಟೆ ವಿಮಾನ ಹತ್ತಿ ಬಂದು ಯಾವುದೋ ಪಕ್ಷದವರ ರೆಸಾರ್ಟ್‌ನಲ್ಲಿ, ಹೋಟೆಲ್‌ನಲ್ಲಿ ಬಿಟ್ಟಿ ಐಷಾರಾಮಿ ದಿನಗಳನ್ನು ಕಳೆಯುತ್ತಾರೆ. ಅಷ್ಟೇ ಸುಲಭವಾಗಿ ಅವಶ್ಯವಾದರೆ ಇನ್ನೊಂದು ವಿಮಾನ ಹತ್ತಿ ಇನ್ನೊಂದು ಪಕ್ಷ ಹೋಟೇಲಿನಲ್ಲಿ ವಸತಿ ಮಾಡುತ್ತಾರೆ. ಅತೃಪ್ತ ಆತ್ಮಗಳು ಭೂತ ಪ್ರೇತಗಳಾಗಿ ಅಲೆದಾಡುವ ಪುರಾಣ ಕತೆಗಳ ಯುಗವು ಮುಗಿದಿದೆ. ಈಗ ಅತೃಪ್ತ ಆತ್ಮಗಳುಳ್ಳ ಶಾಸಕರು ಹೋಟೇಲಿನಿಂದ ರೆಸಾರ್ಟ್‌ಗೆ ಚಲಿಸುತ್ತಾರೆ. ಆಶ್ಚರ್ಯವೆಂದರೆ ಇದೆಲ್ಲ ಎಷ್ಟು ಅಸಂಗತವಾಗಿದೆ, ಎಷ್ಟು ಅಸಭ್ಯವಾಗಿದೆ ಎನ್ನುವುದನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿಲ್ಲ. ಕೇಳಲೇಬೇಕಾದ ಸರಳ ಪ್ರಶ್ನೆಗಳನ್ನು ಕೇಳುತ್ತಿಲ್ಲ. ಉದಾಹರಣೆಗೆ ಈ ರೆಸಾರ್ಟ್, ಹೋಟೇಲ್ ಹಾಗೂ ವಿಮಾನ ಪ್ರಯಾಣಗಳಿಗಾಗಿ ಆಗುವ ವೆಚ್ಚವನ್ನು ಮಾಧ್ಯಮಗಳು ಪ್ರಕಟಿಸುತ್ತಲೇ ಇವೆ. ಈ ಖರ್ಚಿಗೆ ಬೇಕಾಗುವ ದುಡ್ಡಿನ ಮೂಲ ಯಾವುದು? ಯಾರು ಇವುಗಳನ್ನು ಮಾಡುತ್ತಾರೆ?

ವಿಚಿತ್ರವೆಂದರೆ ಇದು ಹಾಡೇಹಗಲಿನ ಭ್ರಷ್ಟಾಚಾರವಾದರೂ ಯಾವುದೇ ಕೋರ್ಟು ಇದನ್ನು ನ್ಯಾಯದ ವಿಷಯವಾಗಿ ಪರಿಗಣಿಸುವುದಿಲ್ಲ. ನನ್ನ ದೃಷ್ಟಿಯಲ್ಲಿ ಪಕ್ಷಗಳು ನಾಯಕರು ಇವರುಗಳ ಚರ್ಚೆಯ ಬದಲಾಗಿ ಈ ದುಡ್ಡಿನ ಮೂಲವನ್ನೇ ಬಹಿರಂಗವಾಗಿ ಚರ್ಚಿಸಬೇಕು. ಅಲ್ಲದೇ ರಾಜಕೀಯವಾಗಿ ಅಥವಾ ಸೈದ್ಧಾಂತಿಕವಾಗಿ ಅತೃಪ್ತರಾದವರನ್ನು ಕಡ್ಡಾಯವಾಗಿ ಗುಡಿಸಲುಗಳಲ್ಲಿಯೇ ಕೂಡಿಹಾಕಬೇಕು. ಸಾಧ್ಯವಿದ್ದರೆ ದಲಿತರ ಕಾಲನಿಗಳಲ್ಲಿಯ ಗುಡಿಸಲುಗಳಲ್ಲಿಯೇ ಕೂಡಿ ಹಾಕಿ ಅತ್ಯಂತ ಸರಳವಾದ ಆಹಾರವನ್ನೇ ನೀಡಬೇಕು. ಏಕೆಂದರೆ ಈ ಶಾಸಕರು ಹೇಳುವ ಹಾಗೆ ಅವರ ಆತ್ಮಗಳಿಗೆ ಅತೃಪ್ತಿಯಾಗಿದೆ. ಆತ್ಮಗಳು ಮತ್ತು ಭಾವನೆಗಳು ಫೈವ್‌ಸ್ಟಾರ್ ಸಾಂತ್ವನವನ್ನು ಬಯಸುವುದಿಲ್ಲ. ನಾನು ಅರ್ಧಶತಮಾನದ ಕಾಲ ಓದಿದ ಯಾವುದೇ ಶಾಸ್ತ್ರಗ್ರಂಥದಲ್ಲಿ, ಮನೋವಿಜ್ಞಾನದಲ್ಲಿ ಮನಸ್ಸುಗಳ ಅತೃಪ್ತಿಗೆ ಫೈವ್‌ಸ್ಟಾರ್ ಚಿಕಿತ್ಸೆ ಬೇಕು ಎಂದು ಬರೆದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಈ ಶಾಸಕರಿಗೆ ಫೈವ್‌ಸ್ಟಾರ್ ಆತ್ಮಗಳು, ಮನಸ್ಸುಗಳು ಇದ್ದರೆ ಅತ್ಯಂತ ಸನಿಹದ ಮಾನಸಿಕ ಆರೋಗ್ಯ ಆಸ್ಪತ್ರೆಗೆ ಅವರನ್ನು ಕಡ್ಡಾಯವಾಗಿ ದಾಖಲೆ ಮಾಡಬೇಕು. ಅಲ್ಲದೆ ಗುಡಿಸಲುಗಳಲ್ಲಿ ಈ ಶಾಸಕರು ಕರಿಹಲಗೆಯ ಮೇಲೆ ಬಳಪದಿಂದ 'ಅತೃಪ್ತ' 'ಸಿದ್ಧಾಂತ' ಈ ಕನ್ನಡ ಪದಗಳನ್ನು ಸರಿಯಾಗಿ ಬರೆಯುವಂತೆ ತರಬೇತಿ ಕೊಡಬೇಕು. ಈಗಿರುವಂತೆ ರೆಸಾರ್ಟ್‌ಗಳಿಗೆ ಹೋಗುವುದಾದರೆ ಅಲ್ಲಿಯ ಖರ್ಚಿನ ಹಣವನ್ನು ಸಂದಾಯ ಮಾಡಿದವರ ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ನಾವು ಸಾಮಾನ್ಯ ನಾಗರೀಕರು ಕಣ್ತಪ್ಪಿನಿಂದ ಯಾವುದೇ ಹಣ ವ್ಯವಹಾರದ ಮಾಹಿತಿ ಕೊಡದಿದ್ದರೆ ಅದು ಅಪರಾಧವಾಗುತ್ತದೆ. ಸಾಲಗಳನ್ನು ಸಂದಾಯ ಮಾಡದಿದ್ದರೆ ಬ್ಯಾಂಕ್‌ಗಳು ನಮ್ಮ ವಿವರಗಳನ್ನು ಪ್ರಕಟಿಸುತ್ತವೆ. ಹಾಗಿದ್ದರೆ ರೆಸಾರ್ಟ್‌ಗಳಿಗೆ, ವಿಮಾನ ಪ್ರಯಾಣಕ್ಕೆ ಹಣ ಸಂದಾಯ ಮಾಡುವವರ ವಿವರಗಳು ಏಕೆ ಲಭ್ಯವಿಲ್ಲ?

ಅದೇ ರೀತಿ ಇಂದು ಬೀದಿಯಲ್ಲಿ ಕೂಡ ಸಾಮಾನ್ಯರು ಈ ಶಾಸಕರಿಗೆ, ಸಂದಾಯವಾಗಿರುವ/ವಾಗಲಿರುವ 50 ಅಥವಾ 100 ಕೋಟಿ ಕಪ್ಪದ ಬಗ್ಗೆ ಮಾತನಾಡುತ್ತಿದ್ದಾರೆ. ಈ ಹಣಕ್ಕೆ ಲೆಕ್ಕವಿಲ್ಲವೆ? ವಿರೋಧ ಪಕ್ಷದ ರಾಜಕಾರಣಿಗಳ ಮೇಲೆ ಅವರ ಮನೆಯಲ್ಲಿ ಪೋಲೀಸರ ಸಹಾಯದಿಂದ ರೇಡ್ ಮಾಡುವ ಇಲಾಖೆಗಳು ಇದುವರೆಗೆ ಒಬ್ಬನೇ ಒಬ್ಬ ಪಕ್ಷಾಂತರಿಯ ಮನೆಯ ರೇಡ್ ಯಾಕೆ ಮಾಡಿಲ್ಲ? ಪಕ್ಷಾಂತರ ಮಾಡಿದ ಮೇಲೆ ಕೊನೇ ಪಕ್ಷ 5 ವರ್ಷಗಳ ಕಾಲ ಅಂಥ ಶಾಸಕರ ಆದಾಯ ಆಸ್ತಿಗಳ ಮೇಲೆ ತೀವ್ರ ನಿಗಾ ಇಡುವಂತಾಗಬೇಕಲ್ಲವೆ?

ಇಲ್ಲಿರುವ ಗಂಭೀರ ಪ್ರಶ್ನೆಯೆಂದರೆ ನಾವು ಸಂಸದೀಯ, ಚುನಾವಣ ಕೇಂದ್ರಿತ ಪ್ರಜಾಪ್ರಭುತ್ವವನ್ನು ಆಯ್ಕೆ ಮಾಡಿಕೊಂಡ ಮೇಲೆ ಈ ವ್ಯವಸ್ಥೆಯನ್ನು ಭ್ರಷ್ಟಾಚಾರದಿಂದ ರಕ್ಷಿಸುವ ದೊಡ್ಡ ಜವಾಬ್ದಾರಿಯೂ ನಮ್ಮ ಮೇಲಿದೆ. ಈಗಾಗಲೇ ನಾವು ನೋಡಿದ್ದೇನೆಂದರೆ ತಮಗೆ ಅನುಕೂಲವಾಗುವ ಚುನಾವಣಾ ವ್ಯವಸ್ಥೆಯನ್ನು ಮಾತ್ರ ಉಪಯೋಗಿಸಿಕೊಂಡು ಪ್ರಜಾಪ್ರಭುತ್ವ–ವಿರೋಧಿಯಾದ ಫ್ಯಾಸಿಸ್ಟ್ ಶಕ್ತಿಗಳು ಅಧಿಕಾರಕ್ಕೆ ಬರುತ್ತಿವೆ. ಕರ್ನಾಟಕದ ಸಂದರ್ಭದಲ್ಲಿ ಮತ್ತು ಇತ್ತೀಚೆಗೆ ಗೋವಾ ಸಂದರ್ಭದಲ್ಲಿ ಈ ಶಕ್ತಿಗಳು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಚುನಾವಣೆಯ ಕಿರಿಕಿರಿಯೂ ಇಲ್ಲದೆ ಈಗಾಗಲೇ ಬೇರೆ ಪಕ್ಷದ ಹೆಸರಿನಲ್ಲಿ ಆಯ್ಕೆಯಾದ ಶಾಸಕರನ್ನು ಪಕ್ಷಾಂತರಗೊಳಿಸುತ್ತಿವೆ. ಇದನ್ನು ಸೂಕ್ಷ್ಮವಾಗಿ ಗಮನಿಸಿ.

ಒಂದು ಕ್ಷೇತ್ರದ ಜನರು ಒಬ್ಬ ವ್ಯಕ್ತಿಯನ್ನು ಅವನು ಪ್ರತಿನಿಧಿಸುವ ಪಕ್ಷದ ಪರವಾಗಿ ಚುನಾಯಿಸುತ್ತಾರೆ. ಹೀಗಾಗಿ ಅವರ ಮತವು ಅವರ ಅಭಿಪ್ರಾಯದ ಸಂಕೇತವಾಗಿದೆ. ಹೀಗೆ ಆಯ್ಕೆಯಾದ ಶಾಸಕನು ತನ್ನನ್ನು ಆಯ್ಕೆ ಮಾಡಿದ ಜನರ ಅಭಿಪ್ರಾಯದ ವಿರುದ್ಧವಾಗಿ, ಅವರನ್ನು ಕೇಳದೆಯೇ ತನ್ನ ಸ್ವಂತರ ನಿರ್ಧಾರದ ಮೇಲೆ ಇನ್ನೊಂದು ಪಕ್ಷವನ್ನು ಸೇರಿದರೆ ಅದು ನೇರವಾಗಿ ಅಪರಾಧವಾಗುತ್ತದೆ. ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಈಗ ಪಕ್ಷಾಂತರ ಮಾಡುತ್ತಿರುವ 16 ಜನ ಶಾಸಕರು ಪ್ರತಿನಿಧಿಸುವ ಮತದಾರರ ಸಂಖ್ಯೆ ಎಷ್ಟು? ಅವರಲ್ಲಿ ಕಾಂಗ್ರೆಸ್ ಅಥವಾ ಜೆ.ಡಿ.ಎಸ್ ಪರವಾಗಿ ಮತಚಾಲಾಯಿಸಿದವರ ಸಂಖ್ಯೆ ಎಷ್ಟು? ಇಷ್ಟು ಲಕ್ಷ ಜನರ ಅಭಿಪ್ರಾಯವನ್ನು /ಸಹಮತವನ್ನು ಪಡೆದ ಇವರುಗಳು ತಮ್ಮ ವೈಯಕ್ತಿಕ ನಿರ್ಧಾರದ ಮೂಲಕ ಈ ಎಲ್ಲ ಜನರ ಅಭಿಪ್ರಾಯವನ್ನು ತಿರಸ್ಕರಿಸುವುದಾದರೆ ಆ ಜನರ ಕ್ಷಮೆ ಕೇಳಿ ತಮ್ಮ ಶಾಸಕತ್ವವನ್ನೇ ಬಿಟ್ಟುಕೊಡಬೇಕು. ಯಾವ ಕಾರಣಕ್ಕೂ ಆ ಸ್ಥಾನದಲ್ಲಿಯೇ ಮುಂದುರೆಯುವ ಅವಕಾಶವಿರಬಾರದು. ಮತ್ತೆ ಚುನಾವಣೆಯ ಮೂಲಕವೇ ಪ್ರತಿನಿಧಿ ಸ್ಥಾನವನ್ನು ಪಡೆದುಕೊಳ್ಳಬೇಕು. ಆದರೆ ಇಂದಿನ ಸಂದರ್ಭದಲ್ಲಿ ಯಾವ ರಾಜಕೀಯ ಪಕ್ಷವೂ ಇದಕ್ಕೆ ಸಿದ್ಧವಾಗಿಲ್ಲ. ಅಲ್ಲದೆ ಮತದಾರ ಪ್ರಜೆಗಳಾದ ನಾವು ನಮ್ಮ ಹಕ್ಕುಗಳ ಬಗ್ಗೆ ಎಚ್ಚರವಾಗಿಲ್ಲ ಅಥವಾ ಭ್ರಷ್ಟಾಚಾರದ ಹೊಡೆತದಲ್ಲಿ ಆ ಹಕ್ಕುಗಳನ್ನು ಕಳೆದುಕೊಂಡಿದ್ದೇವೆ. ■

ವಿಜಯಪುರ: ಅಂಗನವಾಡಿ ನೌಕರರ ಬೇಡಿಕೆಗಳ ಕುರಿತು ... ಪುಟ 5 ರಿಂದ

ಕೆ.ಜಿ & ಯುಕೆಜಿ ಪ್ರಾರಂಭಿಸಲು ಒತ್ತಾಯಿಸಿ ಬಾಕಿ ಗೌರವಧನ, ಕೋಳಿ ಮೊಟ್ಟೆ, ತರಕಾರಿ ಹಣದ ಬಿಡುಗಡೆಗಾಗಿ ಮತ್ತು ಕೇಂದ್ರ ಸರ್ಕಾರದಿಂದ 2018 ಅಕ್ಟೋಬರ್‌ನಲ್ಲಿ ಹೆಚ್ಚಳವಾದ ಗೌರವಧನ ಬಿಡುಗಡೆ ಮಾಡಬೇಕು. ಅದರಂತೆ ಅಂಗನವಾಡಿ ಕಾಯಕರ್ತರಿಗೆ 800 ನೀಡುತ್ತಾರೆ. ಬೆಲೆ ಏರಿಕೆ ಕ್ರಮಾಂಕ 18,000 ವೇತನ ನೀಡಬೇಕು. ಅಂಗನವಾಡಿ ಕಾಯಕರ್ತರ ಹಾಗೂ ಶಿಕ್ಷಕರ ಎಸ್‌ಎಸ್‌ಎಲ್‌ಸಿ ಆದವರಿಗೆ ಜೇಷ್ಠತಾ ಪಟ್ಟಿ ತಯಾರಿಸಿ ಬಡ್ತಿ ನೀಡಬೇಕು. ಬೇಡಿಕೆ ಕುರಿತು ಸುತ್ತೋಲೆ ಹೊರಡಿಸಿ ಅಂಗನವಾಡಿ ನೌಕರರ ಸಂಘದ ಹಾಗೂ ಅಧಿಕಾರಿಗಳಿಗೆ ಕಳಿಸಬೇಕು ಆಗ್ರಹಿಸಿದರು.

ಜನವಾದಿ ಮಹಿಳಾ ಸಂಘದ ರಾಜ್ಯ ಉಪಾಧ್ಯಕ್ಷ ಸುರೇಖಾ ರಜಪೂತ, ಸರಸ್ವತಿ ಮಠ, ಪ್ರತಿಭಾ ಕುರಡೆ, ದಾನಮ್ಮ ಗುಗ್ಗರೆ, ಸುವರ್ಣ ಹಲಗಣಿ, ಶೋಭಾ ಕಬಾಡೆ, ತಾಳಿಕೋಟಿ ಸರೋಜಾ ಸಿಂಪಿಗರ ಸೇರಿದಂತೆ 5 ತಾಲೂಕಿನ ಪದಾಧಿಕಾರಿಗಳು, ಅಂಗನವಾಡಿ ಕಾರ್ಯರ್ತರು ಇದ್ದರು.

–ಸುನಂದಾ ನಾಯಕ



ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ವ್ಯಾಪಾರಿಕರಣ, ರೆಸಾರ್ಟ್ ರಾಜಕಾರಣವನ್ನು ವಿರೋಧಿಸಿ, ಪ್ರಜಾಪ್ರಭುತ್ವ ಮೌಲ್ಯಗಳ ಉಳಿವಿಗಾಗಿ ಒತ್ತಾಯಿಸಿ ಚಿಕ್ಕಬಳ್ಳಾಪುರದಲ್ಲಿ ಸಿಪಿಐ(ಎಂ)ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ಕಲಬುರಗಿ: ಜನವಾದಿ ಮಹಿಳಾ ಸಂಘದ 8ನೇ ಜಿಲ್ಲಾ ಸಮ್ಮೇಳನ



ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 8ನೇ ಜಿಲ್ಲಾ ಸಮ್ಮೇಳನವು ಕಲಬುರಗಿ ತಾಲ್ಲೂಕಿನ ತಾಜಸುಲ್ತಾನಪೂರ ಗ್ರಾಮದಲ್ಲಿ 15 ಜುಲೈ 2019 ರಂದು ನಡೆಯಿತು. ಕಲಬುರಗಿ ತಾಲ್ಲೂಕಿನ ನಗರ ಮತ್ತು ಗ್ರಾಮೀಣ ಪ್ರದೇಶ, ಆಳಂದ ತಾಲ್ಲೂಕು, ಚಿತ್ತಾಪುರ ತಾಲ್ಲೂಕು, ಅಫ್ಜಲಪುರ ತಾಲ್ಲೂಕುಗಳಿಂದ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿ ಬೃಹತ್ ರ್‍ಯಾಲಿ ನಡೆಸಲಾಯಿತು. ನಂತರ ಸಮ್ಮೇಳನದ ಸಭಾಂಗಣದಲ್ಲಿ ಜನವಾದಿ ಮಹಿಳಾ ಸಂಘಟನೆಯ ಧ್ವಜಾರೋಹಣವನ್ನು ಹಿರಿಯ ಮಹಿಳಾ ಸಂಗಾತಿ ಅಮೀನಾ ಬೇಗಂ ನೆರವೇರಿಸಿದರು. ಸಮ್ಮೇಳನದ ಉದ್ಘಾಟನೆಯು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆಯಾಗಿರುವ ವಿಮಲ ಕೆ ಎಸ್ ಇವರು ಮಾಡಿದರು. ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸ್ವತ: ಮಹಿಳೆಯರೇ ಸಂಘಟಿತರಾಗಿ ಹೋರಾಡಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ. ಏಕೆಂದರೆ ಜನತೆಯ ಸಮಸ್ಯೆಗಳಿಗೆ ಕುರುಡಾಗಿ, ಕಿವುಡಾಗಿ ತನ್ನನ್ನೇ ತಾನು ಮಾರಾಟ ಮಾಡಿಕೊಳ್ಳುತ್ತಿರುವ ಶಾಸಕರು, ಇಂಥ ಬೇಜವಾಬ್ದಾರಿ ಮತ್ತು ಹೊಣೆಗೇಡಿಯಾಗಿರುವವರನ್ನು ಖರಿದಿಸಿ ದೇಶದ ಪ್ರಜಾಪ್ರಭುತ್ವವನ್ನು ನಾಶಗೊಳಿಸಲು ಹೋರಟಿರುವ ಬಿಜೆಪಿಯ ಅಪರೇಷನ್ ದುಷ್ಟಾಟವು ಅತ್ಯಂತ ಅಪಾಯಕಾರಿಯಾದದ್ದು. ಇತ್ತ ಬರಗಾಲದಲ್ಲಿ ಜನತೆಯು ಹೈರಾಣಾಗುತ್ತಿದ್ದಾರೆ, ಮಹಿಳೆಯರ ಮೇಲೆ ಅತ್ಯಾಚಾರ ದೌರ್ಜನ್ಯಗಳು ಹೆಚ್ಚುತ್ತಿವೆ. ಇಂತಹ ಜ್ವಲಂತ ಸಮಸ್ಯೆಗಳನ್ನು ನೇಪಥ್ಯಕ್ಕೆ ದೂಡುತ್ತಿರುವ ರಾಜಕೀಯ ಕ್ರೌರ್ಯವನ್ನು ಜನವಾದಿ ಮಹಿಳಾ ಸಂಘಟನೆಯು ತೀವ್ರವಾಗಿ ಖಂಡಿಸುತದೆ. ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ, ಸ್ವಾವಲಂಬಿ ಬದುಕಿಗಾಗಿ, ಮಹಿಳಾ ಸಮಾನತೆಗಾಗಿ ಹೋರಾಟದ ಮೂಲಕ ಮಹಿಳೆಯರು ಎತ್ತರದ ಕಂಠದಿಂದ ಮಾತಾಡಬೇಕಿದೆ. ಆದ್ದರಿಂದಲೇ ಅಖಿಲ ಬಾರತ ಜನವಾದಿ ಮಹಿಳಾ ಸಂಘಟನೆಯು ಹಿಂಸೆ ಮುಕ್ತ ದೌರ್ಜನ್ಯ ಮುಕ್ತ ಮತ್ತು ಸೌಹಾರ್ದ ಬದುಕಿಗಾಗಿ ಸಮ್ಮೇಳನ ನಡೆಸುತಿದೆ. ಇಡೀ ದೇಶವನ್ನೇ ಫ್ಯಾಸಿಜಂ ಕ್ರೌರ್ಯಕ್ಕೆ ದೂಡಲು ಹೊರಟಿರುವ ಕಾರ್ಪೋರೇಟ್ ಸ್ನೇಹಿ ಪ್ರಭುತ್ವವು ಕೋಮುವಾದವನ್ನು ಹರಡುತಿದೆ. ಮತ್ತು ಅಲ್ಪಸಂಖ್ಯಾತ, ದಲಿತರ ಬದುಕನ್ನು ಭಯದ ಕೂಪಕ್ಕೆ ತಳ್ಳುತ್ತಿದೆ. ಜನವಾದಿ ಮಹಿಳಾ ಸಂಘಟನೆಯು ಇದನ್ನು ತೀವ್ರವಾಗಿ ಖಂಡಿಸುತದೆ, ಸೌಹಾರ್ದ ಪರಂಪರೆಯನ್ನು ಉಳಿಸಿ ಬೆಳೆಸಲು ನಿರಂತರ ಶ್ರಮಿಸುತಿದೆ. ಇದರ ಭಾಗವಾಗಿಯೇ ಸಂವಿಧಾನ ಉಳಿಸಿ ಅಭಿಯಾನದಲ್ಲಿ ತೊಡಗಿಸಿಕೊಂಡಿದೆ. ಮನುಸ್ಮೃತಿಯನ್ನು ಕಿತ್ತೆಸೆದು ಸಂವಿಧಾನವನ್ನು ಜನಮಾನಸದ ಹೃದಯಕ್ಕೆ ತಲುಪಿಸಬೇಕಿದೆ. ಮತ್ತು ಸರಕಾರಗಳು ಸಂವಿಧಾನದ ಪ್ರಕಾರವೇ ನಡೆದುಕೊಳ್ಳುವಂತೆ ಆಗ್ರಹಿಸಬೇಕಿದೆ ಎಂದು ಹೇಳಿದರು.

ಡಾ. ಮೀನಾಕ್ಷಿ ಬಾಳಿ, ರಾಜ್ಯ ಉಪಾಧ್ಯಕ್ಷೆ, ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹಿಳಾ ಚಳುವಳಿ ಹಿಂದಿಗಿಂತಲೂ ಇಂದು ಅಗತ್ಯವಾಗಿದೆ. ಅದರಲ್ಲಿಯೂ ದುಡಿಯುವ ವರ್ಗದ ಜನತೆಯು ಬುದ್ಧ ಬಸವ ಅಂಬೇಡ್ಕರ ಸಾವಿತ್ರಿಬಾಯಿ ಫುಲೆ ತತ್ವಗಳನ್ನು ಜಾರಿಗೊಳಿಸಬೇಕಿದೆ. ಸ್ವಾತಂತ್ರ್ಯ ಸಮಾನತೆ ಮಹಿಳಾ ವಿಮೋಚನೆಗಾಗಿ ದೇಶದಾದ್ಯಂತ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಶ್ರಮಿಸುತಿದೆ. ಸಮಸ್ತ ಮಹಿಳೆಯರು ವ್ಯವಸ್ಥಿತವಾಗಿ ಸಂಘಟಿತರಾಗಬೇಕಿದೆ. ಈ ದಿಕ್ಕಿನಲ್ಲಿ ಜಿಲ್ಲೆಯ 8ನೇ ಸಮ್ಮೇಳನವು ನಡೆಯುತಿದೆ. ರಾಜ್ಯ ಸಮ್ಮೇಳನದ ಯಶಸ್ಸಿಗಾಗಿ ಮುನ್ನಡೆಯೋಣ ಎಂದು ಕರೆ ಕೊಟ್ಟರು.



ಕೆ ನೀಲಾ ರಾಜ್ಯ ಉಪಾಧ್ಯಕ್ಷೆ ಇವರು ಮಾತನಾಡಿ 'ಲಿಂಗ ಅಸಮಾನತೆಯಲ್ಲಿ, ಬಾಣಂತಿ ಸಾವಿನಲ್ಲಿ, ಗುಜ್ಜರ್ ಮದುವೆಯಲ್ಲಿ, ಬಾಲ್ಯ ವಿವಾಹದಲ್ಲಿ ಕಲಬುರಗಿ ಜಿಲ್ಲೆಯು ರಾಜ್ಯದಲ್ಲಿ ಒಂದನೆ ಸ್ಥಾನದಲ್ಲಿದೆ. ಜನತೆ ಬರಗಾಲದಲ್ಲಿ ಬವಣೆ ಪಡುತ್ತಿದ್ದಾರೆ. ಉದ್ಯೋಗ ಖಾತ್ರಿ ಕಾಯ್ದೆಯು ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ವಲಸೆ ಹೆಚ್ಚುತ್ತಿದೆ. ಆದಾಗ್ಯೂ ಇಲ್ಲಿನ ಶಾಸಕರುಗಳಿಗೆ, ಸಂಸದರಿಗೆ ನಾಚಿಕೆ ಬರುತ್ತಿಲ್ಲ. ಕಿಂಚಿತ್ತೂ ಕಾಳಜಿ ಇಲ್ಲವಾಗಿದೆ. ಇದು ಅತ್ಯಂತ ಅಪಾಯಕಾರಿಯಾದದ್ದು. ಜನತೆಗೆ ಎಲ್ಲ ಹಂತದ ಚುನಾಯಿತ ಸದಸ್ಯರುಗಳು ಉತ್ತರಿಸಬೇಕಿದೆ. ಜನರನ್ನು ಇಂತಹ ನರಕದಲ್ಲಿ ದೂಡಿ ಮೋಜು ಮೇಜುವಾನಿಯಲ್ಲಿ, ಅಧಿಕಾರದ ಬೇಟೆಯಲ್ಲಿ ತೊಡಗಿದ್ದಾರೆ. ಹಾಗೆ ನೋಡಿದರೆ ಪಕ್ಷಾಂತರ ಶುರುವಾಗಿದ್ದು ಕಲಬುರಗಿ ಜಿಲ್ಲೆಯಿಂದಲೇ. ದೇಶದಲ್ಲಿ ಪ್ರತಿಪಕ್ಷಗಳನ್ನು ನಾಶಗೊಳಿಸಿ ಏಕಪಕ್ಷವನ್ನು ಹೊರೆಸಲು ಹೊರಟಿರುವ ಕೇಂದ್ರ ಸರಕಾರ ಮತ್ತು ಬಿಜೆಪಿ ಪಕ್ಷದ ಕ್ರಮವು ಆಳದಲ್ಲಿ ಫ್ಯಾಸಿಸ್ಟ್ ಧೋರಣೆ ಹೊಂದಿದೆ. ಕಾರ್ಪೋರೇಟ್ ಕಳ್ಳರೊಂದಿಗೆ ಕೈಜೋಡಿಸಿದ್ದರ ಫಲ ಇದಾಗಿದೆ. ಈ ಹೊತ್ತಿನಲ್ಲಿ ಮಹಿಳೆಯರು ಅತ್ಯಂತ ಹಿಮ್ಮತ್ತಿನಿಂದ ಸಂಘಟಿತರಾಗಿ ಹೋರಾಟದಂಗಳಕ್ಕೆ ಬರಬೇಕಿದೆ. ಆಳುವ ವರ್ಗವು ದೇಶದ ಸಾರ್ವಭೌಮತೆಗೆ ಧಕ್ಕೆ ತರುತ್ತಿದ್ದಾರೆ. ಎಲ್ಲ ಪ್ರಜ್ಞಾವಂತರು ಮೌನ ಮುರಿಯಬೇಕಿದೆ ಎಂದು ಹೇಳಿದರು.

ಡಾ. ಪ್ರಭು ಖಾನಾಪುರೆ ಇವರು ಅತಿಥಿಯಾಗಿ ಶುಭ ಕೋರಿ ಮಾತನಾಡಿದರು. ಅಶ್ವಿನಿ ಮದನಕರ್ ಇವರು ನಿರ್ವಹಣೆ ಮಾಡಿದರು. ನಂದಾದೇವಿ ಮಂಗೊಂಡಿ ಇವರು ಸ್ವಾಗತಿಸಿದರು.

ಸಮ್ಮೇಳನದಲ್ಲಿ ಒಟ್ಟು 25 ಜನ ಮಹಿಳೆಯರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಮೀನಾ ಬೇಗಂ ಅಧ್ಯಕ್ಷೆಯಾಗಿ, ನಂದಾದೇವಿ ಮಂಗೊಂಡಿ ಇವರು ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ಮೀನಾಕ್ಷಿ ಬಾಳಿ, ಚಂದಮ್ಮ ಗೋಳಾ ಇವರು ಉಪಾಧ್ಯಕ್ಷರಾಗಿ, ಅಶ್ವಿನಿ ಮದನಕರ್ ಮತ್ತು ಭಾಗ್ಯ ಇವರು ಸಹಕಾರ್ಯದರ್ಶಿಯಾಗಿ, ಶಾಂತಾ ಇವರು ಖಜಾಂಚಿಯಾಗಿ ಇವರು ಆಯ್ಕೆಯಾದರು.

ಸಮ್ಮೇಳನದಲ್ಲಿ ಕೋಮುವಾದ ತಡೆಗಾಗಿ, ಉದ್ಯೋಗ ಜಾರಿಗಾಗಿ ಹೋರಾಟ ಮಾಡುವ, ಮಹಿಳಾ ವಿರೋಧಿ ಮೌಲ್ಯಗಳನ್ನು ಹಿಮ್ಮೆಟ್ಟಿಸಲಿಕ್ಕಾಗಿ ನಿರ್ಣಯಗಳನ್ನು ಕೈಗೊಳ್ಳಲಾಯಿತು. ■

ಬೆಳ್ತಂಗಡಿಯಲ್ಲಿ ಸಿಐಟಿಯು ತಾಲೂಕು ಸಮ್ಮೇಳನ



'ದುಡಿಯುವ ವರ್ಗವಿಂದು ಅತ್ಯಂತ ಅಪಾಯಕಾರಿ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಕೇಂದ್ರ, ರಾಜ್ಯ ಸರ್ಕಾರಗಳು ನಿರಂತರವಾಗಿ ಧಾಳಿ ನಡೆಸುತ್ತಿದ್ದು, ದುಡಿಯುವ ವರ್ಗ ಜಾತಿ, ಧರ್ಮದವನ್ನು ಮೀರಿ ಸಂಘಟಿತವಾದ ಸಮರಶೀಲ ಹೋರಾಟ ನಡೆಸಬೇಕಾದ ತುರ್ತು ಅಗತ್ಯವಿದೆ' ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನ ದ.ಕ ಜಿಲ್ಲಾಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ ಕರೆ ನೀಡಿದರು.

ಅವರು ಬೆಳ್ತಂಗಡಿ ಅಂಬೇಡ್ಕರ್ ಭವನದಲ್ಲಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು)ನ 8 ನೇ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಿದ್ದರು.

'ಸಂಘಟಿತ ವಲಯದ ಸಂಸ್ಥೆಗಳನ್ನು ನಾಶಮಾಡುವ ಮೂಲಕ ದುಡಿಯುವ ವರ್ಗವನ್ನು ಬೀದಿಪಾಲು ಮಾಡಲಾಗಿದೆ. ಬ್ಯಾಂಕ್, ಎಲ್‌ಐಸಿ, ಬಿಎಸ್‌ಎನ್‌ಎಲ್, ಬಂದರು, ವಿಮಾನ ನಿಲ್ದಾಣಗಳು ಸೇರಿದಂತೆ ಸಾರ್ವಜನಿಕ ಸಂಸ್ಥೆಗಳನ್ನು ಈಗಾಗಲೇ ಖಾಸಗೀಕರಣಗೊಳಿಸಲಾಗಿದೆ ಎಂದ ಅವರು, ಏಕ ರೀತಿಯ ತೆರಿಗೆಯಿಂದಾಗಿ ಕೈಗಾರಿಕೆಗಳು ಮುಚ್ಚಿ ದುಡಿಯುವ ವರ್ಗ ಸಂಕಷ್ಟ ಅನುಭವಿಸುತ್ತಿದ್ದು , ದುಡಿಯುವ ವರ್ಗ ಸಂಘಟಿತರಾಗದಿದ್ದರೆ ಮುಂದಿನ ದಿನಗಳಲ್ಲಿ ಗಂಭೀರ ಸ್ವರೂಪದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ ಅವರು ದೇಶದ ಕಾರ್ಮಿಕ ವರ್ಗ ತನ್ನ ಶತಮಾನಮಾನೋತ್ಸವ ಹಾಗೂ ಸಿಐಟಿಯು ನ ಸುವರ್ಣ ಮಹೋತ್ಸವ ಆಚರಿಸುವ ಸಂದರ್ಭದಲ್ಲಿ ಸಿಐಟಿಯು ಸಮ್ಮೇಳನ ನಡೆಸುತ್ತಿದೆ. ಕಾರ್ಮಿಕ ವರ್ಗ ಇಂದು ಸಮರಧೀರ ಹೋರಾಟ ನಡೆಸುವ ಮೂಲಕ ಕಾರ್ಮಿಕ ವಿರೋಧಿ ಸರ್ಕಾರಗಳ ವಿರುದ್ಧ ಸೆಟೆದು ನಿಲ್ಲಬೇಕಾದ ಅಗತ್ಯವಿದೆ' ಎಂದರು.

ಸಮ್ಮೇಳನವನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಮಾತನಾಡಿ 'ಕೋಮುವಾದಿ, ಮತೀಯವಾದಿಗಳು ಶಕ್ತಿಗಳು ಜಾತಿ ಧರ್ಮದ ಹೆಸರಿನಲ್ಲಿ, ಮತ್ತೊಂದೆಡೆ ಸಿಐಟಿಯು, ಕೆಂಬಾವುಟದ ಹೆಸರಿನಲ್ಲಿ, ರಾಜಕೀಯ ಪಕ್ಷಗಳ ಹೆಸರಿನಲ್ಲಿ ಕಾರ್ಮಿಕ ವರ್ಗವನ್ನು ವಿಭಜಿಸುವ ಶಕ್ತಿಗಳ ವಿರುದ್ಧ ಕಾರ್ಮಿಕ ವರ್ಗ ಎಚ್ಚೆತ್ತುಕೊಳ್ಳುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸಿಐಟಿಯು ಸಮ್ಮೇಳನ ಹೊಸ ಇತಿಹಾಸ ನಿರ್ಮಾಣ ಮಾಡಲಿ' ಎಂದರು.

ಕಾರ್ಮಿಕ ವರ್ಗದ ಇತಿಹಾಸ ಮರುಕಳಿಸಲಿ: ವಸಂತ ಆಚಾರಿ

'ಸ್ವಾತಂತ್ರ್ಯ ಪೂರ್ವದ ಕಾರ್ಮಿಕ ಚಳವಳಿ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿತು. ಬಳಿಕ ಕಾರ್ಮಿಕ ವರ್ಗದ ಪರವಾದ ಹೋರಾಟದಲ್ಲಿ ಸಿಐಟಿಯು ನ ಸಾವಿರಾರು ಕಾರ್ಯಕರ್ತರು, ನಾಯಕರು ಪ್ರಾಣ ತ್ಯಾಗ ಮಾಡಿದ್ದಾರೆ. ಆ ತ್ಯಾಗ ವ್ಯರ್ಥವಾಗದೆ ಕಾರ್ಮಿಕ ವರ್ಗವಿಂದು ಹಲವಾರು ಹಕ್ಕು, ಕಾನೂನು, ಸವಲತ್ತುಗಳನ್ನು ಪಡೆಯಲು ಸಾಧ್ಯವಾಗಿದೆ. ಆದರೆ ನಮ್ಮನಾಳುವ ಸರ್ಕಾರಗಳು ಕಾರ್ಮಿಕ ವರ್ಗದ ಕಾನೂನುಗಳನ್ನು ಮಾಲೀಕರ ಪರವಾಗಿ ಬದಲಾವಣೆ ಮಾಡಿ ಮಾಲೀಕರ ಹಿತಾಸಕ್ತಿ ಕಾಡುತ್ತಿದೆ. ತ್ಯಾಗ, ಬಲಿದಾನದಿಂದ ಪಡೆದ ಕಾನೂನು, ಸವಲತ್ತುಗಳನ್ನು ಉಳಿಸಿಕೊಳ್ಳಲು ಕಾರ್ಮಿಕ ವರ್ಗಕ್ಕೆ ಸಮರಧೀರ ಹೋರಾಟವೊಂದೇ ದಾರಿ' ಎಂದರು.

ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ ಸಿಐಟಿಯು ಬೆಳ್ತಂಗಡಿ ತಾಲೂಕು ಅಧ್ಯಕ್ಷ ನ್ಯಾಯವಾದಿ ಶಿವಕುಮಾರ್ ಎಸ್.ಎಂ. ಧ್ವಜಾರೋಹಣ ಮಾಡಿದರು.

ಸಮ್ಮೇಳನದಲ್ಲಿ ಹಿರಿಯ ಕಾರ್ಮಿಕ ನಾಯಕ, ಪ್ರಾಚ್ಯವಸ್ತು ಸಂಗ್ರಾಹಕ ಹೈದರ್ ಹಳ್ಳಿಮನೆ ಅವರನ್ನು ಸನ್ಮಾನಿಸಲಾಯಿತು.

ಸಮ್ಮೇಳನದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಬದಲಾಗಿ ಅಂಗನವಾಡಿ ಕೇಂದ್ರಗಳಲ್ಲಿ ಎಲ್. ಕೆ.ಜಿ & ಯುಕೆಜಿ ಪ್ರಾರಂಭಿಸಬೇಕು. ಬೀಡಿ ಕಾರ್ಮಿಕರಿಗೆ ನಿಗದಿ ಪಡಿಸಿರುವ ಕನಿಷ್ಠ ಕೂಲಿ ಸಾವಿರ ಬೀಡಿಗೆ ರೂ 210 ನೀಡಬೇಕು. ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಅಕ್ಷರ ದಾಸೋಹ ನೌಕರರಿಗೆ ಕನಿಷ್ಠ ಕೂಲಿ ಮಾಸಿಕ ರೂ 18,000/– ನೀಡಬೇಕು. ಅಂಗನವಾಡಿ, ಅಕ್ಷರ ದಾಸೋಹ, ಆಶಾ ನೌಕರರನ್ನು ಖಾಯಂಗೊಳಿಸಬೇಕು. ಚಾಲಕರಿಗೆ ಮಾರಕವಾಗಿರುವ ರಸ್ತೆ ಸುರಕ್ಷತಾ ಮಸೂದೆಯನ್ನು ವಾಪಸು ಪಡೆಯಬೇಕು. ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ನಿವೃತ್ತಿ ವೇತನ ನೀಡಬೇಕು. ಧರ್ಮಸ್ಥಳ ಕೆಎಸ್‌ಆರ್‌ಟಿಸಿ ಬಸ್ ಡಿಪೋದಲ್ಲಿರುವ ಅವ್ಯವಸ್ಥೆ ಸರಿಪಡಿಸಿ, ದುರಸ್ತಿಯಲ್ಲಿರುವ ವಸತಿ ಗೃಹ ಸೇರಿದಂತೆ ಡಿಪೋವನ್ನು ದುರಸ್ತಿ ಮಾಡಬೇಕು ಎಂದು ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿತು.

ಮೊದಲಿಗೆ ವಸಂತ ನಡ ಸ್ವಾಗತಿಸಿ, ವಂದಿಸಿದರು. ಶೇಖರ್ ಎಲ್. ಕಾರ್ಯಕ್ರಮ ನಿರೂಪಿಸಿದರು. ಶ್ರದ್ಧಾಂಜಲಿ ನಿರ್ಣಯವನ್ನು ಶಿವಕುಮಾರ್ ಮಂಡಿಸಿದರು.

ಸಿಐಟಿಯು ಬೆಳ್ತಂಗಡಿ ತಾಲೂಕು ಸಮಿತಿಯ ನೂತನ ಅಧ್ಯಕ್ಷರಾಗಿ ನ್ಯಾಯವಾದಿ ಶಿವಕುಮಾರ್ ಎಸ್.ಎಂ. ಪ್ರಧಾನ ಕಾರ್ಯದರ್ಶಿಯಾಗಿ ವಸಂತ ನಡ, ಕೋಶಾಧಿಕಾರಿಯಾಗಿ ರೋಹಿಣಿ ಪೆರಾಡಿ ಸರ್ವಾನುಮತದಿಂದ ಆಯ್ಕೆಯಾದರು.

ಉಪಾಧ್ಯಕ್ಷರುಗಳಾಗಿ ಶೇಖರ್ ಎಲ್., ನಾರಾಯಣ ಪೂಜಾರಿ ಹೊಸಂಗಡಿ, ಜಯಂತಿ ನೆಲ್ಲಿಂಗೇರಿ, ನ್ಯಾಯವಾದಿ ಸುಕನ್ಯಾ ಹೆಚ್, ಕಾರ್ಯದರ್ಶಿಗಳಾಗಿ ಪದ್ಮಾವತಿ ಬೆಳ್ತಂಗಡಿ, ಲಲಿತಾ ಮದ್ದಡ್ಕ, ಸುಮಿತ್ರಾ ಹತ್ಯಡ್ಕ, ಕುಸುಮ ಮಾಚಾರ್ ಆಯ್ಕೆಯಾದರು.

ಸಮಿತಿ ಸದಸ್ಯರಾಗಿ ಶೀನಪ್ಪ ಗೌಡ ಬಂದಾರು, ಸುಧಾ ಕೆ ರಾವ್ ಅತ್ತಾಜೆ, ಅನಿತಾ ಎಸ್ ಕರಾಯ, ಮೀನಾಕ್ಷಿ ಪಡಂಗಡಿ, ಸಂಜೀವ ಪೂಜಾರಿ ನಿಟ್ಟಡೆ, ಮಾಧವ ರಾಯ್ ಕುವೆಟ್ಟು, ಪ್ರಭಾಕರ ತೋಟತ್ತಾಡಿ, ಜಯಶ್ರೀ ಬಜಿರೆ ಸರ್ವಾನುಮತದಿಂದ ಆಯ್ಕೆಯಾದರು. ■






ಅಸ್ಸಾಮ್‌ನಲ್ಲಿ ಎನ್‌ಆರ್‌ಸಿ ಪ್ರಕ್ರಿಯೆ ಎತ್ತ ಸಾಗಿದೆ?

ಪೌರತ್ವ ನಿರ್ಧಾರದಲ್ಲಿ ಕೋಮುವಾದಿ ಹುನ್ನಾರ

ವಿದೇಶಿಯರನ್ನು ಹೊರತುಪಡಿಸಿ ಎಲ್ಲಾ ಭಾರತೀಯರನ್ನು ಸೇರಿಸಿಕೊಳ್ಳುವ ಉದ್ದೇಶ ಹೊಂದಿದ್ದ ಅಸ್ಸಾಮ್‌ನ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಈಗ ಬಿಜೆಪಿಯ ಕೋಮುವಾದಿ ಹಾಗೂ ಸಂಕುಚಿತ ಉದ್ದೇಶಕ್ಕೆ ಅಪಹರಿಸುವ ಅಪಾಯವಿದೆ. ಕೋಮುವಾದದ ಆಧಾರದಲ್ಲಿ ಪೌರತ್ವವನ್ನು ನಿರ್ಧರಿಸುವ ಕ್ರಮ ಅಸಂವಿಧಾನಿಕವಾದುದು ಹಾಗೂ ವಿಭಜನಕಾರಿಯಾದುದು. ಅಲ್ಲದೆ ಎನ್‌ಆರ್‌ಸಿಯ ದೋಷಪೂರಿತ ಅನುಷ್ಠಾನದಿಂದ ಉದ್ಭವಿಸುವ ಅವಾಂತರಗಳನ್ನು ಪರಿಹರಿಸಲು ವಿಫಲವಾದರೆ ಅದು ಪೌರರ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗೆ ಸಮನಾಗುತ್ತದೆ. ಇದರಿಂದ ಭಾರತ ಒಂದು ಪ್ರಜಾಪ್ರಭುತ್ವ ಮತ್ತು ಕಾನೂನು ಪಾಲಿಸುವ ಸಮಾಜ ಎಂಬ ಘನತೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಂಭೀರ ಕಳಂಕ ಬರುತ್ತದೆ.




*** ಪ್ರಕಾಶ್ ಕಾರಟ್**

ಅಸ್ಸಾಮ್‌ನಲ್ಲಿ ನಾಗರಿಕ ಗಣತಿ ನಡೆಸುವ ರಾಷ್ಟ್ರೀಯ ಪೌರತ್ವ ದಾಖಲೆ (ಎನ್‌ಆರ್‌ಸಿ) ಯ ಪ್ರಕ್ರಿಯೆ ಸುಪ್ರೀಂ ಕೋರ್ಟ್‌ನ ಆದೇಶದ ಅನ್ವಯ ಜುಲೈ 31ರಂದು ಅಂತಿಮ ಪಟ್ಟಿಯ ಪ್ರಕಟಣೆಯೊಂದಿಗೆ ಪೂರ್ಣಗೊಳ್ಳುವ ಹಂತ ತಲುಪಬೇಕಾಗಿದೆ. ಈ ಪ್ರಕ್ರಿಯೆಯನ್ನು ನಡೆಸಿದ ರೀತಿ ಅನೇಕ ಅನುಮಾನಗಳಿಗೆ ಎಡೆಮಾಡಿದೆ; ದಾಖಲೆಯಲ್ಲಿ ನೈಜ ಭಾರತೀಯ ನಾಗರಿಕರನ್ನು ಸೇರಿಸುವ ವಿಚಾರದಲ್ಲಿ ಭಾರೀ ಪ್ರಮಾಣದ ಲೋಪದೋಷಗಳು ಕಂಡುಬಂದಿವೆ.

2018ರ ಜುಲೈ 30 ರಂದು ಪ್ರಕಟವಾದ ಎನ್‌ಆರ್‌ಸಿ ಕರಡು ಪಟ್ಟಿಯಲ್ಲಿ 3.29 ಕೋಟಿ ಅರ್ಜಿದಾರರ ಪೈಕಿ 40.7 ಲಕ್ಷ ಜನರನ್ನು ಕೈಬಿಡಲಾಗಿತ್ತು. ನಿಯಮದ ಪ್ರಕಾರ, ಪಟ್ಟಿಯಿಂದ ಬಿಡಲಾದವರು ತಮ್ಮ ಸೇರ್ಪಡೆಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅದೇ ರೀತಿ ಸೇರ್ಪಡೆಯಾಗಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಲೂ ಅವಕಾಶವಿದೆ.

ಈ ಪ್ರಕ್ರಿಯೆಯ ನಂತರ, ಪಟ್ಟಿಯನ್ನು ಅಂತಿಮಗೊಳಿಸಿ 2019ರ ಜುಲೈ 31ರಂದು ಪ್ರಕಟಿಸಲು ಕ್ರಮಕೈಗೊಳ್ಳಲಾಗಿತ್ತು. ಆದರೆ, ಈ ವರ್ಷ ಜೂನ್ 26ರಂದು ಅನರ್ಹರು ಎಂದು ಹೇಳಿ ಅಧಿಕಾರಿಗಳು ಮತ್ತೆ 1,02,462 ಹೆಸರುಗಳನ್ನು ಕರಡು ಎನ್‌ಆರ್‌ಸಿ ಪಟ್ಟಿಯಿಂದ ಕೈಬಿಟ್ಟಿದ್ದರು. ಪ್ರಸ್ತುತ ಹೊರತುಪಡಿಸುವಿಕೆಯು 'ಡಿ', ಅಂದರೆ ಮತದಾರರ ಪಟ್ಟಿಯ ಅನುಮಾನಾಸ್ಪದ (ಡೌಟ್‌ಫುಲ್) ವಿಭಾಗದಲ್ಲಿ ಸೇರಿದವರನ್ನೂ ಒಳಗೊಂಡಿದೆ ಅಥವಾ ವಿದೇಶಿಯರೆಂದು ಅನುಮಾನಕ್ಕೊಳಗಾಗಿದ್ದು ವಿದೇಶಿಯರ ನ್ಯಾಯಮಂಡಳಿಯ ಮುಂದೆ ವಿಚಾರಣೆ ಎದುರಿಸುತ್ತಿರುವವರನ್ನೂ ಒಳಗೊಂಡಿದೆ ಎಂದು ತಿಳಿಸಲಾಗಿದೆ. ಈ ಹೆಚ್ಚುವರಿ ಹೊರತುಪಡಿಸುವಿಕೆಯೇ ಇನ್ನಷ್ಟು ಪ್ರಶ್ನೆಗಳಿಗೆ ಕಾರಣವಾಗಿದೆ. ಯಾಕೆಂದರೆ 'ಡಿ' ವಿಭಾಗದಲ್ಲಿರುವ ಎಲ್ಲ ವ್ಯಕ್ತಿಗಳನ್ನು ಹೊರತುಪಡಿಸಲಾಗಿದೆ ಎಂದು ಕರಡು ಎನ್‌ಆರ್‌ಸಿ ವೇಳೆಯೇ ಘೋಷಿಸಲಾಗಿತ್ತು.



ವ್ಯಂಗ್ಯಚಿತ್ರ:ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಪ್ರಕ್ರಿಯೆಯು ದೋಷಪೂರಿತವಾಗಿದೆ ಹಾಗೂ ಅನೇಕ ತಪ್ಪುಗಳೂ ನಡೆದಿವೆ ಎಂಬುದನ್ನು ಮಾಧ್ಯಮಗಳಲ್ಲಿ ಪ್ರಕಟವಾದ ಅನೇಕ ವರದಿಗಳು ಎತ್ತಿತೋರಿಸಿವೆ. ಸೇನೆಯಲ್ಲಿ 30 ವರ್ಷ ಸೇವೆ ಸಲ್ಲಿಸಿ ಆನಂತರ ಗಡಿ ಪೊಲೀಸ್ ಪಡೆಯನ್ನು ಸಹಾಯಕ ಸಬ್ ಇನ್ಸ್‌ಪೆಕ್ಟರ್ ಆಗಿ ಸೇರಿದ ನಾನ್–ಕಮಿಷನ್ಡ್ ಆಫೀಸರ್ ಮಹಮದ್ ಸನಾವುಲ್ಲಾ ಪ್ರಕರಣ ಒಂದು ಉದಾಹರಣೆಯಾಗಿದೆ. ಅವರ ಹೆಸರು 'ಡಿ' ಪಟ್ಟಿಯಲ್ಲಿತ್ತು ಹಾಗೂ ಅವರನ್ನು ವಿದೇಶೀಯ ಎಂದು ವಿದೇಶಿಗರ ನ್ಯಾಯಮಂಡಳಿ (ಫಾರಿನರ್ಸ್ ಟ್ರಿಬ್ಯುನಲ್) ಘೋಷಿಸಿತು. ಸನಾವುಲ್ಲಾ ಅಸ್ಸಾಮ್‌ನಲ್ಲಿ ಹುಟ್ಟಿದವರಾದರೂ ಮತ್ತು ಹುಟ್ಟಿದ ಊರಿನಲ್ಲಿ ಕುಟುಂಬದ ಬೇರುಗಳು ಆಳವಾಗಿದ್ದರೂ ಈ ರೀತಿ ಮಾಡಲಾಯಿತು. ಅವರನ್ನು ಪ್ರತಿಬಂಧನ ಶಿಬಿರಕ್ಕೆ ಕಳಿಸಲಾಯಿತು. ಹೈಕೋರ್ಟ್ ಅವರಿಗೆ ಜಾಮೀನು ಮಂಜೂರು ಮಾಡಿದ ನಂತರವಷ್ಟೇ ಹತ್ತು ದಿನಗಳ ನಂತರ ಅವರು ಹೊರಬರುವುದು ಸಾಧ್ಯವಾಯಿತು.

ಸುನಿರ್ಮಲ್ ಬಾಗ್ಚಿ ಅವರದ್ದು ಇನ್ನೊಂದು ಪ್ರಕರಣ. 2018ರ ಜುಲೈನಲ್ಲಿ ಪ್ರಕಟಿಸಲಾದ ಕರಡು ಪಟ್ಟಿಯಲ್ಲಿ ಅವರ ಹೆಸರಿತ್ತು. ಆದರೆ ಈ ವರ್ಷ ಜೂನ್‌ನಲ್ಲಿ ಪ್ರಕಟಿಸಲಾದ ಹೆಚ್ಚುವರಿ ಹೊರತುಪಡಿಸುವಿಕೆ ಪಟ್ಟಿಯಲ್ಲಿ ಅವರ ಹೆಸರನ್ನು ಕರಡು ಪಟ್ಟಿಯಿಂದ ಹೊಡೆದುಹಾಕಲಾಗಿದೆ. ಆತ ಒಬ್ಬ ವಿದೇಶಿ ಎಂದು ಘೋಷಿಸಲಾಗಿದೆ ಎನ್ನುವುದು ಇದಕ್ಕೆ ನೀಡಲಾದ ಕಾರಣವಾಗಿದೆ. ಬಾಗ್ಚಿ ಅವರು ಸಿಲ್ಚಾರ್ ಪಟ್ಟಣದಲ್ಲಿ 1943 ಸೆಪ್ಟೆಂಬರ್ 23ರಂದು ಜನಿಸಿದವರು. ಹಾಗಿರುವಾಗ ಅವರು ಒಬ್ಬ ವಿದೇಶೀಯ ಆಗಲು ಹೇಗೆ ಸಾಧ್ಯ ಎನ್ನುವುದಕ್ಕೆ ಅಧಿಕಾರಿಗಳಲ್ಲಿ ಉತ್ತರವಿಲ್ಲ. ಆದರೆ ಇದೊಂದು ಕ್ಲರಿಕಲ್ ದೋಷದ ಪರಿಣಾಮ ಎಂದು ಎನ್‌ಆರ್‌ಸಿ ಅಧಿಕಾರಿಗಳು ಈಗ ಹೇಳುತ್ತಿದ್ದಾರೆ.

ಚಿರಾಂಗ್ ಜಿಲ್ಲೆಯ ಒಬ್ಬ ಬಡ ವಿಧವೆ ಮಧುಬಾಲಾ ಅವರನ್ನು ಬಂಧಿಸಿರುವುದು ಒಂದು ಕಳವಳಕಾರಿ ಸಂಗತಿಯಾಗಿದೆ. ಫಾರಿನರ್ಸ್ ಟ್ರಿಬ್ಯುನಲ್ ಅವರನ್ನು ವಿದೇಶಿ ಎಂದು ಘೋಷಿಸಿದ ಹಿನ್ನೆಲೆಯಲ್ಲಿ ಮಧುಬಾಲಾರನ್ನು ಮೂರು ವರ್ಷಗಳಿಂದ ಪ್ರತಿಬಂಧನದಲ್ಲಿಡಲಾಗಿತ್ತು. ಮಧುಬಾಲಾ ಎಂಬ ಹೆಸರಿನ ಮತ್ತೊಬ್ಬ ಮಹಿಳೆಯ ವಿಚಾರದಲ್ಲಿ ತಪ್ಪಾಗಿ ತಿಳಿದು ಈ ಮಧುಬಾಲಾರನ್ನು ಹಿಡಿದಿಡಲಾಗಿತ್ತು ಎನ್ನುವುದು ಇತ್ತೀಚೆಗೆ ತಿಳಿದು ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ, ಅಕ್ರಮವಾಗಿ ಅವರನ್ನು ಬಂಧಿಸಿಟ್ಟಿದ್ದಕ್ಕೆ ಪರಿಹಾರ ನೀಡಲಾಗುವುದೇ ಎಂಬ ಬಗ್ಗೆ ಎಂದು ಚಕಾರವನ್ನೇ ಎತ್ತಿಲ್ಲ.

ಮಗನನ್ನು ಪಟ್ಟಿಯಲ್ಲಿ ಸೇರಿಸಿ ತಂದೆಯನ್ನು ಕೈಬಿಟ್ಟ ಅಥವಾ ಒಡಹುಟ್ಟಿದವರಲ್ಲಿ ಒಬ್ಬರನ್ನು ಸೇರಿಸಿ ಇನ್ನೊಬ್ಬರನ್ನು ಬಿಟ್ಟ ಈ ರೀತಿಯ ಅನೇಕಾನೇಕ ಪ್ರಕರಣಗಳು ಇಲ್ಲಿವೆ.

ಬಾಂಗ್ಲಾದೇಶದಿಂದ ಬಂದ ಅಕ್ರಮ ವಲಸಿಗರಿಂದ ಮುಕ್ತಿ ಪಡೆಯಬೇಕು ಎಂದು ಕೇಂದ್ರದ ಬಿಜೆಪಿ ಸರಕಾರ ಸದಾ ಜಪಿಸುತ್ತಲೇ ಇದೆ. ಈಗ ಕೇಂದ್ರ ಗೃಹ ಸಚಿವರಾಗಿರುವ ಅಮಿತ್ ಷಾ ಚುನಾವಣೆ ಪ್ರಚಾರದ ವೇಳೆ ಇವರನ್ನು 'ಗೆದ್ದಲು' ಎಂದು ಕರೆದಿದ್ದರು. ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾದೇಶದ ಗಡಿಗೆ ಹೊಂದಿರುವ ರಾಜ್ಯಗಳಿಗೆ ಎನ್‌ಆರ್‌ಸಿ ವಿಸ್ತರಿಸಲು ಮೋದಿ ಸರಕಾರ ಕಟಿಬದ್ಧವಾಗಿದೆ. ಮುಸ್ಲಿಂ ಮೂಲದ ನಾಗರಿಕರನ್ನು ಗುರಿಯಾಗಿಸಲಾಗುವುದು ಎಂಬ ಭೀತಿ ಕಾಡತೊಡಗಿದೆ.

ಇದೇ ಹೊತ್ತಿಗೆ ಬಾಂಗ್ಲಾದೇಶದಿಂದ ಬಂದ ಹಿಂದೂ ವಲಸಿಗರಿಗೆ ಪೌರತ್ವ ಕಾನೂನನ್ನು ತಿದ್ದುಪಡಿ ಮಾಡುವ ಮೂಲಕ ಪೌರತ್ವ ನೀಡಲಾಗುವುದು ಎಂದು ಬಿಜೆಪಿ ಆಶ್ವಾಸನೆ ನೀಡುತ್ತಿದೆ. ಎನ್‌ಆರ್‌ಸಿಯಿಂದ ಕೈಬಿಟ್ಟ "ಹಿಂದೂ ನಿರಾಶ್ರಿತರಿಗೆ" ಪೌರತ್ವ ನೀಡಲಿಕ್ಕಾಗಿ ಸರಕಾರ ಒಂದು ಮಸೂದೆ ತರಲಿದೆ ಎಂದು ಗೃಹ ಸಚಿವ ಅಮಿತ್ ಷಾ ಜುಲೈ ಒಂದರಂದು ರಾಜ್ಯಸಭೆಯಲ್ಲಿ ಹೇಳಿದ್ದಾರೆ.

ವಿದೇಶಿಯರನ್ನು ಹೊರತು ಪಡಿಸಿ ಎಲ್ಲಾ ಭಾರತೀಯರನ್ನು ಸೇರಿಸಿಕೊಳ್ಳುವ ಉದ್ದೇಶ ಹೊಂದಿದ್ದ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಈಗ ಬಿಜೆಪಿಯ ಕೋಮುವಾದಿ ಹಾಗೂ ಸಂಕುಚಿತ ಉದ್ದೇಶಕ್ಕೆ ಅಪಹರಿಸುವ ಅಪಾಯವಿದೆ.


ಅಸ್ಸಾಮ್‌ನಲ್ಲಿ ಎನ್‌ಆರ್‌ಸಿ ಪ್ರಕ್ರಿಯೆ ಅನೇಕ ಪ್ರಶ್ನೆಗಳನ್ನು ಎತ್ತಿದ್ದು ಅವುಗಳಿಗೆ ಪರಿಹಾರ ಸಿಗಬೇಕಾಗಿದೆ. ಎನ್‌ಆರ್‌ಸಿಯ ಅಂತಿಮ ಪಟ್ಟಿಯ ಪ್ರಕಟಣೆಯ ನಂತರ, ಅನ್ಯಾಯವಾಗಿ ಅಥವಾ ತಪ್ಪಾಗಿ ಕೈಬಿಡಲಾದವರಿಗೆ–ಅದು ಅಧಿಕಾರಿಗಳ ತಪ್ಪಿನಿಂದಲೇ ಆಗಿರಲಿ, ಕೋಮುವಾದಿ ಪಕ್ಷಪಾತದಿಂದಲೇ ಆಗಿರಲಿ– ನ್ಯಾಯ ಒದಗಿಸಲು ಒಂದು ಶೀಘ್ರ ಕಾನೂನು ಪ್ರಕ್ರಿಯೆ ಆರಂಭವಾಗಬೇಕು. ಪೌರತ್ವ ದಾಖಲೆಯಿಂದ ಕೈಬಿಡಲಾದ ಮಿಲಿಯಗಟ್ಟಲೆ ಜನರಿಗೆ ಏನು ಆಗಬಹುದು?. 'ಪೌರರಲ್ಲದ' ಅವರ ಸ್ಥಾನಮಾನ ಹಾಗೂ ಹಕ್ಕುಗಳು ಏನು?. ವಿದೇಶಿಗರ ನ್ಯಾಯಮಂಡಳಿಯಿಂದ ವಿದೇಶಿಯರು ಎಂದು ಘೋಷಿತರಾದವರನ್ನು ಬಾಂಗ್ಲಾದೇಶಕ್ಕೆ ಕಳಿಸಲು ಸಾಧ್ಯವಿಲ್ಲ ಎನ್ನುವುದು ಆಗಲೇ ಸ್ಪಷ್ಟವಾಗಿರುವಾಗ– ಅವರನ್ನು ಸ್ವೀಕರಿಸಲು ಬಾಂಗ್ಲಾದೇಶ ನಿರಾಕರಿಸಿದೆ– ಅವರನ್ನು ಬಂಧನ ಕೇಂದ್ರಗಳಲ್ಲಿ ಅನಿರ್ದಿಷ್ಟ ಕಾಲ ಕೊಳೆ ಹಾಕಲಾಗುವುದೇ?.

ಎನ್‌ಆರ್‌ಸಿ ಪ್ರಕ್ರಿಯೆಯನ್ನು ಆರಂಭಿಸಿ ಅದರ ಮೇಲುಸ್ತುವಾರಿ ನೋಡಿಕೊಂಡ ಸುಪ್ರೀಂ ಕೋರ್ಟ್ ಈ ವಿಷಯಗಳಿಗೆ ಪ್ರತಿಕ್ರಿಯಿಸದೆ ನುಣುಚಿಕೊಳ್ಳಲಾಗದು. ಭಾರತೀಯ ನಾಗರಿಕತ್ವ ಮತ್ತು ನಾಗರಿಕರ ಹಕ್ಕುಗಳ ಮೂಲಭೂತ ವಿಚಾರಗಳು ಇಲ್ಲಿ ಅಡಕವಾಗಿವೆ. ಎನ್‌ಆರ್‌ಸಿಯ ದೋಷಪೂರಿತ ಅನುಷ್ಠಾನದಿಂದ ಉದ್ಭವಿಸುವ ಅವಾಂತರಗಳನ್ನು ಪರಿಹರಿಸಲು ವಿಫಲವಾದರೆ ಅದು ಪೌರರ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗೆ ಸಮನಾಗುತ್ತದೆ. ಇದರಿಂದ ಭಾರತ ಒಂದು ಪ್ರಜಾಪ್ರಭುತ್ವ ಮತ್ತು ಕಾನೂನು ಪಾಲಿಸುವ ಸಮಾಜ ಎಂಬ ಘನತೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಂಭೀರ ಕಳಂಕ ಬರುತ್ತದೆ.

ಅಂತಿಮ ಪಟ್ಟಿ ಪ್ರಕಟಣೆಯ ಜುಲೈ 31ರ ಗಡುವು ಸಮೀಪಿಸುತ್ತಿರುವಾಗ ಇಂಥ ಸನ್ನಿವೇಶ ಇರುವ ಹೊತ್ತಿನಲ್ಲೇ ಕೇಂದ್ರ ಸರಕಾರ ಮತ್ತು ಅಸ್ಸಾಂ ರಾಜ್ಯ ಸರಕಾರ ಹಠಾತ್ತನೆ ಒಂದು ಹೊಸ ಬೇಡಿಕೆಯೊಂದಿಗೆ ಸುಪ್ರೀಂ ಕೋರ್ಟ್‌ನ ಮೊರೆ ಹೋಗಿದೆ. ಅಂತಿಮ ಪಟ್ಟಿ ಪ್ರಕಟಣೆಯ ಗಡುವನ್ನು ಜುಲೈ 31ರಿಂದ ಬೇರೊಂದು ದಿನಾಂಕ್ಕೆ ಮುಂದೂಡಬೇಕೆನ್ನುವುದೇ ಆ ಬೇಡಿಕೆಯಾಗಿದೆ. ಈ ನಡುವೆ, 2018ರ ಜುಲೈ 30ರಂದು ಪ್ರಕಟಿಸಲಾದ ಎನ್‌ಆರ್‌ಸಿ ಕರಡಿನಲ್ಲಿರುವ ಹೆಸರುಗಳ ಸ್ಯಾಂಪಲ್ ಪುನರ್–ದೃಢೀಕರಣ ಆಗಬೇಕೆಂಬುದು ಅವುಗಳ ಬೇಡಿಕೆ. ಬಾಂಗ್ಲಾದೇಶದ ಗಡಿಗೆ ಹೊಂದಿರುವ ಜಿಲ್ಲೆಗಳ ಶೇಕಡಾ 20ರಷ್ಟು ಹಸರುಗಳ ಮರು–ದೃಢೀಕರಣ ಮತ್ತು ರಾಜ್ಯದ ಉಳಿದ ಭಾಗಗಳಲ್ಲಿ ಶೇಕಡಾ 10 ಮರು–ದೃಢೀಕರಣ ಆಗಬೇಕು ಎಂದು ಅವು ಹೇಳಿವೆ. ದುರುದ್ದೇಶಪೂರಿತವಾದ ಈ ಮನವಿಯು ಈಗಾಗಲೇ ಪದೇ ಪದೇ ವಿಚಾರಣೆಗಳು ಮತ್ತು ದಾಖಲೆಪತ್ರಗಳ ಸಲ್ಲಿಕೆಗಳಿಂದ ಹೈರಾಣವಾಗಿರುವ ಲಕ್ಷಾಂತರ ನಾಗರಿಕರಿಗೆ ಮತ್ತಷ್ಟು ಕಿರುಕುಳ ಮುಂದುವರಿಸಲು ಕಾರಣವಾಗುತ್ತದೆ.

ಈ ಕ್ರಮವನ್ನು ದೃಢವಾಗಿ ವಿರೋಧಿಸಬೇಕು. ಪೌರತ್ವ ಕಾನೂನಿಗೆ ತಿದ್ದುಪಡಿ ತರುವ 'ವರೆಗೆ ಅಥವಾ ಬಾಂಗ್ಲಾದೇಶದ ಹಿಂದೂ ವಲಸಿಗರಿಗೆ ನಾಗರಿಕತ್ವ ನೀಡುವವರೆಗೆ ಎನ್‌ಆರ್‌ಸಿಯನ್ನು ಅಂತಿಮಗೊಳಿಸುವುದನ್ನು ವಿಳಂಬ ಮಾಡುವುದು ಮೋದಿ ಸರಕಾರ ಉದ್ದೇಶ ಎಂದು ನಂಬಲು ಬೇಕಷ್ಟು ಕಾರಣಗಳಿವೆ. ಕೋಮುವಾದದ ಆಧಾರದಲ್ಲಿ ಪೌರತ್ವವನ್ನು ನಿರ್ಧರಿಸುವ ಕ್ರಮ ಅಸಂವಿಧಾನಿಕವಾದುದು ಹಾಗೂ ವಿಭಜನ ಕಾರಿಯಾದುದು.

ಅನು: ವಿಶ್ವ



ವ್ಯಂಗ್ಯಚಿತ್ರ: ಸುರೇಂದ್ರನ್, ದಿ ಹಿಂದು

'ಕಾರ್ಮಿಕ ಸಂಹಿತೆ'ಗಳನ್ನು ಹೇರಲು ಬಿಜೆಪಿ ಸರಕಾರದ ತರಾತುರಿ

ಕಾರ್ಪೊರೇಟ್ ಧಣಿಗಳ 'ಸುಲಭ ವ್ಯಾಪಾರ'ಕ್ಕಾಗಿ ಕಾರ್ಮಿಕರ ಮೇಲೆ 'ಸುಲಭ ಲೂಟಿ'ಯ ಪರಿಸ್ಥಿತಿಗಳ ಹೇರಿಕೆ



ದೇಶದ ಕೋಟ್ಯಂತರ ಕಾರ್ಮಿಕರಿಗೆ ಅಲ್ಪ-ಸ್ವಲ್ಪವಾದರೂ ರಕ್ಷಣೆ ಒದಗಿಸುತ್ತಿರುವ, ಕಾರ್ಮಿಕರು ಹೋರಾಟಗಳಿಂದ ಪಡೆದಿರುವ ಕಾನೂನುಗಳನ್ನು ದುರ್ಬಲಗೊಳಿಸುವ, ಸಾಧ್ಯವಾದರೆ ರದ್ದು ಮಾಡಿಯೇ ಬಿಡುವ ನವ-ಉದಾರವಾದದ ಅವಧಿಯ ಪ್ರಯತ್ನಗಳಿಗೆ ಈಗ ಭಾರೀ ರಭಸ ದೊರೆತಿದೆ. ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ತನ್ನ ಎರಡನೇ ಅವತಾರದಲ್ಲಿ ಬಹಳ ತರಾತುರಿಯಿಂದ ಈ ಕೆಲಸಕ್ಕೆ ಇಳಿದಿದೆ. ಇದಕ್ಕೆ ಸಂಘ ಪರಿವಾರದ ಬಿಎಂಎಸ್ ಕೂಡ ಸೇರಿದಂತೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಇದು ತನಗೆ ಮತ್ತೆ ಅಧಿಕಾರ ಪಡೆಯಲು ಬಹುವಾಗಿ ನೆರವಾಗಿರುವ ಕಾರ್ಪೊರೇಟ್ ದಣಿಗಳಿಗೆ ಪ್ರತಿಫಲ ಸಂದಾಯ ಮಾಡುವ ಆತುರದಲ್ಲಿದೆ ಎಂಬುದನ್ನು ತೋರಿಸುತ್ತದೆ ಎಂದು ಈ ಕುರಿತು ಟಿಪ್ಪಣಿ ಮಾಟುತ್ತ ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಹೇಳಿದೆ. ಈ ಕುರಿತ ಅದರ ಹೇಳಿಕೆಯನ್ನು ಇಲ್ಲಿ ಕೊಡಲಾಗಿದೆ:

ಕೇಂದ್ರದ ಬಿಜೆಪಿ ಸರ್ಕಾರ ತಮಗೆ ಸಹಾಯ ಮಾಡಿದ್ದ ಕಾರ್ಪೊರೇಟ್ ಧಣಿಗಳಿಗೆ 'ಪ್ರತಿಫಲ ಸಂದಾಯ'ದ ತರಾತುರಿಯಲ್ಲಿದೆ, ಅದಕ್ಕಾಗಿ ಕಾರ್ಮಿಕ ಕಾನೂನುಗಳ ಸುಧಾರಣೆಗಳ ಹೆಸರಿನಲ್ಲಿ ಆತುರಾತುರವಾಗಿ ಈಗಿರುವ ಕಾರ್ಮಿಕ ಕಾನೂನುಗಳ ಜಾಗದಲ್ಲಿ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ತರುವ ಪ್ರಯತ್ನದಲ್ಲಿದೆ. ಇವು ಕಾರ್ಮಿಕರಿಗೆ ಕಾನೂನುಬದ್ಧವಾಗಿ ಇರುವ ಹಕ್ಕುಗಳನ್ನು ಮತ್ತು ರಕ್ಷಣೆಗಳನ್ನು ಸಂಪೂರ್ಣವಾಗಿ ತೆಗೆದು ಹಾಕುತ್ತವೆ ಅಥವ ಬಹುವಾಗಿ ದುರ್ಬಲಗೊಳಿಸುವಂತವುಗಳು.

ಜುಲೈ 10, 2019ರಂದು ಕೇಂದ್ರ ಕಾರ್ಮಿಕ ಸಚಿವರು ಇತರರೊಂದಿಗೆ ಪತ್ರಿಕಾಗೋಷ್ಠಿ ನಡೆಸಿ 'ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಷರತ್ತುಗಳ ಮಸೂದೆ 2019'ನ್ನು ಕೇಂದ್ರ ಸಂಪುಟದ ಸಭೆಯು ಮಂಜೂರಾತಿ ನೀಡಿದೆ ಎಂದು ತಿಳಿಸಿದ್ದಾರೆ. ಈ ಮಸೂದೆಯು ಹಾಲಿ ಅಸ್ತಿತ್ವದಲ್ಲಿರುವ 13 ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿದೆ, ಮತ್ತು ಈ ಕಾನೂನುಗಳಲ್ಲಿರುವ ಮಾಲಕರಿಗೆ ಅನುಕೂಲಕರವಾದದ್ದನ್ನು ಮಾತ್ರ ಆಯ್ದುಕೊಂಡಿರುವ, ಅವುಗಳಲ್ಲಿ ಕಾರ್ಮಿಕರ ಹಕ್ಕುಗಳಿಗೆ, ರಕ್ಷಣೆಗೆ ಸಂಬಂಧಪಟ್ಟ ಎಲ್ಲ ನಿಯಮ-ಉಪನಿಮಯಗಳನ್ನು ಸಂಪೂರ್ಣವಾಗಿ ದುರ್ಬಲಗೊಳಿಸಿರುವ, ಇಲ್ಲವೇ ಹಾಳುಗೆಡವಿರುವ ಮಸೂದೆ.

ಆರೋಗ್ಯ ಮತ್ತು ಸುರಕ್ಷತೆಯು ವಿಷಯಗಳಲ್ಲಿಯೂ ಸಹ ನಿಯಮಾವಳಿಗಳು ಸರಿಯಾಗಿ ಜಾರಿಯಾಗುವಂತೆ, ಅಥವ ಮಾಲಕರನ್ನು ಉಲ್ಲಂಘನೆಗಳಿಗೆ ಹೊಣೆಗಾರರನ್ನಾಗಿ ಮಾಡಲು ಕಾರ್ಮಿಕರಾಗಲೀ, ಕಾರ್ಮಿಕರ ಸಂಘಗಳಾಗಲೀ ತಮ್ಮ ಅಭಿಪ್ರಾಯಗಳನ್ನು ಮತ್ತು ಹಕ್ಕನ್ನು ಚಲಾಯಿಸಲು ಸಾಧ್ಯವಾಗದ ರೀತಿಯಲ್ಲಿ ಈ ಸಂಹಿತೆಯನ್ನು ರೂಪಿಸಲಾಗಿದೆ. ಮೂಲಭೂತ ಆರೋಗ್ಯ ಮತ್ತು ಸುರಕ್ಷತೆಯ ಅಂಶಗಳನ್ನು ಪಾಲಿಸದಿರುವುದು ದೇಶಾದ್ಯಂತ ಎಲ್ಲ ವಲಯಗಳಲ್ಲೂ ಸಾಮಾನ್ಯವಾಗಿ ಕಾಣುವ ಸಂಗತಿ. ಇದರಿಂದಾಗಿ ಪ್ರತಿದಿನ ಅಂಗವೈಕಲ್ಯತೆ ತರುವ ಗಾಯಗಳು, ಪ್ರಾಣಹಾನಿಗಳು ಸಂಭವಿಸುತ್ತಿವೆ. ಹೆಚ್ಚಾಗುವಂತೆ ಈ ಮಸೂದೆ ಎಂದು ಆಪಾದಿಸಿದೆ.

ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ತೀವ್ರ ಮತ್ತು ನಿರ್ದಿಷ್ಟ ವಿರೋಧವನ್ನು ಸಂಪೂರ್ಣವಾಗಿ ಉಪೇಕ್ಷಿಸಿ ಇಂತಹ ಕಾರ್ಮಿಕ-ವಿರೋಧಿ, ಮಾಲಕ-ಪರ ಕಸರತ್ತಿಗೆ ಇಳಿದಿರುವ ಸರಕಾರದ ನಡೆ ಸಂಪೂರ್ಣವಾಗಿ ಖಂಡನೀಯ. ಇದನ್ನು ಕಟುವಾಗಿ ವಿರೋಧಿಸಬೇಕಾಗಿದೆ.

'ನೆಲಮಟ್ಟದ ರಾಷ್ಟ್ರೀಯ ಕನಿಷ್ಟ ವೇತನ' ನಾಚಿಕಗೇಡಿನ ಹಾಸ್ಯಾಸ್ಪದ ನಿರ್ಧಾರಕ್ಕೆ 'ಹೆಮ್ಮೆ'ಪಡುವ ಸರಕಾರ!

ಇದೇ ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಕಾರ್ಮಿಕ ಸಚಿವರು ಬಿಜೆಪಿ ಸರಕಾರ ಉದಾರ ಮನಸ್ಸಿನಿಂದ 'ವೇತನಗಳ ಸಂಹಿತೆ ಮಸೂದೆ 2019'ಕ್ಕೆ ಮಂಜೂರಾತಿ ನೀಡಿದೆ ಮತ್ತು ದಿನವೊಂದಕ್ಕೆ ರೂ. 178 ರೂಪಾಯಿಗಳು (26 ದಿನಗಳಿಗೆ ಮಾಸಿಕ ರೂ.4628) 'ರಾಷ್ಟ್ರೀಯ ನೆಲಮಟ್ಟದ ಕನಿಷ್ಟ ವೇತನ'ವನ್ನು ಕೂಡಾ ನಿರ್ಧರಿಸಿದೆ, ಇದಕ್ಕಿಂತ ಕಡಿಮೆ ವೇತನವನ್ನು ನಿಗದಿಗೊಳಿಸಲು ಯಾವ ರಾಜ್ಯ ಸರ್ಕಾರಕ್ಕೂ ಬಿಡುವುದಿಲ್ಲ ಎಂದು ಜಂಭದಿಂದ ಹೇಳಿದರು. ಈ ಪ್ರಕಟಣೆಯೇ ಅದರಲ್ಲಿನ ಮೋಸವನ್ನು ಬಯಲಿಗೆ ತಂದಿದೆ. ಏಕೆಂದರೆ ಇದಕ್ಕಿಂತ ಕಡಿಮೆ ನಿಗದಿ ಮಾಡದಂತೆ ರಾಜ್ಯ ಸರಕಾರವನ್ನು ಬಲವಂತ ಮಾಡಲು ಒಂದು ಶಾಸನಬದ್ಧ ವ್ಯವಸ್ಥೆ ಇರಬೇಕಾಗುತ್ತದೆ. ಈ ಮಸೂದೆ ಅಂತಹ ಅಂಶವನ್ನೇ ಹೊಂದಿಲ್ಲ.

ಎರಡನೆಯದಾಗಿ, ಕೇಂದ್ರ ಸರ್ಕಾರವು ಇಂತಹ ನೆಲಮಟ್ಟದ ಕನಿಷ್ಠ ವೇತನವನ್ನು ದಿನಕ್ಕೆ 178 ರೂಪಾಯಿ, ಮಾಸಿಕ 4,628/- ರೂಪಾಯಿಗಳೆಂದು ಘೋಷಿಸಿರುವುದು ತನ್ನ ಉದಾರತೆ ಎಂದು ಹೆಮ್ಮೆಪಡುತ್ತಿರುವುದು ಅತ್ಯಂತ ನಾಚಿಕೆಗೇಡಿನ ಮತ್ತು ಹಾಸ್ಯಾಸ್ಪದ ವಿಷಯವಾಗಿದೆ. ಈಗಾಗಲೇ ದೇಶದ 31 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕನಿಷ್ಠ ವೇತನವು ದಿನವೊಂದಕ್ಕೆ 178 ರೂಪಾಯಿಗಳಿಗಿಂತ ಬಹಳಷ್ಟು ಮೇಲಿದೆ. ಕೇಂದ್ರ ಸರ್ಕಾರದ ಈ ಕನಿಷ್ಠ ವೇತನದ ಪ್ರಕಟಣೆ ರಾಜ್ಯ ಸರ್ಕಾರಗಳನ್ನು ಹಾಗೂ ಮಾಲೀಕರನ್ನು ಕನಿಷ್ಟ ವೇತನವನ್ನು ಕಡಿತ ಮಾಡಲು ನೇರವಾಗಿ ಪ್ರಚೋದಿಸುವಂತಿದೆ, ಉತ್ತೇಜಿಸುವಂತಿದೆ ಮತ್ತು ಮಾಲಕರ ಲೂಟಿಯನ್ನು ಸಲುಲಭಗೊಳಿಸಲಿಕ್ಕಾಗಿ ವೇತನಗಳನ್ನು ಮತ್ತಷ್ಟು ಕಡಿತಗೊಳಿಸಲು ಈ 'ರಾಷ್ಟ್ರೀಯ ನೆಲಮಟ್ಟ' ಅನುವು ಮಾಡಿಕೊಡುತ್ತದೆ.

'ಸಬ್ ಕಾ ವಿಶ್ವಾಸ್'ನ ಜಪದ ನಿಜಮುಖ


ಹದಿನೈದನೇ ಭಾರತೀಯ ಕಾರ್ಮಿಕ ಸಮ್ಮೇಳನವು ಹಾಗೂ 1992ರಲ್ಲಿ ಸರ್ವೋಚ್ಛ ನ್ಯಾಯಾಲಯವು ರಕ್ತಕೋಸ್ ಬ್ರೆಟ್ ಪ್ರಕರಣದಲ್ಲಿ ಕನಿಷ್ಠ ವೇತನವನ್ನು ನಿಗದಿಗೊಳಿಸಲು (2700 ಕ್ಯಾಲೊರಿ ಆಹಾರ ಇತ್ಯಾದಿ ಆಧಾರಿತವಾಗಿ ನಿರ್ಧರಿಸಿದ ಸೂತ್ರವನ್ನು ಸರ್ಕಾರ ನಿರ್ಲಕ್ಷಿಸಿದೆ. ಇದೇ ಸೂತ್ರವನ್ನು 44, 45 ಮತ್ತು 2014ರಲ್ಲಿ ನಡೆದ 46ನೇ ಭಾರತೀಯ ಕಾರ್ಮಿಕ ಸಮ್ಮೇಳನಗಳು ಮತ್ತೆ ಸರ್ವಾನುಮತದಿಂದ ಶಿಫಾರಸು ಮಾಡಿದವು. ಈ ಪ್ರಕ್ರಿಯೆಯಲ್ಲಿ ಭಾರತ ಸರ್ಕಾರವೂ ಭಾಗಿಯಾಗಿತ್ತು. ಈ ಸೂತ್ರದನ್ವಯ 2016ರಲ್ಲಿ ಕನಿಷ್ಟ ವೇತನ 18 ಸಾವಿರ (ದಿನಕ್ಕೆ 692.30) ರೂಪಾಯಿಗಳು ಆಗುತ್ತದೆ. ಏಳನೇ ವೇತನ ಆಯೋಗವು ಕೂಡ ಇದನ್ನೇ ಶಿಫಾರಸು ಮಾಡಿತು.

ಇದಾದ ನಂತರ 2018ರಲ್ಲಿ ಇದೇ ಕೇಂದ್ರ ಬಿಜೆಪಿ ಸರ್ಕಾರದ ಕಾರ್ಮಿಕ ಸಚಿವರು ಕನಿಷ್ಟ ವೇತನ ಮತ್ತು ಅದನ್ನು ನಿಗದಿಗೊಳಿಸುವ ವಿಧಾನಗಳ ಕುರಿತು ನಿರ್ಧರಿಸಲು ಒಂದು ತಜ್ಞರ ಸಮಿತಿಯನ್ನು ರಚಿಸಿದರು. ಈ ತಜ್ಞರ ಸಮಿತಿಯು ಭಾರತೀಯ ಕಾರ್ಮಿಕ ಸಮ್ಮೇಳನದ ಸರ್ವಾನುಮತದ ಶಿಫಾರಸುಗಳಾದ 2700 ಕ್ಯಾಲೊರಿ ಆಹಾರ ಸೂತ್ರವನ್ನು ತನಗೆ ತೋಚಿದ ರೀತಿಯಲ್ಲಿ 2400 ಕ್ಯಾಲೊರಿಗೆ ಇಳಿಸಿತು. ಅಲ್ಲದೆ ಕನಿಷ್ಠ ವೇತನದ ಲೆಕ್ಕಾಚಾರಕ್ಕೆ ಅಗತ್ಯವಾದ ವಸ್ತುಗಳ ದರಗಳನ್ನು 2012ರ ಮಾರುಕಟ್ಟೆಯ ದರದಂತೆ ಪರಿಗಣಿಸಿ ಕನಿಷ್ಠವೇತನವನ್ನು ದಿನಕ್ಕೆ 375 ರೂ.ನಿಂದ 447 ರೂಪಾಯಿಗಳಿಗೆ (ಮಾಸಿಕ ರೂ.9750 ರಿಂದ 11,622) ಶಿಫಾರಸು ಮಾಡಿತು.

ಕಾರ್ಪೊರೇಟ್ ದಣಿಗಳ ಕೆಂಗಣ್ಣಿಗೆ ಹೆದರಿ ತನ್ನದೇ ತಜ್ಞರ ಸಮಿತಿಯ ಉಪೇಕ್ಷೆ

ಆದರೂ ಈ ಶಿಫಾರಸು ಕಾರ್ಪೊರೇಟ್ ಬಂಡವಾಳದಾರರ ಮಲಕರುಗಳ ಕೆಂಗಣ್ಣಿಗೆ ಗುರಿಯಾಯಿತು. ಅವರುಗಳು ಈ ಬಹಳ ಉದಾರ ಎಂದು ಹೇಳಿಕೊಳ್ಳುವ ಸರಕಾರ ತನ್ನದೇ ತಜ್ಞರ ಸಮಿತಿಯ ಶಿಫಾರಸುಗಳ ಪ್ರಕಾರ ನೆಲಮಟ್ಟದ ಕನಿಷ್ಟ ವೇತನವನ್ನು ನಿರ್ಧರಿಸಲು ಬಿಡಲಿಲ್ಲ. ಅವರ ಅಡಿಯಾಳು ಸರಕಾರ ಈಗ ನಾಚಿಕೆಯಿಲ್ಲದೆ ದಿನವೊಂದಕ್ಕೆ 178 ರೂಪಾಯಿ ನೆಲಮಟ್ಟದ ಕನಿಷ್ಟ ವೇತನವನ್ನು ಪ್ರಕಟಿಸಿದೆ. ಇದು ಎಲ್ಲರನ್ನೂ ಒಳಗೊಳ್ಳುವಿಕೆಯ ಅಭಿವೃದ್ಧಿ ಎಂದು ಜಪ ಮಾಡುತ್ತಿರುವ ಬಿಜೆಪಿ ಸರ್ಕಾರದ ಎರಡನೇ ಅವತಾರದ ನಿಜ ಮುಖವಾಗಿದೆ.

ಸಿಐಟಿಯು ಇಂತಹ ಕಾರ್ಮಿಕ ವಿರೋಧಿ ನೀತಿಯನ್ನು, ಕನಿಷ್ಟ ಕೂಲಿಗಳು ಮತ್ತು ಕಾರ್ಮಿಕ ಕಾನೂನು ಸುಧಾರಣೆ ಕುಇತಂತೆ ಬಿಜೆಪಿ ಸರ್ಕಾರದ ನಡೆಯನ್ನು ಖಂಡಿಸುತ್ತದೆ. ಇಂತಹ ವಿನಾಶಕಾರಿ ನಡೆಯನ್ನು ಐಕ್ಯತೆಯಿಂದ ವಿರೋಧಿಸಬೇಕು, ಪ್ರತಿರೋಧಿಸಬೇಕು ಮತ್ತು ಮುಂಬರುವ ದಿನಗಳಲ್ಲಿ ದೇಶವ್ಯಾಪಿ ಐಕ್ಯ ಹೋರಾಟಕ್ಕೆ ಸಿದ್ಧವಾಗಬೇಕು ಎಂದು ಎಲ್ಲ ಕಾರ್ಮಿಕರು ಮತ್ತು ಅವರ ಕಾರ್ಮಿಕ ಸಂಘಗಳಿಗೆಲ್ಲ ಸಿಐಟಿಯು ಕರೆ ನೀಡುತ್ತದೆ.



ಚಿತ್ರಕೃಪೆ: ನ್ಯೂಸ್‌ಕ್ಲಿಕ್.ಇನ್

'ರಾಷ್ಟ್ರೀಯ ನೆಲಮಟ್ಟದ ಕನಿಷ್ಟ ವೇತನ'ಕ್ಕಿಂತ ಕಡಿಮೆ ವೇತನವನ್ನು ನಿಗದಿಗೊಳಸಲು ಯಾವ ರಾಜ್ಯ ಸರ್ಕಾರಕ್ಕೂ ಬಿಡುವುದಿಲ್ಲ ಎಂದು ಕೇಂದ್ರ ಕಾರ್ಮಿಕ ಸಚಿವರು ಜಂಭದಿಂದ ಹೇಳಿದರು. ಈ ಪ್ರಕಟಣೆಯೇ ಅದರಲ್ಲಿನ ಮೋಸವನ್ನು ಬಯಲಿಗೆ ತಂದಿದೆ.

ಏಕೆಂದರೆ ಇದಕ್ಕಿಂತ ಕಡಿಮೆ ನಿಗದಿ ಮಾಡದಂತೆ ರಾಜ್ಯ ಸರಕಾರವನ್ನು ಬಲವಂತ ಮಾಡಲು ಒಂದು ಶಾಸನಬದ್ಧ ವ್ಯವಸ್ಥೆ ಈ ಮಸೂದೆ ಹೊಂದಿಲ್ಲ.

ಎರಡನೆಯದಾಗಿ, ಕೇಂದ್ರ ಸರ್ಕಾರವು ಇಂತಹ ನೆಲಮಟ್ಟದ ಕನಿಷ್ಠ ವೇತನವನ್ನು ದಿನಕ್ಕೆ ರೂ.178, ಮಾಸಿಕ ರೂ. 4,628/-ಗಳೆಂದು ಘೋಷಿಸಿರುವುದು ತನ್ನ ಉದಾರತೆ ಎಂದು ಹೆಮ್ಮೆಪಡುತ್ತಿರುವುದು ಅತ್ಯಂತ ನಾಚಿಕೆಗೇಡಿನ ಮತ್ತು ಹಾಸ್ಯಾಸ್ಪದ ವಿಷಯವಾಗಿದೆ.

ಏಕೆಂದರೆ ಈಗಾಗಲೇ ದೇಶದ 31 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕನಿಷ್ಠ ವೇತನವು ದಿನವೊಂದಕ್ಕೆ 178 ರೂ. ಗಳಿಗಿಂತ ಬಹಳಷ್ಟು ಮೇಲಿದೆ.

ರೈತ-ವಿರೋಧಿ ಧೋರಣೆಗಳ ವಿರುದ್ಧ ಕಾರ್ಯಾಚರಣೆಗಳನ್ನು ತೀವ್ರಗೊಳಿಸಲು ಎಐಕೆಸಿ ನಿರ್ಧಾರ

ಜುಲೈ 22– ಅರಣ್ಯ ಕಾಯ್ದೆ ತಿದುಪಡಿ ವಿರುದ್ಧ ಆದಿವಾಸಿ ಪ್ರತಿಭಟನೆಗೆ ಬೆಂಬಲ; ಆಗಸ್ಟ್ 3–ರೈತರಿಗೆ ಬಿಜೆಪಿ ಸರಕಾರದ ವಿಶ್ವಾಸಘಾತದ ವಿರುದ್ಧ ಮತಪ್ರದರ್ಶನ; ಸಪ್ಟಂಬರ್ 5– ನಾಚಿಕೆಹೀನ ಕನಿಷ್ಟ ಕೂಲಿ ಪ್ರಕಟಣೆಯ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆ

ಪುಟ 2 ರಿಂದ

ಬಾರಿಯ ಅಭೂತಪೂರ್ವ ಬರಗಾಲವನ್ನು ಒಂದು ರಾಷ್ಟ್ರೀಯ ಅನಾಹುತ ಎಂದು ಘೋಷಿಸಬೇಕು ಮತ್ತು ಅದರನುಸಾರ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ಣಯ ಆಗ್ರಹಿಸಿದೆ. ಬೆಳೆ ನಷ್ಟಗಳಿಗೆ ಪರಿಹಾರ, ಪುಕ್ಕಟೆ ರೇಶನ್, ಸಾಲಮನ್ನಾ, ಮತ್ತು ಮನರೇಗ ಅಡಿಯಲ್ಲಿ ಉದ್ಯೋಗ ನಿರ್ಮಾಣ ಈ ಕ್ರಮಗಳಲ್ಲಿ ಸೇರಿರಬೇಕು ಎಂದು ಅದು ಹೇಳಿದೆ. ವಿಮಾ ಕಂನಿಗಳು ಒಂದೆಡೆಯಲ್ಲಿ ರೈತರ ದಾವೆಗಳನ್ನು ಇತ್ಯರ್ಥ ಮಾಡುತ್ತಿಲ್ಲ, ಇನ್ನೊಂದೆಡಯಲ್ಲಿ ಅಪಾರ ಲಾಭಗಳಲ್ಲಿ ತೇಲುತ್ತಿವೆ ಎಂದು ಮಂಡಳಿ ಟೀಕಿಸಿದೆ. ಎಐಕೆಎಸ್ ಕಾರ್ಯಕರ್ತರು ಬರ ಪರಿಹಾರ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ, ಜತೆಗೆ ಸರಿಯಾದ ಪರಿಹಾರಕ್ಕಗಿ ಪ್ರತಿಭಟನೆಗಳನ್ನೂ ಸಂಘಟಿಸುತ್ತಾರೆ ಎಂದು ಎಐಕೆಸಿ ಹೇಳಿದೆ.

ಲಕ್ಷಾಂತರ ಆದಿವಾಸಿಗಳು ಮತ್ತು ಇತರ ಪಾರಂಪರಿಕ ಅರಣ್ಯವಾಸಿ ಸಮುದಾಯಗಳು ಫೆಬ್ರುವರಿ 13, 2019ರ ಸುಪ್ರಿಂ ಕೋರ್ಟ್ ತೀರ್ಪಿನಿಂದಾಗಿ ಒಕ್ಕಲೆಬ್ಬಿಸಲ್ಪಡುವ ಅಪಾಯವನ್ನು ಎದುರಿಸುತ್ತಿದ್ದಾರೆ. ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ದಾವೆಗಳು ತಿರಸ್ಕರಿಸಲ್ಪಟ್ಟಿದ್ದರೆ ಅಂತವರನ್ನು ಎಬ್ಬಿಸುವಂತೆ ಕೋರ್ಟ್ ರಜ್ಯಗಳಿಗೆ ನಿರ್ದೇಶನ ಕೊಟ್ಟಿತ್ತು. ದೇಶಾದ್ಯಂತ ಭುಗಿಲೆದ್ದ ಆಕ್ರೋಶ ಭುಗಿಲೆದಾಗ ಸುಪ್ರಿಂ ಕೋರ್ಟ್ ತನ್ನ ಆದೇಶವನ್ನು ತಿದ್ದುಪಡಿ ಮಾಡಿ ಜುಲೈ 10 ರ ವರೆಗೆ ಅದಕ್ಕೆ ತಡೆಯಾಜ್ಞೆಯನ್ನು ನೋಡಿತು. ಜುಲೈ 24 ರಂದು ಈ ಕುರಿತ ವಿವಿಧ ಅರ್ಜಿಗಳನ್ನು ಸುಪ್ರಿಂ ಕೋರ್ಟ್ ವಿಚಾರಣೆಗೆ ತಗೊಳ್ಳಲಿದೆ.

ಬಿಜೆಪಿ ಸರಕಾರ ಭಾರತೀಯ ಅರಣ್ಯ ಕಾಯ್ದೆ, 1927ಕ್ಕೂ ಕಾರ್ಪೊರೇಟ್ ಲೂಟಿ ಮತ್ತು ಬುಡಕಟ್ಟು ಜನಗಳ ಶೋಷಣೆಗೆ ಅನುಕೂಲ ಕಲ್ಪಿಸುವ ಕರಾಳ ತಿದ್ದುಪಡಿಗಳನ್ನು ಮಾಡಬೇಕೆಂದಿದೆ. ಜುಲೈ 1 ಮತ್ತು 2ರಂದು ದಿಲ್ಲಿಯಲ್ಲಿ ನಡೆದ ಭೂಮಿ ಮತ್ತು ಅರಣ್ಯ ಹಕ್ಕುಗಳ ಆಂದೋಲನಗಳ ಎರಡು ದಿನಗಳ ರಾಷ್ಟ್ರೀಯ ಸಮಾಲೋಚನಾ ಸಭೆ ಜುಲೈ 22ರಂದು ಇವುಗಳ ವಿರುದ್ಧ ಗ್ರಾಮ, ಬ್ಲಾಕ್, ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ಪ್ರತಿಭಟನಾ ಕಾರ್ಯಕ್ರಮಗಳನ್ನು, ಕಾರ್ಯಾಚರಣೆಗಳನ್ನು ನಿರ್ಧರಿಸಿದೆ. ಸುಪ್ರಿಂ ಕೋರ್ಟಿನಲ್ಲಿ ಅರಣ್ಯ ಹಕ್ಕುಗಳ ಕಾಯ್ದೆ ಮತ್ತು ಬುಡಕಟ್ಟು ಜನಗಳ ಹಕ್ಕುಗಳ ಪರವಾಗಿ ಮಧ್ಯಪ್ರವೇಶಿಸಬೇಕು ಎಂದು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಲಾಗಿದೆ.

ಅಖಿಲ ಭಾರತ ಕಿಸಾನ್ ಸಭಾ ತನ್ನ ಘಟಕಗಳಿಗೆ ಆದಿವಾಸಿ ಅಧಿಕಾರ ರಾಷ್ಟ್ರೀಯ ಮಂಚ್ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದೊಂದಿಗೆ ಜಂಟಿಯಾಗಿ ಹಾಗೂ ಭೂಮಿ ಅಧಿಕಾರ್ ಆಂದೋಲನದ ಘಟಕಗಳೊಂದಿಗೆ ದೇಶದಾದ್ಯಂತ ಜುಲೈ 22ರಂದು ಪ್ರತಿಭಟನೆಗಳನ್ನು ನಡೆಸಬೇಕು ಎಂದು ಕರೆ ನೀಡಿದೆ. ಅಂದು ದಿಲ್ಲಿಯ ಜಂತರ್ ಮಂತರ್‌ನಲ್ಲಿ ಬೆಳಿಗ್ಯೆ 11.30ಕ್ಕೆ ಒಂದು ಪ್ರತಿಭಟನೆ ನಡೆಯಲಿದೆ ಎಂದು ಎಐಕೆಸಿ ಹೇಳಿದೆ.

ರೈತರಿಗೆ ಸಂಬಂಧಪಟ್ಟಂತೆ ಸಂಸತ್ತು ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಪ್ರಕಾರ ಎಲ್ಲ ಬೆಳೆಗಳಿಗೆ ಫಲದಾಯಕ ಬೆಲೆಗಳನ್ನು ಕೊಡಬೇಕು ಮತ್ತು ಖರೀದಿಯ ಆಶ್ವಾಸನೆ ನೀಡಬೇಕು ಹಾಗೂ ರೈತರ ಎಲ್ಲ ಸಾಲಗಳನ್ನು ಮನ್ನಾ ಮಾಡಿ ಅವರನ್ನು ಸಾಲಗ್ರಸ್ತತೆಯಿಂದ ಮುಕ್ತಗೊಳಿಸಬೇಕು ಎಂಬುದನ್ನು ಕುರಿತ ಎರಡು ಮಸೂದೆಗಳನ್ನು ಖಾಸಗಿ ಸದಸ್ಯರ ಮಸೂದೆಗಳಾಗಿ ಸಂಸತ್ತಿನಲ್ಲಿ ಮಂಡಿಸಲಾಗಿದೆ. ಇವನ್ನು ಅಂಗೀಕರಿಸುವಂತೆ ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ)ಗೆ ರಾಷ್ಟ್ರಪತಿಗಳು ತನ್ನ ಅಧಿಕಾರವನ್ನು ಬಳಸುವುದಾಗಿ ಆಶ್ವಾಸನೆಯನ್ನೂ ನೀಡಿದ್ದರು.

ಎಐಕೆಎಸ್‌ಸಿಸಿ ಈಗ ಆಗಸ್ಟ್ 3ರಂದು ದೇಶಾದ್ಯಂತ ಎಲ್ಲ ಜಿಲ್ಲಾಧಿಕಾರಿ ಕಚೇರಿಗಳ ಮುಂದೆ ರ್‍ಯಾಲಿಗಳನ್ನು ನಡೆಸಿ ಸಂಸತ್ತು ಈ ಎರಡು ಮಸೂದೆಗಳನ್ನು ಅಂಗೀಕರಿಸಬೇಕು ಎಂದು ಆಗ್ರಹಿಸುವ ಮನವಿ ಪತ್ರಗಳನ್ನು ರಾಷ್ಟ್ರಪತಿಗಳಿಗೆ ತಲುಪಿಸಲು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು ಎಂದು ಕರೆ ನೀಡಿದೆ. ಎಐಕೆಸಿ ಸಭೆ **ಎಐಕೆಎಸ್‌ಸಿಸಿಯ ಈ ಪ್ರತಿಭಟನಾ ಕರೆಯನ್ನು ಅನುಮೋದಿಸಲು ನಿರ್ಧರಿಸಿದೆ ಹಾಗೂ ಬಿಜೆಪಿ ಸರಕಾರದ ಈ ವಿಶ್ವಾಸಘಾತದ ವಿರುದ್ಧ ಆಗಸ್ಟ್ 3ರಂದು ಪ್ರತಿಭಟನೆಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಬೇಕು ಮತ್ತು ಜಿಲ್ಲಾಧಿಕಾರಿಗಳು/ ಮ್ಯಾಜಿಸ್ಟ್ರೇಟ್‌ರಿಗೆ ಮನವಿಪತ್ರವನ್ನು ಸಲ್ಲಿಸಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.**

ನರೇಂದ್ರ ಮೋದಿ ನೇತೃತ್ವದ ಸರಕಾರ ಈಗಿರುವ ಕಾರ್ಮಿಕ ಕಾನೂನುಗಳಲ್ಲಿ ಪ್ರತಿಗಾಮಿ ಬದಲಾವಣೆಗಳನ್ನು ತರುತ್ತಿರುವುದರ ವಿರುದ್ಧ ಕಾರ್ಮಿಕರೊಂದಿಗೆ ಸೇರಿಕೊಂಡು ಹೋರಾಡಲು ಕೂಡ ಎಐಕೆಸಿ ನಿರ್ಧರಿಸಿದೆ. ಜುಲೈ 10ರಂದು ಕೇಂದ್ರ ಸಂಪುಟ 'ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಮಸೂದೆ, 2019'ಕ್ಕೆ ಮಂಜೂರಾತಿ ನೀಡಿದೆ. ಕೆಲಸದ ಅವಧಿಯನ್ನು 14 ಗಂಟೆಗಳ ವರೆಗೆ ವಿಸ್ತರಿಸುವ ನಿರ್ಧಾರ ಅಮಾನವೀಯವಾಗಿದೆ ಮತ್ತು ಕಾರ್ಮಿಕ ವರ್ಗದ ಆಂದೋಲನ ಹೋರಾಟಗಳ ಮೂಲಕ ಗಳಿಸಿದ ಹಕ್ಕುಗಳ ನಿರಾಕರಣೆಯಾಗಿದೆ. ಸಂಸತ್ತು ಈ ಮಸೂದೆಯನ್ನು ಅಂಗೀಕರಿಸಿದರೆ ಕಾರ್ಮಿಕ ಕಾನೂನಗಳ ರಕ್ಷಣೆ ಪಡೆದಿರುವ 70% ಕಾರ್ಮಿಕರನ್ನು ಅವುಗಳ ವ್ಯಾಪ್ತಿಯಿಂದ ಹೊರತು ಪಡಿಸಲಾಗುತ್ತದೆ, ಅವರನ್ನು ಮಾಲಿಕರ ಮರ್ಜಿಗೆ ಒಳಪಡಿಸಿದಂತಾಗುತ್ತದೆ. ಕೇಂದ್ರ ಸಂಪುಟ ನೆಲಮಟ್ಟದ ಕನಿಷ್ಟ ಕೂಲಿ ದಿನಕ್ಕೆ ರೂ.178(ತಿಂಗಳಿಗೆ 4628ರೂ.) ಎಂದು ಮಂಜೂರು ಮಾಡಿದೆ. ಇದು ಹೆಚ್ಚಿನ ರಾಜ್ಯಗಳಲ್ಲಿ ಈಗಾಗಲೇ ಇರುವ ಕನಿಷ್ಟ ಕೂಲಿಯ ಮಟ್ಟಕ್ಕಿಂತ ಬಹಳ ಕೆಳಮಟ್ಟದಲ್ಲಿದೆ. ಇದು ಕಾರ್ಪೊರೇಟ್ ಲಾಭಕೋರತನಕ್ಕಾಗಿ ಕೂಲಿ, ಸಂಬಳಗಳನ್ನು ಮತ್ತಷ್ಟು ಇಳಿಸಲು ಹಾದಿ ಮಾಡಿಕೊಡುತ್ತದೆ ಎಂದಿರುವ ಎಐಕೆಸಿ ಈ **ಕಾರ್ಮಿಕ–ವಿರೋಧಿ ಕ್ರಮಗಳ ವಿರುದ್ಧ ಸಪ್ಟಂಬರ್ 5, 2019 ರಂದು ಕಾರ್ಮಿಕ ಸಂಘಗಳೊಂದಿಗೆ ಸಂಯೋಜಿಸಕೊಂಡು ಒಂದು ದೇಶವ್ಯಾಪಿ ಪ್ರತಿಭಟನೆಗೆ** ಕರೆ ನೀಡಿದೆ.

ಅಸ್ಸಾಂ ಮತ್ತು ಹತ್ತಿರದ ರಾಜ್ಯಗಳಲ್ಲಿ ಗಂಭೀರ ಪ್ರವಾಹ ಪರಿಸ್ಥಿತಿ ಉಂಟಾಗಿರುವುದನ್ನು ಗಮನಿಸಿದ ಈ ಎಐಕೆಸಿ ಸಭೆ ಇದರಿಂದ ಬಾಧಿತರಾದವರೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸುವ ಮತ್ತು ಅವರುಗಳಿಗೆ ಸರಕಾರದಿಂದ ಪರಿಹಾರಕ್ಕೆ ಕರೆ ನೀಡುವ ಒಂದು ನಿರ್ಣಯವನ್ನು ಅಂಗೀಕರಿಸಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಎಲ್ಲ ನದಿ ವಿವಾದಗಳನ್ನು ಒಂದು ಏಕೈಕ ಅಂತರ–ರಾಜ್ಯ ನದಿ ನೀರು ಹಂಚಿಕೆ ವಿವಾದಗಳ ನ್ಯಾಯಮಂಡಳಿಯ ಅಡಿಗೆ ತರಬೇಕೆಂದು ನಿರ್ಧರಿಸಿರುವುದನ್ನು ಎಐಕೆಸಿ ಸಭೆ ವಿರೋಧಿಸಿದೆ. ಇದು ಬುಡಮಟ್ಟದ ವಾಸ್ತವತೆಗಳಿಂದ ಸಂಪರ್ಕ ಕಡಿದುಕೊಂಡಿರುವ, ಆಚರಣೆಗೆ ತರಲಾಗದ ಒಂದು ನಡೆ. ಏಕೆಂದರೆ ಇಂತಹ ವಿವಿಧ ವಿವಾದಗಳ ಇತ್ಯರ್ಥಗಳ ಪ್ರಯತ್ನಗಳು ದಶಕಗಳಿಂದ ನಡೆಯುತ್ತಿವೆ.

ಕಾವೇರಿ ಮುಖಜಭೂಮಿ ಕಲ್ಲಿದ್ದಲು ನೆಲೆ ಮಿಥೇನ್ ಸಂಗ್ರಹ ಪ್ರಾಜೆಕ್ಟನ್ನು ವಿರೋಧಿಸಿ ಇನ್ನೊಂದು ನಿರ್ಣಯವನ್ನು ಎಐಕೆಸಿ ಸಭೆ ಅಂಗೀಕರಿಸಿದೆ. ಈ ಯೋಜನೆ ಈ ಪ್ರದೇಶದಲ್ಲಿ ಕೃಷಿಗೆ ಸಾವಿನ ಗಂಟೆಯಾಗುತ್ತದೆ ಎಂದು ಅದು ಹೇಳಿದೆ.

ವಿದ್ಯುತ್ತಿನ ಹೈಟೆನ್ಶನ್ ಪವರ್ ಲೈನುಗಳು ಹಾದು ಹೋಗುವ ಜಮೀನುಗಳ ರೈತರಿಗೆ ಬಾಡಿಗೆ ಲಭ್ಯವಾಗಬೇಕು ಮತ್ತು ನೆಲದಡಿ ಕೇಬಲ್‌ಗಳು ಮತ್ತು ಅನಿಲ ಪೈಪ್‌ಲೈನುಗಳಿಗೆ ಹೆದ್ದಾರಿಗುಂಟ ಪರ್ಯಾಯ ಮಾರ್ಗಗಳನ್ನು ಶೋಧಿಸಬೇಕು ಎಂದೂ ಎಐಕೆಸಿ ಸಭೆ ಕರೆ ನೀಡಿದೆ.

ಉತ್ತರ ಬಿಹಾರದ 12 ಜಿಲ್ಲೆಗಳನ್ನು ತಟ್ಟಿರುವ ಪ್ರವಾಹದಿಂದ 25ಕ್ಕೂ ಹೆಚ್ಚು ಜನ ಸಾವಪ್ಪಿದ್ದಾರೆ. ಅವರ ಸಾವಿಗೆ ಸಂತಾಪ ಸೂಚಿಸಿರುವ ಎಐಕೆಸಿ ಸಭೆ ನೇಪಾಳದಲ್ಲಿ ಭಾರೀ ಮಳೆಯಿಂದಾಗಿ ನದಿಗಳಿಗೆ ಅಪಾರ ನೀರು ಬಂದು ಸೇರುತ್ತಿರುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡಬಹುದೆಮಬ ವರದಿಗಳ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ತ್ರಿಪುರ ಮತ್ತು ಉತ್ತರ ಬಂಗಾಲದ ಕೆಲವು ಭಾಗಗಳೂ ಪ್ರವಹ ಪೀಡಿತವಾಗಿವೆ ಎಂದು ವರದಿಯಾಗಿದೆ. ಪ್ರವಾಹ ಪೀಡಿತರೆಲ್ಲರನ್ನು ರಕ್ಷಿಸಲು ಮತ್ತು ಸರಿಯಾದ ಪರಿಹಾರ ನೀಡಲು ಕರೆ ನೀಡಿರುವ ಸಭೆ ಪ್ರವಾಹಪೀಡಿತ ಪ್ರದೇಶಗಳ ಎಐಕೆಎಸ್ ಘಟಕಗಳು ನೆರವಿನ ಪ್ರಯತ್ನಗಳಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದೆ.



ಕಾರ್ಮಿಕ–ರೈತ ಸಾಮಾಜಿಕ ಸಹಕಾರಿಗಳನ್ನು ಕುರಿತಂತೆ ರಾಷ್ಟ್ರೀಯ ಕಾರ್ಯಾಗಾರ

ಅಖಿಲ ಭಾರತ ಕಿಸಾನ್ ಮಂಡಳಿಯ ಸಭೆಯ ಮುನ್ನಾದಿನ 'ಕೃಷಿ ಬಿಕ್ಕಟ್ಟು ಮತ್ತು ಪರ್ಯಾಯಗಳನ್ನು ಕಟ್ಟುವಲ್ಲಿ ಕಾರ್ಮಿಕ–ರೈತ ಸಾಮಾಜಿಕ ಸಹಕಾರಿ ಸಂಘಗಳ ಪಾತ್ರ'ವನ್ನು ಕುರಿತಂತೆ ಒಂದುರಾಷ್ಟ್ರೀಯ ಕಾರ್ಯಾಗಾರ ನಡೆಯಿತು, ಕೇರಳದ ಹಣಕಾಸು ಮಂತ್ರಿ ಡಾ. ಥಾಮಸ್ ಐಸ್ಯಾಕ್ ಇದನ್ನು ಉದ್ಘಾಟಿಸಿದರು. ಪ್ರೊ. ವೆಂಕಟೇಶ ಆತ್ರೇಯ ದಿಕ್ಸೂಚಿ ಉಪನ್ಯಾಸವನ್ನು ಮಾಡಿದರು. ದೇಶದೆಲ್ಲೆಡೆಗಳಿಂದ 300ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

ಯಶಸ್ವಿ ಸಹಕಾರಿಗಳ ಅನುಭವಗಳನ್ನು ಹಂಚಿಕೊಳ್ಳಲಾಯಿತು ಮತ್ತು ಸಹಕಾರಿ ಕಾರ್ಯಾಚರಣೆಗಳಿಗೆ ಒಂದು ಆಂದೋಲನವನ್ನು ಕಟ್ಟುವ ಸಾಧ್ಯತೆಗಳನ್ನು ಚರ್ಚಿಸಲಾಯಿತು.



ದಲಿತರ ಮೇಲಿನ ದೌರ್ಜನ್ಯಗಳು, ಮೇಲ್ಜಾತಿ–ವರ್ಗಗಳಿಗೆ ಸೇರಿದ ಅಧಿಕಾರಸ್ಥರ ನಿರ್ದಯತೆ ಮತ್ತು ಅಮಾನುಷ ಧೋರಣೆಗಳು ಸಮಕಾಲೀನ ಭಾರತದಲ್ಲಿ ಬದುಕುತ್ತಿರುವ ಸಂವೇದನಾಶೀಲರಿಗೆ ಚಿರಪರಿಚಿತವಾದವುಗಳೇ. ಅವನ್ನೇ ನಮ್ಮ ಮುಂದೆ ಮತ್ತೆ ಮಂಡಿಸುವುದು ಈ ಸಿನೆಮಾದ ಉದ್ದೇಶವೂ ಇದ್ದಂತಿಲ್ಲ. ಆದರೆ ಅವುಗಳ ಮೂಲಕ ಭಾರತದ ಸಂವಿಧಾನದ ಚೌಕಟ್ಟಿನೊಳಗೆ ಸಮಾನತೆಯನ್ನು ಸಾಧಿಸಲು 'ಜೈಭೀಮ್–ಲಾಲ್ ಸಲಾಮ್' ಮಾದರಿಯ, ಎಡ–ದಲಿತ ಐಕ್ಯತೆಯ ಹೋರಾಟ ಇಂದಿನ ಅಗತ್ಯ ಎಂದು ಹೇಳುವುದು ಇರಬಹುದೆಂದು ಮೇಲುನೋಟಕ್ಕೆ ಅನ್ನಿಸುತ್ತದೆ. ಇಂಥ ಧೋರಣೆಯೊಂದಿಗೆ, ಭಾರತದ ಸಂವಿಧಾನದ ಚೌಕಟ್ಟಿನೊಳಗೇ ಅಸಂವಿಧಾನಿಕ ಶಕ್ತಿಗಳೊಂದಿಗೆ ಸೆಣಸಲು ಬೇಕಾದ ರಾಜಕೀಯ ಸಂವೇದನಾಶೀಲತೆಯನ್ನು ಯುವಜನರಲ್ಲಿ ಉದ್ದೀಪಿಸುವುದು ಈ ಚಿತ್ರದ ಒಟ್ಟು ಉದ್ದೇಶವಿರುವಂತೆ ತೋರುತ್ತದೆ. ಇದಕ್ಕಿಂತ ಹೆಚ್ಚಿನದನ್ನು ಈ ಚಿತ್ರದಿಂದ ನಿರೀಕ್ಷಿಸುವವರಿಗೆ ಖಂಡಿತವಾಗಿಯೂ ಇದೊಂದು ಸಾಧಾರಣ ಚಿತ್ರ.

'ಆರ್ಟಿಕಲ್ 15' – ಇನ್ನೊಂದು ಸಮೀಕ್ಷೆ

ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ, ಮೈಸೂರು.

ಉತ್ತರ ಪ್ರದೇಶದಲ್ಲಿರುವ ಆ ಊರಿನ ಹೆಸರು ಲಾಲ್ಗಾಂವ್ ಎಂದು– (ಅದು ಗುರ್ಗಾಂವ್, ಗುರುಗ್ರಾಮ, ಗೋರೆಗಾಂವ್ ಅಥವಾ ಭಾರತದ ಯಾವ 'ಗಾಂವ್' ಬೇಕಾದರೂ ಆಗಬಹುದು). ಆ ಊರಿಗೆ ಹೋಗುವ ರಸ್ತೆಯು ಕವಲೊಡೆದು ಒಂದು ಲಕ್ನೋಗೆ ಮತ್ತೊಂದು ಕೊಲ್ಕತ್ತಾಗೆ ಹೋಗುತ್ತವೆಯೆಂದು ಕೈಮರದ ಸೂಚನೆ ಹೇಳುತ್ತದೆ. ಅಲ್ಲಿಗೆ, ಶಿಕ್ಷೆಯ ವರ್ಗಾವಣೆಯ (ಪನಿಶ್ಮೆಂಟ್ ಟ್ರಾನ್ಸ್ಫರ್) ಪರಿಣಾಮವಾಗಿ ಬರುವ ಯುವ ಪೋಲಿಸ್ ಮುಖ್ಯಾಧಿಕಾರಿಯ ಆಗಮನವಾಗುತ್ತದೆ. ಅವನ ಕೈಕೆಳಗೆ ಕೆಲಸಮಾಡುವ ಹಿರಿಯ ವಯೋಮಾನದ ಸಿಬ್ಬಂದಿಯ ಅಧಿಕಾರ ಶ್ರೇಣಿಯ ಒಳಗೇ ಬ್ರಾಹ್ಮಣ, ಜಾಟ್, ದಲಿತ ಎಂಬ ಜಾತಿಶ್ರೇಣಿ ಇದೆ. ಬಹುಜನ ಪಕ್ಷ, ಕೇಸರಿಪಕ್ಷಗಳ ರಾಜಕೀಯದಲ್ಲಿ ಸಿಲುಕಿದ ದಲಿತ–ಬಡವರ ಅಸಹಾಯಕ ಸ್ಥಿತಿಯ ಸನ್ನಿವೇಶ ಇಲ್ಲಿದೆ. ಮಾಮೂಲಿನಂತೆ ಆ ಪ್ರದೇಶದ ಅಧಿಕಾರ ನಿಯಂತ್ರಣ, ಸ್ಥಳೀಯ ಪ್ರತ್ಯಕ್ಷ ರಾಜಕೀಯ ಶಕ್ತಿಗಳಾದ ಗುತ್ತಿಗೆದಾರ–ಗೂಂಡಾಗಳು ಮತ್ತು ಅಪ್ರತ್ಯಕ್ಷವಾಗಿ ಎಲ್ಲೋ ಕುಳಿತ ಅಧಿಕಾರಸ್ಥ ರಾಜಕಾರಣಿಗಳ ಕೂಟದ ಕೈಲಿದೆ. ಈ ಹಿನ್ನೆಲೆಯಲ್ಲಿ ಇಬ್ಬರು ದಲಿತ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಮಾಡಿ ಮಾಡಿ, ಕೊಂದು ಮರಕ್ಕೆ ನೇತು ಹಾಕಲಾಗಿದೆ. ಮೂರನೆಯ ದಲಿತ ಹುಡುಗಿ ನಾಪತ್ತೆಯಾಗಿದ್ದಾಳೆ. ದಲಿತ–ಬಡಜನರು ಅಸಹಾಯಕರಾಗಿ ನ್ಯಾಯದ ನಿರೀಕ್ಷೆಯಲ್ಲಿದ್ದಾರೆ.

ಪೋಲೀಸ್ ಮುಖ್ಯಸ್ಥನ ವಿಚಾರಣೆಯಲ್ಲಿ ತಿಳಿದುಬರುವಂತೆ, ಅಪ್ರಾಪ್ತವಯಸ್ಸಿನ ದಲಿತ ಹೆಣ್ಣುಮಕ್ಕಳ ಮೇಲೆ ನಡೆದಿರುವ ಅಮಾನುಷ ದೌರ್ಜನ್ಯಕ್ಕೆ ಕಾರಣ ಅವರ ಕೂಲಿಯಲ್ಲಿ 3 ರೂ. ಹೆಚ್ಚು ಮಾಡಿ ಎಂದು ಕೇಳಿದ್ದು. ವಿಚಾರಣೆಯು ಮುಂದುವರೆದಂತೆ ಸ್ಥಳೀಯ ಜಾತಿ ಮತ್ತು ವರ್ಗ ರಾಜಕೀಯಗಳನ್ನು ನಿಯಂತ್ರಿಸುವ ಶಕ್ತಿಗಳು ಮುನ್ನೆಲೆಗೆ ಬರತೊಡಗುತ್ತಾರೆ. ಪೋಲೀಸ್ ಅಧಿಕಾರ ಶ್ರೇಣಿಯಲ್ಲಿ ಮುಖ್ಯಸ್ಥನಿಗಿಂತ ಕೆಳಗಿರುವ, ಆದರೆ ಬಲಿಷ್ಠ ಜಾತಿ–ಬಲಿಷ್ಠವರ್ಗಗಳ ಜನರ ಕೈಯಾಳಾಗಿ ಹೆಚ್ಚು ಪ್ರಭಾವವುಳ್ಳ ಬ್ರಾಹ್ಮಣ ಪೋಲೀಸ್ ಅಧಿಕಾರಿಯು 'ಸಮಾಜದ ಸಮತೋಲನವನ್ನು' ಕಾಯ್ದುಕೊಳ್ಳಬೇಕೇ ಹೊರತು ಕೆಡಿಸಬಾರದು' ಎಂದು ಯುವ ಮುಖ್ಯಾಧಿಕಾರಿಯನ್ನು ಎಚ್ಚರಿಸಿ ಬುದ್ಧಿಹೇಳುತ್ತಾನೆ.

ಭಾರತದ ಸಂವಿಧಾನವು, ಆರ್ಟಿಕಲ್ 15 ರಲ್ಲಿ ವರ್ಗ–ಜಾತಿ–ಧರ್ಮ–ಲಿಂಗಾಧಾರಿತವಲ್ಲದ ಸರ್ವಸಮಾನತೆಯ ಹಕ್ಕು–ನ್ಯಾಯಗಳನ್ನು ಭಾರತದ ಪ್ರತಿಯೊಬ್ಬ ಪ್ರಜೆಗೂ ಕೊಡಮಾಡಿದೆ. ಅವುಗಳನ್ನು ಅನುಷ್ಠಾನಗೊಳಿಸುವ, ಅವನ್ನು ದಬ್ಬಾಳಿಕೆ–ದೌರ್ಜನ್ಯಗಳ ಮೂಲಕ ಮೊಟಕುಮಾಡುವ ಶಕ್ತಿಗಳನ್ನು ಕಾನೂನಿನ ರೀತ್ಯಾ ಹಿಡಿದು ಶಿಕ್ಷೆಗೊಳಪಡಿಸಿ ಸಮಾಜದ ದುರ್ಬಲವರ್ಗ–ಜಾತಿಗಳ ಜನರಪಾಲಿಗೆ, ಅದರಲ್ಲೂ ದುರ್ಬಲರಲ್ಲಿ ದುರ್ಬಲರಾದ ಹೆಣ್ಣುಮಕ್ಕಳ ಪಾಲಿಗೆ ರಕ್ಷಕನಾಗಿ ನ್ಯಾಯದೊರಕಿಸುವ ಹೊಣೆಯನ್ನು ಪೋಲೀಸ್ ಮುಖ್ಯಸ್ಥನು ತನ್ನಮೇಲೆ ಹಾಕಿಕೊಂಡಿದ್ದಾನೆ. ಇವರ ಮಧ್ಯೆ ದಲಿತರ ನ್ಯಾಯಕ್ಕಾಗಿ ಹೋರಾಡುವ, ಒಂದು ರೀತಿಯಲ್ಲಿ ಭೀಮ್ ಆರ್ಮಿಯ ಚಂದ್ರಶೇಖರ್ ಆಜಾದ್ ನನ್ನು ನೆನಪಿಸುವ, ಕ್ರಾಂತಿಕಾರಿ ದಲಿತ ನಾಯಕನಿದ್ದಾನೆ.

ವಿಚಾರಣೆಯು ಮುಂದುವರೆದಂತೆ ಶ್ರೇಣೀಕೃತ ಸಮಾಜದ ವರ್ಗ–ಜಾತಿ–ಅಧಿಕಾರದ ಅಂತಸ್ತು –ದೌರ್ಜನ್ಯ ಮತ್ತು ಹೋರಾಟಗಳ ಕಗ್ಗಂಟುಗಳನ್ನು ಪೊಲಿಸ್ ಮುಖ್ಯಾಧಿಕಾರಿಯು ಬಿಡಿಸಿಕೊಳ್ಳಬೇಕಾಗುತ್ತದೆ.

ಈ ಸ್ವಚ್ಛಭಾರತ್ ಅಭಿಯಾನದ ದಿನಗಳಲ್ಲಿಯೂ ಮಲಗುಂಡಿಯಲ್ಲಿ ಮುಖ ಮುಳುಗುವಂತೆ ಇಳಿದು (ಮೇಲ್ಜಾತಿ–ವರ್ಗಗಳ ಜನರ ಮಿದುಳೊಳಗೆ ಕಟ್ಟಿಕೊಂಡಿರುವ ಮಲವನ್ನು ಸ್ವಚ್ಛಮಾಡುವಂತೆ) ಮಲಗುಂಡಿಯನ್ನು ಸ್ವಚ್ಛಮಾಡುವ ಪೌರಕಾರ್ಮಿಕನ ದೃಶ್ಯ ಇಲ್ಲಿ ಸಿಗುತ್ತದೆ. ದಲಿತ ಯುವಕರನ್ನು ಅರೆಬೆತ್ತಲೆಮಾಡಿ ಥಳಿಸುವ ಬಲಿಷ್ಠರ ದೌರ್ಜನ್ಯದ



ದೃಶ್ಯವೂ ಇಲ್ಲಿ ಸಿಗುತ್ತದೆ. ಇದರ ಪ್ರತಿಭಟನೆಯಾಗಿ ದಲಿತ ಹೋರಾಟಗಾರರು, ಪೊಲೀಸ್ ಅಧಿಕಾರಿಗಳು ತಮ್ಮ ಸ್ಟೇಶನ್ನಿನ ಬಾಗಿಲಿಗೆ ಹೋಗಲೂ ಕಷ್ಟವಾಗುವಂತೆ ಬೀದಿ ಬೀದಿಗಳಲ್ಲಿ ಕಸ ಚೆಲ್ಲಿ ಪ್ರತಿಭಟಿಸುತ್ತಾರೆ. ಕಣ್ಮರೆಯಾಗಿರುವ ಅಪ್ರಾಪ್ತವಯಸ್ಸಿನ ಸಂತ್ರಸ್ತೆಗಾಗಿ ಹುಡುಕಾಟ ತೀವ್ರವಾಗುತ್ತದೆ. ಹಾಗೆಯೇ ಪೊಲೀಸ್ ಮುಖ್ಯಸ್ಥನ ಹೆಂಡತಿ–ಗೆಳತಿ–ಸಹ ಹೋರಾಟಗಾರಳಾಗಿ, ಅವನ ಪರವಾಗಿ ಸುದ್ದಿಮಾಧ್ಯಮಗಳೊಂದಿಗೆ ಸಂಪರ್ಕ ಸಾಧಿಸುತ್ತಾಳೆ. ಈ 'ಕತ್ತಲ ರಾಜ್ಯ'ದ ಬಗ್ಗೆ ಮತ್ತು ಹೊರಪ್ರಪಂಚಕ್ಕೆ ಅರಿವು ಮೂಡಿಸುವ ಕೆಲಸವನ್ನು ಆಕೆ ಮಾಡುತ್ತಾಳೆ. ಸಮಾನತೆಯ ಪರವಾದ ಹೋರಾಟದಲ್ಲಿ ನಗರಕೇಂದ್ರಿತ ಮಹಿಳೆಯ ಬೆಂಬಲ ಸಹಕಾರಿಯಾಗುತ್ತದೆ. ಸಿನೆಮಾ ಚೌಕಟ್ಟಿನೊಳಗೆ ಅನ್ಯಾಯದ ವಿರುದ್ಧವಾದ, ಮಾನವೀಯತೆಯ ಪರವಾದ ಶಕ್ತಿಗಳ ಕೈ ನಿಧಾನವಾಗಿ ಮೇಲಾಗುತ್ತಿದ್ದಂತೆ ನ್ಯಾಯ ದೊರಕುವ ಸಂಭವಗಳು ಹೆಚ್ಚಾದಂತೆ ಅನ್ನಿಸುತ್ತಿರುವಾಗಲೇ ವಿಚಾರಣೆಯನ್ನು ಸ್ಥಗಿತಗೊಳಿಸಲು ಸಿಬಿಐ ಅಧಿಕಾರಿಯ ಆಗಮನವಾಗುತ್ತದೆ. ತಲೆಮರೆಸಿಕೊಂಡಿದ್ದ ದಲಿತ ಕ್ರಾಂತಿಕಾರಿಯನ್ನು ಪತ್ತೆಮಾಡಿ ಅವನನ್ನು ಅವನ ಸಹಚರರ ಜೊತೆ ಸುಳ್ಳು ಎನ್ಕೌಂಟರ್ ನಲ್ಲಿ ಕೊಲ್ಲಲಾಗುತ್ತದೆ.

ಚಿಕ್ಕವಯಸ್ಸಿನ ಪೊಲೀಸ್ ಮುಖ್ಯಸ್ಥನನ್ನು ಅಮಾನತ್ತಿನಲ್ಲಿಡುವುದಕ್ಕಾಗಿ ತಲೆನೆರೆತ ಸಿಬಿಐ ಅಧಿಕಾರಿಯು ವಿಚಾರಣೆಗೊಳಪಡಿಸುತ್ತಾನೆ. ಆ ಸಂದರ್ಭದಲ್ಲಿ ಅಮಾನತಿಗೆ ಒಳಪಡಬೇಕಾದ ಪೊಲೀಸ್ ಮುಖ್ಯಸ್ಥನೇ ಸಿಬಿಐ ಅಧಿಕಾರಿಗೆ ಭಾರತದ ಸಂವಿಧಾನದ ಪಾವಿತ್ರ್ಯತೆ ಬಗ್ಗೆ, ಅದು ಪ್ರತಿಯೊಬ್ಬ ನಾಗರಿಕನಿಗೂ ಕೊಡಮಾಡಿರುವ ಸಮಾನತೆಯ ಹಕ್ಕಿನ ಬಗ್ಗೆ ಹೇಳುತ್ತಾನೆ. ಸಂವಿಧಾನದ ಅಡಿಯಲ್ಲಿ ಅಧಿಕಾರ ಪಡೆದು, ಮಾನವ ಘನತೆಯನ್ನು ಅಡವಿಟ್ಟು, ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವ ಅಧಿಕಾರಸ್ಥರ ಅಸಂವಿಧಾನಕತೆಯ ಬಗ್ಗೆ 'ಕ್ಲಾಸ್' ತೆಗೆದುಕೊಳ್ಳುತ್ತಾನೆ. ದಲಿತ ಹೆಣ್ಣುಮಕ್ಕಳು ಕೇಳಿದ ಹೆಚ್ಚುವರಿ ಕೂಲಿ ಸಿಬಿಐ ಅಧಿಕಾರಿಯ ಕೈಲಿರುವ ಒಂದು ಲೋಟ ನೀರಿನ ಬೆಲೆ ಅಷ್ಟೆ. ಅದನ್ನು ಕೇಳಿದ ತಪ್ಪಿಗೆ ಸಮಾನತೆ ಹಾಗಿರಲಿ, ಅತ್ಯಾಚಾರಕ್ಕೆ ಬಲಿಯಾಗಿ ಜೀವಿಸುವ ಹಕ್ಕನ್ನೇ ಕಳೆದುಕೊಂಡ ದಲಿತ ಹೆಣ್ಣುಮಕ್ಕಳ ದುಃಸ್ಥಿತಿಯನ್ನು ಅವನಿಗೆ ನೆನಪಿಸುತ್ತಾನೆ.

ವ್ಯವಸ್ಥೆಯ ವಿರುದ್ಧದ ಹೋರಾಟದಲ್ಲಿ ಯುವ ಪೋಲಿಸ್ ಮುಖ್ಯಾಧಿಕಾರಿಯು ಸೋತನೇನೋ ಎಂದು ಅನ್ನಿಸುವ ಹೊತ್ತಿಗೆ, ಸಾಹಿತ್ಯ–ಕಲೆ–ಸಿನೆಮಾದಲ್ಲಿ ಶಿಷ್ಟಜನರ ಪಕ್ಷಪಾತಿಯಾದ ನಾಯಕನಿಗೆ, ಆ ಸಂದರ್ಭದಲ್ಲಿ, ಪರಿಹರಿಸಲಾಗದ ಸಂಕಷ್ಟ ಎದುರಾದಾಗ ಆಪತ್ ರಕ್ಷಕನಾಗಿ ಹೊರಗಿನಿಂದ ಬಂದ ರಕ್ಷಕನು ನೆರವಾಗುವಂತೆ, ಮೇಲಧಿಕಾರದ 'ಶಾಸ್ತ್ರಿ'ಯ (ಅಶರೀರ) ವಾಣಿಯು ಪೊಲೀಸ್ ಮುಖ್ಯಸ್ಥನಿಗೆ ಕರೆಮಾಡಿ ಸಂತ್ರಸ್ತೆಯ ಶೋಧನೆಯಲ್ಲಿ ಮುಂದುವರೆಯುವಂತೆ ತಿಳಿಸುತ್ತದೆ. ಪೋಲೀಸ್ ಮುಖ್ಯಸ್ಥನು ಭಾರತದ ಸಂವಿಧಾನದ ಆರ್ಟಿಕಲ್ 15 ರ ಒಕ್ಕಣೆಯನ್ನು ಭಿತ್ತಿಪತ್ರವನ್ನಾಗಿ ಮುದ್ರಿಸಿ ಸಾರ್ವಜನಿಕ ಸ್ಥಳಗಳಲ್ಲಿ ಅದರ ಮಹತ್ವವನ್ನು ಪ್ರಚುರ ಪಡಿಸುತ್ತಾನೆ. ತಪ್ಪಿಸಿಕೊಂಡ ಮಗು ಅಥವಾ ವ್ಯಕ್ತಿಯನ್ನು ಹುಡುಕಿಕೊಡಲು ಎಲ್ಲಾಕಡೆ ಅಂಟಿಸಿದ ಪೋಸ್ಟರುಗಳನ್ನು ಅವು ನೆನಪಿಸುತ್ತವೆ.

ಅಪಹರಿಸ್ಲಪಟ್ಟ ಸೀತೆಯ ಅನ್ವೇಷಣೆಯಲ್ಲಿ ಸಮುದ್ರವನ್ನು ಲಂಘಿಸಿದ ಹನುಮಂತ ಮಾಡಿದಂತೆ ಆಕಾಶದಲ್ಲಿ ಹಾರದೆ, ಬಲಿಷ್ಠರ ಅನ್ಯಾಯ–ದೌರ್ಜನ್ಯಗಳ ಸಂತ್ರಸ್ತೆಯಾದ ನತದೃಷ್ಟ ದಲಿತ ಹುಡುಗಿಯನ್ನು ಹುಡುಕಲು ಕಸ–ಕೊಚ್ಚೆ–ದುರ್ಗಂಧಗಳು ತುಂಬಿದ ಈ ನೆಲದ ಹಾದಿಯನ್ನು ತುಳಿಯುತ್ತಾನೆ. ಅಪಹರಿಸಲ್ಪಟ್ಟ ಸೀತೆಯ ಸುಳಿವು ಅವಳು ಎಸೆದ ಒಡವೆಗಳಿಂದ ಸಿಕ್ಕಿದಂತೆ ಕಣ್ಣರೆಯಾದ ದಲಿತ ಸಂತ್ರಸ್ತೆಯ ನೋವಿನ ಜಾಡು ಅವಳು ಬಿಟ್ಟಹೋದ ಚಪ್ಪಲಿಗಳಿಂದ ಸಿಗುತ್ತದೆ. ಜಾತಿಶ್ರೇಣಿಯಲ್ಲಿ ಮೇಲ್ಜಾತಿಯ ಬ್ರಾಹ್ಮಣನಾಗಿ, ಅಧಿಕಾರಶ್ರೇಣಿಯಲ್ಲಿ ಮೇಲಧಿಕಾರಿಯಾಗಿ, ಸಮಾನತೆಯ ನ್ಯಾಯ ಅನುಷ್ಠಾನದ ಹೋರಾಟದಲ್ಲಿ ಕೆಳಜಾತಿಯ, ಅದರಲ್ಲೂ ದಲಿತ ಜಾತಿ–ವರ್ಗದ ಸಹೋದ್ಯೋಗಿಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ಮನುಷ್ಯನಾಗಿ, ಅವರೊಂದಿಗೆ ಕೊಳೆ–ಕೆಸರು ತುಂಬಿದ (ಆದರೆ ಕಮಲಗಳಿಲ್ಲದ) ಕೆರೆಯಲ್ಲಿಳಿಯುತ್ತಾನೆ. ಜಾನಪದ ಕತೆಗಳಲ್ಲಿ ಏಳು ಸಮುದ್ರದಾಟಿ, ಬೀಳುಸಮುದ್ರದಾಚೆ ಇರುವ ಆಲದಮರದ ಬುಡದ ಗುಹೆಯಲ್ಲಿ ಅಪಹೃತ ರಾಜಕುಮಾರಿಯು ಪತ್ತೆಯಾಗುತ್ತಾಳೆ. ಆದರೆ ಇಲ್ಲಿ ಲಾಲ್ ಗಾಂವ್ ಊರಿನ ಜೌಗು ಕೆರೆ ಕೊಚ್ಚೆಗುಂಡಿಗಳನ್ನು ದಾಟಿ ಬಲಿಷ್ಠರ ದೌರ್ಜನ್ಯದ ತಾಣವಾದ ತೋಟದ ಮನೆಯಾಚೆ ನಿರ್ಜನ ಪ್ರದೇಶದ ಸಿಮೆಂಟು ಕೊಳವೆಯಲ್ಲಿ ,ಭಯ–ಹಸಿವುಗಳಿಂದ, ಅತ್ಯಾಚಾರದ ಕ್ರೌರ್ಯ–ಆಘಾತಗಳಿಂದ ಜರ್ಜರಿತಳಾದ ಸಂತ್ರಸ್ತೆ ಕೊನೆಗೂ ಸಿಗುತ್ತಾಳೆ.

ಕಲಾತ್ಮಕ ಸಿನೆಮಾದ ನಯಗಾರಿಕೆ, ಸೌಂದರ್ಯಾತ್ಮಕತೆ ಇತ್ಯಾದಿಯನ್ನು ಲಕ್ಷ್ಯದಲ್ಲಿರಿಸಿಕೊಳ್ಳದೆ, ವ್ಯಾಪಾರೀ ಸಿನೆಮಾದ ಒರಟು ಮನರಂಜನಾ ಶೈಲಿಯನ್ನೂ ಸಂಪೂರ್ಣವಾಗಿ ಅನುಸರಿಸದೆ, ಸಮಾನತೆಯ ಸಂವೇದನೆಯನ್ನು ವೀಕ್ಷಕರಲ್ಲಿ ಮೂಡಿಸುವುದೇ ಈ ಚಿತ್ರದ ಘನೋದ್ದೇಶವಾಗಿರುವಂತೆ ಕಾಣಿಸುತ್ತದೆ. 'ರೇಪ್' ದೌರ್ಜನ್ಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಸಂವಿಧಾನಾತ್ಮಕ ಸಮಾನತೆಯ ಆಗ್ರಹದ ಬಗ್ಗೆ ಪ್ರಸಕ್ತ ಭಾರತದ ಯುವಜನರಲ್ಲಿ ಎಚ್ಚರಮೂಡಿಸುವುದು ಎಲ್ಲಕ್ಕಿಂತಾ ಮುಖ್ಯವೆಂದು ಭಾವಿಸುವ ನಿರ್ದೇಶಕರ 'ಮೆಸೇಜ್ ಸಿನೆಮಾ' ಇದು. ಚಿತ್ರದ ದೃಶ್ಯವಿವರಗಳಿಗೆ ಹಿನ್ನೆಲೆಯಾಗಿ ಉದ್ದಕ್ಕೂ ಚರ್ಮವಾದ್ಯ ಪ್ರಧಾನದ ಸಾಂಗತ್ಯವನ್ನು ಒದಗಿಸುತ್ತಾ, ಕೊನೆಯಲ್ಲಿ ಶಾಸ್ತ್ರೀಯ–ಅರೆಶಾಸ್ತ್ರೀಯ–ಜಾನಪದ ಯಾವುದೂ ಅಲ್ಲದ ಯುವಜನತೆಗೆ ಪ್ರಿಯವಾಗಬಹುದಾದ ಜನಪ್ರಿಯ ರ್ಯಾಪ್ ಸಂಗೀತಧಾರೆಯಲ್ಲಿ ಚಿತ್ರವನ್ನು ಮುಗಿಸುವ ಕ್ರಮ ಈ ಉದ್ದೇಶಕ್ಕೆ ಪೂರಕವಾಗಿದೆ.

ಆರ್ಟಿಕಲ್ 15 ಬಳಸಿಕೊಂಡಿರುವ ವಾಸ್ತವದ ವಿವರಗಳಲ್ಲಿ ಅಥವಾ ಅವನ್ನು ಸಿನೆಮಾ ಆಗಿ ಕಟ್ಟಲು ಬಳಸಿರುವ ವಿಧಾನದಲ್ಲಿ ಹೊಸದೇನೂ ಇಲ್ಲ. ದಲಿತರ ಮೇಲಿನ ದೌರ್ಜನ್ಯಗಳು, ಮೇಲ್ಜಾತಿ–ವರ್ಗಗಳಿಗೆ ಸೇರಿದ ಅಧಿಕಾರಸ್ಥರ ನಿರ್ದಯತೆ ಮತ್ತು ಅಮಾನುಷ ಧೋರಣೆಗಳು ಸಮಕಾಲೀನ ಭಾರತದಲ್ಲಿ ಬದುಕುತ್ತಿರುವ ಸಂವೇದನಾಶೀಲರಿಗೆ ಚಿರಪರಿಚಿತವಾದವುಗಳೇ. ಅವನ್ನೇ ನಮ್ಮ ಮುಂದೆ ಮತ್ತೆ ಮಂಡಿಸುವುದು ಈ ಸಿನೆಮಾದ ಉದ್ದೇಶವೂ ಇದ್ದಂತಿಲ್ಲ. ಆದರೆ ಅವುಗಳ ಮೂಲಕ ಭಾರತದ ಸಂವಿಧಾನದ ಚೌಕಟ್ಟಿನೊಳಗೆ ಸಮಾನತೆಯನ್ನು ಸಾಧಿಸಲು 'ಜೈಭೀಮ್–ಲಾಲ್ ಸಲಾಮ್' ಮಾದರಿಯ, ಎಡ–ದಲಿತ ಐಕ್ಯತೆಯ ಹೋರಾಟ ಇಂದಿನ ಅಗತ್ಯ ಎಂದು ಹೇಳುವುದು ಇರಬಹುದೆಂದು ಮೇಲುನೋಟಕ್ಕೆ ಅನ್ನಿಸುತ್ತದೆ. ಇಂಥ ಧೋರಣೆಯೊಂದಿಗೆ, ಭಾರತದ ಸಂವಿಧಾನದ ಚೌಕಟ್ಟಿನೊಳಗೇ ಅಸಂವಿಧಾನಿಕ ಶಕ್ತಿಗಳೊಂದಿಗೆ ಸೆಣಸಲು ಬೇಕಾದ ರಾಜಕೀಯ ಸಂವೇದನಾಶೀಲತೆಯನ್ನು ಯುವಜನರಲ್ಲಿ ಉದ್ದೀಪಿಸುವುದು ಈ ಚಿತ್ರದ ಒಟ್ಟು ಉದ್ದೇಶವಿರುವಂತೆ ತೋರುತ್ತದೆ. ಇದಕ್ಕಿಂತ ಹೆಚ್ಚಿನದನ್ನು ಈ ಚಿತ್ರದಿಂದ ನಿರೀಕ್ಷಿಸುವವರಿಗೆ ಖಂಡಿತವಾಗಿಯೂ ಇದೊಂದು ಸಾಧಾರಣ ಚಿತ್ರ. ಇದಕ್ಕಿಂತ ಹೊರತಾದದ್ದನ್ನು ಈ ಚಿತ್ರದಲ್ಲಿ ಹುಡುಕುವವರಿಗೆ–'ಪೋಲಿಸ್ ಮುಖ್ಯಸ್ಥನು ತನ್ನನ್ನೇ 'ಸೇವಿಯರ್' ಸ್ಥಾನದಲ್ಲಿ ಇರಿಸಿಕೊಂಡು ಸಮಾನತೆಯ ಬಗ್ಗೆ ಚಿಂತಿಸುತ್ತಿದ್ದಾನೆಯೇ?' 'ಬ್ರಾಹ್ಮಣ–ಪಿತೃಪ್ರಧಾನ– ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧದ ಹೋರಾಟವು ಬ್ರಾಹ್ಮಣನೊಬ್ಬನ ಮುಂದಾಳತ್ವದಲ್ಲೇ ಏಕೆ ನಡೆಯಬೇಕು' ಎಂಬಂಥ ಪ್ರಶ್ನೆಗಳನ್ನು ಎತ್ತಲು ಅವಕಾಶವಿದೆ. ■

ಈ ಸರಕಾರ ಕೊಡುವ ಅಂಕೆ-ಸಂಖ್ಯೆಗಳ ಬಗ್ಗೆ ವಿಶ್ವಾಸವಿಡುವುದಾದರೂ ಹೇಗೆ?-ಪ್ರೊ. ಜಯತಿ ಘೋಷ್

ಹಣಕಾಸು ಮಂತ್ರಿಗಳು ತಮ್ಮ ಭಾಷಣದಲ್ಲಿ ಕಳೆದ ವರ್ಷದ ಆಯ-ವ್ಯಯದ ಅಂಕೆ-ಸಂಖ್ಯೆಗಳನ್ನೇ ಹೇಳಲಿಲ್ಲ. ಕೇಳಿದಾಗ ಬಜೆಟ್ ದಸ್ತಾವೇಜುಗಳಲ್ಲಿ ಇವೆಯಲ್ಲ ಎಂದರು. ಆ ಅಂಕೆ-ಸಂಖ್ಯೆಗಳು, ವಿಶೇಷವಾಗಿ ಸರಕಾರದ ಹಿಂದಿನ ವರ್ಷದ (2018-19) ಆಯ-ವ್ಯಯಗಳಿಗೆ ಸಂಬಂಧಪಟ್ಟವುಗಳು ದಾರಿ ತಪ್ಪಿಸುವಂತವು ಮಾತ್ರವಲ್ಲ, ನಿಜವಾಗಿಯೂ ತಪ್ಪು ಅಂಕೆ-ಸಂಖ್ಯೆಗಳು ಎಂದು ನಂತರ ಗಮನಕ್ಕೆ ಬಂದಿದೆ. ಇದಕ್ಕೆ ಪುರಾವೆ ಸ್ವತಃ ಹಣಕಾಸು ಮಂತ್ರಾಲಯದ 2018-19ರ ಆರ್ಥಿಕ ಸರ್ವೇಕ್ಷಣೆಯಲ್ಲೇ ಕಾಣುತ್ತದೆ. 2018-19ಕ್ಕೆ 'ಪರಿಷ್ಕೃತ ಅಂದಾಜುಗಳು' ಎಂದು ಹೇಳಿರುವ ಹೆಚ್ಚಿನ ಸಂಖ್ಯೆಗಳನ್ನು ನಾವು ನಂಬುವಂತಿಲ್ಲ. ಏಕೆಂದರೆ **ಆರ್ಥಿಕ ಸರ್ವೇಕ್ಷಣೆಯಲ್ಲಿ ತೋರಿಸಿರುವ ಆ ವರ್ಷದ ನಿಜವಾದ ಆಯ-ವ್ಯಯಗಳ ಕುರಿತ ಸ್ವತಃ ಸರಕಾರದ ಅಂದಾಜುಗಳೊಂದಿಗೆ ತಾಳೆಯಾಗುತ್ತಿಲ್ಲ. ವರಮಾನಗಳಲ್ಲಿ 1.65 ಲಕ್ಷ ಕೋಟಿರೂ.ಗಳಷ್ಟು ಕೊರತೆ ಕಂಡರೆ, ವೆಚ್ಚಗಳಲ್ಲಿ 1.46 ಲಕ್ಷ ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದ್ದು.**

ಇದು ಏನನ್ನು ಸೂಚಿಸುತ್ತದೆ? ತೆರಿಗೆ ವರಮಾನಗಳಲ್ಲಿನ ಇಳಿಕೆಯಿಂದಾಗಿ ಕಳೆದ ವರ್ಷ ಸಾರ್ವಜನಿಕ ವೆಚ್ಚಗಳಲ್ಲಿ ಗಮನಾರ್ಹ ಕಡಿತಗಳನ್ನು ಮಾಡಿರಲೇ ಬೇಕು ಎಂಬುದನ್ನು ಸೂಚಿಸುತ್ತದೆ. ಆದರೆ ಯಾವ ಬಾಬ್ತಿನಲ್ಲಿ ಎಷ್ಟು ಕಡಿತ ಮಾಡಲಾಯಿತು ಎಂಬುದನ್ನು ನಾವು ತಿಳಿಯುವುದು ಹೇಗೆ? ಇದನ್ನು ಸಂಸತ್ತು ಮತ್ತು ಸಾರ್ವಜನಿಕರು ತಿಳಿಯುವುದು ಅಗತ್ಯವಲ್ಲವೇ?





ವ್ಯಂಗ್ಯಚಿತ್ರ ಕೃಪೆ: ದಿ ಹಿಂದು

ಹೆಚ್ಚು ಸರಿಯಾದ ತಾತ್ಕಾಲಿಕ ನಿಜ ಅಂಕೆ-ಸಂಖ್ಯೆಗಳನ್ನು ಬಹಿರಂಗವಾಗಿ ಹೇಳದೆ ಹಿಂದಿನ ಪರಿಷ್ಕೃತ ಅಂದಾಜುಗಳನ್ನೇ ಒದಗಿಸುವುದು ತಾತ್ಸಾರ ಮತ್ತು ಅಗೌರವ ಮಾತ್ರವೇ ಅಲ್ಲ- ಸಂಸತ್ತು ಮತ್ತು ಜನತೆಯ ಮುಂದೆ ಸುಳ್ಳು ಹೇಳಿದಂತಾಗುತ್ತದೆ ಎನ್ನುತ್ತಾರೆ ಪ್ರಸಿದ್ಧ ಆರ್ಥಿಕ ತಜ್ಞೆ ಪ್ರೊ. ಜಯತಿ ಘೋಷ್. ಸತ್ಯವನ್ನು ಮರೆಮಾಚಲು ಸರಕಾರ ಇಂತಹ ದರ್ಪದ ಮತ್ತು ಜುಗುಪ್ಸೆ ಹುಟ್ಟಿಸುವ ರೀತಿಯನ್ನು ಅನುಸರಿಸಿದರೆ, ಅವರಿಂದ ಬರುವ ಯಾವುದೇ ಅಂಕೆ-ಸಂಖ್ಯೆಯ ಬಗ್ಗೆ ನಮಗೆ ವಿಶ್ವಾಸ ಬರುವುದಾದರೂ ಹೇಗೆ ಎಂದು ಅವರು ಪ್ರಶ್ನಿಸುತ್ತಾರೆ.

ಈ ಕುರಿತ **ಪ್ರೊ. ಜಯತಿ ಘೋಷ್**
ಅವರ ಲೇಖನದ ಅನುವಾದ
ನಮ್ಮ ಓದುಗರಿಗಾಗಿ ಇಲ್ಲಿದೆ:

ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಅವರ ಭಾಷಣದ ಒಂದು ಚಕಿತಗೊಳಿಸವ ಸಂಗತಿಯೆಂದರೆ ಅದು ಅಂಕೆ-ಸಂಖ್ಯೆಗಳನ್ನೇ ಕೊಟ್ಟಿಲ್ಲ. ಬಜೆಟ್ ಭಾಷಣ ಇರುವುದೇ ಸರಕಾರದ ಹಿಂದಿನ ವರ್ಷದ ಅಥವ ಪ್ರಸಕ್ತ ವರ್ಷದ ಒಟ್ಟಾರೆ ಆಯ-ವ್ಯಯಗಳ ಅಂಕೆ-ಸಂಖ್ಯೆಗಳನ್ನು ಒದಗಿಸಲು. ಈ ಬಗ್ಗೆ ವ್ಯಾಪಕ ಟಿಪ್ಪಣಿಗಳು ಬಂದಿವೆ. ಇವಕ್ಕೆ ಹಣಕಾಸು ಮಂತ್ರಿಗಳ ಉತ್ತರ-ಈ ಎಲ್ಲ ಅಂಕೆ-ಸಂಖ್ಯೆಗಳು ಬಜೆಟ್ ದಸ್ತಾವೇಜುಗಳಲ್ಲಿ ಕೊಟ್ಟಿರುವ ಪೂರಕ ಸಾಮಗ್ರಿಗಳಲ್ಲಿ ಲಭ್ಯ ಇವೆ, ಆದ್ದರಿಂದ ಭಾಷಣದಲ್ಲಿ ಅವನ್ನೆಲ್ಲ ಹೇಳುವ ಅಗತ್ಯ ಇರಲಿಲ್ಲ!

ಆದರೆ ಹೆಚ್ಚಿನವರು ಈ ಪೂರಕ ಸಾಮಗ್ರಿಗಳನ್ನು ನೋಡುವುದೇ ಇಲ್ಲ. ಬಹುಶಃ ಹಣಕಾಸು ಮಂತ್ರಿಗಳು ತಮ್ಮ ಭಾಷಣದಲ್ಲಿ ಇಂತಹ ಅಂಕೆ-ಸಂಖ್ಯೆಗಳನ್ನೇ ಹೇಳದಿರಲು ನಿರ್ಧರಿಸಲು ಇದೇ ನಿಜವಾದ ಕಾರಣವಿರಬೇಕು. ಯಾಕೆಂದರೆ ಈ ದಸ್ತಾವೇಜುಗಳಲ್ಲಿ ಕೊಟ್ಟಿರುವ ಅಂಕೆ-ಸಂಖ್ಯೆಗಳು, ವಿಶೇಷವಾಗಿ ಸರಕಾರದ ಹಿಂದಿನ ವರ್ಷದ (2018-19) ಆಯ-ವ್ಯಯಗಳಿಗೆ ಸಂಬಂಧಪಟ್ಟವುಗಳು ದಾರಿ ತಪ್ಪಿಸುವಂತವು ಮಾತ್ರವಲ್ಲ, ನಿಜವಾಗಿಯೂ ತಪ್ಪು ಅಂಕೆ-ಸಂಖ್ಯೆಗಳು!

ಇದಕ್ಕೆ ಪುರಾವೆ ಸ್ವತಃ ಹಣಕಾಸು ಮಂತ್ರಾಲಯದ 2018-19ರ ಆರ್ಥಿಕ ಸರ್ವೇಕ್ಷಣೆಯಲ್ಲೇ ಬರುತ್ತದೆ. ಈ ವರ್ಷದ ಆರ್ಥಿಕ ಸರ್ವೇಕ್ಷಣೆಯ ಎರಡನೇ ಸಂಪುಟದಲ್ಲಿ ಒಂದು ಅಂಕಿ-ಅಂಶಗಳ ಅನುಬಂಧವಿದೆ. ಅದರಲ್ಲಿ ಪುಟ ಎ59ರಲ್ಲಿ ಇರುವ ಕೋಷ್ಟಕ 2.5 ಕೇಂದ್ರ ಸರಕಾರದ ಆಯ-ವ್ಯಯಗಳನ್ನು ಒದಗಿಸುತ್ತವೆ. ಈ ಕೋಷ್ಟಕದ ಕೊನೆಯ ಕಾಲಂ ತಾತ್ಕಾಲಿಕ ನಿಜಸಂಖ್ಯೆಗಳನ್ನು ಕೊಡುತ್ತದೆ. ಅಂದರೆ ಹಣಕಾಸು ಮಂತ್ರಾಲಯದ 2018-19ರ ಸ್ವಂತ ಲೆಕ್ಕಾಚಾರಗಳ ನಿಜವಾದ ಮೊತ್ತಗಳನ್ನು (ಈ ಸರ್ವೆಯನ್ನು ಫೆಬ್ರುವರಿ ಬದಲು ಜುಲೈನಲ್ಲಿ ತಂದಿರುವುದರಿಂದಾಗಿ ಅವರಿಗೆ ಮಾರ್ಚ್ 31, 2019ರಂದು ಕೊನೆಗೊಂಡ ಹಣಕಾಸು ವರ್ಷದ ನಿಜವಾದ ಆಯ ಮತ್ತು ವ್ಯಯಗಳನ್ನು ದಾಖಲಿಸಲು ಸಾಕಷ್ಟು ಸಮಯ ಸಿಕ್ಕಿದೆ).

ಇದರ ಫಲಿತಾಂಶ ನಿಬ್ಬೆರಗಾಗಿಸುವಂತದ್ದು. ಏಕೆಂದರೆ ಇವು ಆಯ-ವ್ಯಯ ಎರಡರಲ್ಲೂ ಬೃಹತ್ ಪ್ರಮಾಣದ ಕೊರತೆಗಳನ್ನು ಮತ್ತು ಅಸಂಗತತೆಗಳನ್ನು ಹೊರಗೆಡವುತ್ತದೆ- **ಇವು ನಿಜವಾದ ಬಜೆಟ್ ದಸ್ತಾವೇಜುಗಳಲ್ಲಿ ಕಾಣುವುದಿಲ್ಲ**. ಬೇರೆ ಮಾತುಗಳಲ್ಲಿ ಹೇಳುವುದಾದರೆ, 2018-19ಕ್ಕೆ 'ಪರಿಷ್ಕೃತ ಅಂದಾಜುಗಳು' ಎಂದು ಹೇಳಿರುವ ಹೆಚ್ಚಿನ ಸಂಖ್ಯೆಗಳನ್ನು ನಾವು ನಂಬುವಂತಿಲ್ಲ. ಏಕೆಂದರೆ ಆರ್ಥಿಕ ಸರ್ವೇಕ್ಷಣೆಯಲ್ಲಿ ತೋರಿಸಿರುವ ಆ ವರ್ಷದ ನಿಜವಾದ ಆಯ-ವ್ಯಯಗಳ ಕುರಿತ ಸ್ವತಃ ಸರಕಾರದ ಅಂದಾಜುಗಳೊಂದಿಗೆ ತಾಳೆಯಾಗುತ್ತಿಲ್ಲ.

ಅತಿ ದೊಡ್ಡ ಅಸಂಗತತೆ-ಮತ್ತು ಕೊರತೆ-ಇರುವುದು ಕೇಂದ್ರ ಸರಕಾರ ಇಟ್ಟುಕೊಂಡ ತೆರಿಗೆ ವರಮಾನಗಳಲ್ಲಿ. ಇವು ಪರಿಷ್ಕೃತ ಅಂದಾಜುಗಳಿಗಿಂತ ರೂ. 1,65,176 ಕೋಟಿಯಷ್ಟು ಬೃಹತ್ ಪ್ರಮಾಣದ, ಅಥವ ಒಟ್ಟು ಅಂದಾಜು ತೆರಿಗೆ ವರಮಾನಗಳ 13.5%ದಷ್ಟು ಕೊರತೆ, ಇದು ಬಹುಮಟ್ಟಿಗೆ ಎಲ್ಲರಿಗೂ ತಿಳಿದಿರುವಂತೆ, ಜಿಎಸ್‌ಟಿ ಸಂಗ್ರಹದಲ್ಲಿನ ಕೊರತೆಯಿಂದ ಆಗಿದೆ ಎಂದು ಊಹಿಸಬಹುದು. ಕೇಂದ್ರ ಸರಕಾರ ತನ್ನ ಸ್ವಂತ ವೆಚ್ಚವನ್ನು ತಡೆದಿಡುವ ಮೂಲಕವೇ ನಿರ್ವಹಿಸಿದೆ. ಈ ಮೂಲಕ ನಿಜವಾದ ಒಟ್ಟು ವ್ಯಯ ಪರಿಷ್ಕೃತ ಅಂದಾಜಿಗಿಂತ ರೂ.1,45,813 ಕೋಟಿ ರೂ.ಗಳಷ್ಟು, ಅಥವ 13.4%ದಷ್ಟು ಕಡಿಮೆಯಾಗಿದೆ. ಸಮಸ್ತ ಬಜೆಟ್ ಬೃಹತ್‌ಪ್ರಮಾಣದಲ್ಲಿ ಕುಗ್ಗಿತು-ಆದರೆ ಇವು ಯಾವವೂ ಸಾರ್ವಜನಿಕರಿಗೆ ಒದಗಿಸಿದ ಬಜೆಟ್ ಹೇಳಿಕೆಗಳಲ್ಲಿ ಪ್ರತಿಫಲನಗೊಂಡಿಲ್ಲ!

ಇದು ಸೂಚಿಸುವ ಪರಿಣಾಮಗಳು ಹಲವು. ಒಂದಂಶವೆಂದರೆ, ಆಯ-ವ್ಯಯಗಳ ತಾತ್ಕಾಲಿಕ ನಿಜ ಅಂಕೆ-ಸಂಖ್ಯೆಗಳ ಪ್ರಕಾರ ಹಣಕಾಸು ಕೊರತೆ ಪರಿಷ್ಕೃತ ಅಂದಾಜಿನಲ್ಲಿ ಹೇಳಿದ್ದಕ್ಕಿಂತ ರೂ.10,963 ಕೋಟಿಯಷ್ಟು ಹೆಚ್ಚಾಗಿದೆ. ಆಮೂಲಕ ಇದು ಸರಕಾರ ಹೇಳಿಕೊಳ್ಳುವಂತೆ ಜಿಡಿಪಿಯ 3.3% ಆಗಿರದೆ, 3.45% ಆಗುತ್ತದೆ.

ಆದರೆ ಇದೊಂದು ಸಣ್ಣ ವಿಷಯ-ಬೇರೆ ಹೆಚ್ಚು ಗಂಭೀರ ಪ್ರಶ್ನೆಯ ಮುಂದೆ. ಗಂಭೀರವಾದ ಪ್ರಶ್ನೆ ಎಂದರೆ, ಈ ತಾತ್ಕಾಲಿಕ ನಿಜ ಅಂಕೆ-ಸಂಖ್ಯೆಗಳನ್ನು ನಂಬುವುದಾದರೆ 2018-19ರ ಪರಿಷ್ಕೃತ ಅಂದಾಜುಗಳು ಸರಿಯಾಗಿಲ್ಲ. ಇದು, ವಿಶೇಷವಾಗಿ, ಹಿಂದಿನ ವೆಚ್ಚದ ರೀತಿಯ ಮೇಲೆ ಗಂಭೀರ ಪರಿಣಾಮವನ್ನು ಸೂಚಿಸುತ್ತದೆ. ವಿನಾಶಕಾರಿ ಜಿಎಸ್‌ಟಿ ಜಾರಿಯನ್ನು ಈಗಲೂ ಬಿಂಬಿಸುತ್ತಿರುವ ತೆರಿಗೆ ವರಮಾನಗಳಲ್ಲಿನ ಇಳಿಕೆಯಿಂದಾಗಿ ಕಳೆದ ವರ್ಷ ಸಾರ್ವಜನಿಕ ವೆಚ್ಚಗಳಲ್ಲಿ ಗಮನಾರ್ಹ ಕಡಿತಗಳನ್ನು ಮಾಡಿರಲೇ ಬೇಕು. ಆದರೆ ಯಾವ ಬಾಬ್ತಿನಲ್ಲಿ ಎಷ್ಟು ಕಡಿತ ಮಾಡಲಾಯಿತು ಎಂಬುದನ್ನು ನಾವು ತಿಳಿಯುವುದು ಹೇಗೆ?

ಇದನ್ನು ಸಂಸತ್ತು ಮತ್ತು ಸಾರ್ವಜನಿಕರು ತಿಳಿಯುವುದು ಅಗತ್ಯವಲ್ಲವೇ? ಸಂಸತ್ತಿನಲ್ಲಿ ಒಂದು ಬಜೆಟನ್ನು ಅಂಗೀಕರಿಸುವಾಗ ಚರ್ಚೆ ಮತ್ತು ವಾಗ್ವಾದಗಳು ಯಾವ ಬಾಬ್ತಿಗೆ ಎಷ್ಟು ನೀಡಲಾಗಿದೆ ಎಂಬುದರ ಬಗ್ಗೆಯೇ ಇರುತ್ತದೆ. ಆದ್ದರಿಂದ ಸರಕಾರ ನಿರ್ದಿಷ್ಟ ಬಾಬ್ತುಗಳಿಗೆ ಏಕಪಕ್ಷೀಯವಾಗಿ ಜೋರಾದ ಕಡಿತ ಮಾಡಿದ್ದರೆ, ಇವನ್ನು ಜನಗಳ ಗಮನಕ್ಕೆ ತರಲೇಬೇಕು.

ಹೆಚ್ಚು ಸರಿಯಾದ ತಾತ್ಕಾಲಿಕ ನಿಜ ಅಂಕೆ-ಸಂಖ್ಯೆಗಳನ್ನು ಬಹಿರಂಗವಾಗಿ ಹೇಳದೆ ಹಿಂದಿನ ಪರಿಷ್ಕೃತ ಅಂದಾಜುಗಳನ್ನೇ ಒದಗಿಸುವುದು ತಾತ್ಸಾರ ಮತ್ತು ಅಗೌರವ ಮಾತ್ರವೇ ಅಲ್ಲ- ಸಂಸತ್ತು ಮತ್ತು ಜನತೆಯ ಮುಂದೆ ಸುಳ್ಳು ಹೇಳಿದಂತಾಗುತ್ತದೆ. ಸತ್ಯವನ್ನು ಮರೆಮಾಚಲು ಸರಕಾರ ಇಂತಹ ದರ್ಪದ ಮತ್ತು ಜುಗುಪ್ಸೆ ಹುಟ್ಟಿಸುವ ರೀತಿಯನ್ನು ಅನುಸರಿಸಿದರೆ, ಅವರಿಂದ ಬರುವ ಯಾವುದೇ ಅಂಕೆ-ಸಂಖ್ಯೆಯ ಬಗ್ಗೆ ನಮಗೆ ವಿಶ್ವಾಸ ಬರುವುದಾದರೂ ಹೇಗೆ?



ಗೃಹಮಂತ್ರಿ ಕಚೇರಿಯಲ್ಲಿ ಬಿಜೆಪಿ ಅಧ್ಯಕ್ಷೀಯ ದರ್ಪ ಸಿಪಿಐ(ಎಂ) ಎಂಪಿಯಿಂದ ತಕ್ಕ ಉತ್ತರ !

ಸಿಪಿಐ(ಎಂ) ರಾಜ್ಯ ಸಭಾ ಸದಸ್ಯೆ ಝರ್ನಾ ದಾಸ್ ಜುಲೈ 17ರಂದು ಕೇಂದ್ರ ಗೃಹ ಮಂತ್ರಿ ಅಮಿತ್ ಷಾರವರನ್ನು ಭೇಟಿಯಾಗಲು ಅವರ ಕಚೇರಿಗೆ ಹೋಗಿದ್ದರು. ತ್ರಿಪುರಾ ಪಂಚಾಯತು ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿ ಹರಿಯಬಿಟ್ಟಿರುವ ಹಿಂಸಾಚಾರವನ್ನು ಕುರಿತಂತೆ ಒಂದು ಮನವಿ ಪತ್ರವನ್ನು ಸಲ್ಲಿಸಲು ಹೋಗಿದ್ದರು. ಆಗ ದೇಶದ ಗೃಹಮಂತ್ರಿಗಳು ಅವರನ್ನು ಕೇಳಿದ ಪ್ರಶ್ನೆ-"ನೀವಿನ್ನೂ ಸಿಪಿಐ(ಎಂ)ನಲ್ಲಿ ಯಾಕಿದ್ದೀರಿ? ಆ ಪಕ್ಷದ ಕತೆ ಮುಗಿಯಿತು. ಬನ್ನಿ, ಬಿಜೆಪಿ ಸೇರಿ"!

ಈ ಮಾತಿನಿಂದ ಸಿಟ್ಟಿಗೆದ್ದ ಝರ್ನಾ ದಾಸ್ "ನಾನು ನಿಮ್ಮನ್ನು ಇಲ್ಲಿ ಭೇಟಿಯಾಗಲು ಬಂದಿರುವುದು ನೀವು ಗೃಹ ಮಂತ್ರಿಗಳೆಂದು. ನಾನು ಬಿಜೆಪಿ ಅಧ್ಯಕ್ಷರನ್ನು ಭೇಟಿಯಾಗಲು ಬಂದಿಲ್ಲ. ನಾನು ಹೇಳುವುದನ್ನು ಕೇಳಿ-ಸಿಪಿಐ(ಎಂ)ನಲ್ಲಿ ಒಬ್ಬರೇ ಒಬ್ಬರಿದ್ದರೂ ನಾನು ಅದರಲ್ಲೇ ಇರುತ್ತೇನೆ, ನಿಮ್ಮ ತತ್ವಸಿದ್ಧಾಂತವನ್ನು ಸಂಪೂರ್ಣವಾಗಿ ವಿರೋಧಿಸುತ್ತ".

ಆಳುವ ಪಕ್ಷದ ಅಧ್ಯಕ್ಷೀಯ ದರ್ಪಕ್ಕೆ ತಕ್ಕ ಉತ್ತರ ಸಿಕ್ಕಿತ್ತು.




ಬಿಜೆಪಿ ಎಂಪಿ ಹೇಮಾಮಾಲಿನಿಯವರು ಜುಲೈ 13ರಂದು ಸಂಸದ್ ಭವನದ ಎದುರು 'ಸ್ವಚ್ಛ ಭಾರತ್ ಅಭಿಯಾನ್'ನಲ್ಲಿ ಹಣಕಾಸು ರಾಜ್ಯ ಸಚಿವ ಅನುರಾಗ್ ಠಾಕುರ್ ಮತ್ತಿತರರೊಂದಿಗೆ ಭಾಗವಹಿಸಿದ್ದು ದೊಡ್ಡ ಸುದ್ದಿಯಾಯಿತು. ಸಂಸತ್ತನ್ನು ಸ್ವಚ್ಛಗೊಳಿಸಿದ್ದಕ್ಕೆ ಅಲ್ಲ, ಸ್ವಚ್ಛಗೊಳಿಸಲಾಗದ್ದಕ್ಕೆ. ಕೊನೆಗೂ ಸಂಸತ್ ಭವನದ ಸಿಬ್ಬಂದಿಯೇ ಸ್ವಚ್ಛತಾ ಕೆಲಸವನ್ನು ಮುಂದುವರೆಸಿದರು ಎಂದು ವರದಿಯಾಗಿದೆ.



ವ್ಯಂಗ್ಯ ಚಿತ್ರ: ಪಿ.ಮಹಮ್ಮದ್

ಬಜೆಟ್‌ನಲ್ಲಿರುವ ಕೆಲವು ಆತಂಕಕಾರೀ ಪ್ರವೃತ್ತಿಗಳು



ವಿದೇಶಗಳಿಂದ ಸಾಲ ಎತ್ತುವ ಘೋಷಣೆ ಮತ್ತು ಸಂಪನ್ಮೂಲದ ಕೇಂದ್ರೀಕರಣ

ಅಂಕಿ ಅಂಶಗಳಿಗೆ ವಿಶ್ವಾಸಾರ್ಹತೆ ಇಲ್ಲದ ಈ ವರ್ಷದ ಬಜೆಟ್‌ನಲ್ಲಿ ವ್ಯಕ್ತಪಟ್ಟಿರುವ ಇನ್ನು ಕೆಲವು ಆತಂಕಕಾರೀ ಪ್ರವೃತ್ತಿಗಳನ್ನು ಗಂಭೀರವಾಗಿಯೇ ತೆಗೆದುಕೊಳ್ಳಬೇಕಾಗುತ್ತದೆ. ಈ ಪ್ರವೃತ್ತಿಗಳಲ್ಲಿ ಮೊದಲನೆಯದು, ಇನ್ನು ಮುಂದೆ ಸರ್ಕಾರವು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾಲ ಎತ್ತುವ ಘೋಷಣೆ. ಎರಡನೆಯದ್ದು ಸಂಪನ್ಮೂಲಗಳ ಕೇಂದ್ರೀಕರಣಕ್ಕೆ ಸಂಬಂಧಿಸಿದೆ.

ನವ ಉದಾರವಾದವು, ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಸಾರ್ವಭೌಮತ್ವಗಳನ್ನು ಮೊಟಕುಗೊಳಿಸುತ್ತದೆ. ಸರ್ಕಾರವು ವಿದೇಶಿ ಸಾಲದಾತರಿಗೆ ಋಣಿಯಾದಾಗ, ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಸಾರ್ವಭೌಮತ್ವಗಳು ಇನ್ನೂ ಹೆಚ್ಚು ಮೊಟಕುಗೊಳ್ಳುತ್ತವೆ. ಹಾಗಿದ್ದರೂ ಸಹ, ಎನ್‌ಡಿಎ ಸರ್ಕಾರವು ವಿದೇಶಿ ಸಾಲದಾತರಿಗೆ ಋಣಿಯಾಗಲು ಉದ್ದೇಶಿಸಿದೆ, ಪೂರ್ಣ ಅನಪೇಕ್ಷಿತವಾಗಿ.

ಬಲ ಪಂಥೀಯ ನಿರಂಕುಶಾಧಿಕಾರದತ್ತ ದೇಶ ಬದಲಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಬದಲಾವಣೆಯಲ್ಲಿ, ರಾಜ್ಯಗಳ ಅಧಿಕಾರ ಮತ್ತು ಆದಾಯಗಳ ಮೊಟುಕುಗೊಳಿಸುವಿಕೆ ವಹಿಸಿದ ಪಾತ್ರ ಸಣ್ಣದೇನಲ್ಲ. ಈ ಬಜೆಟ್ ಈ ಪ್ರವೃತ್ತಿಯನ್ನೇ, ಇನ್ನಷ್ಟು ಪ್ರತೀಕಾರ ಭಾವದೊಂದಿಗೆ ಮುಂದಕ್ಕೆ ಒಯ್ಯುತ್ತಿದೆ. .


ಪ್ರೊ. ಪ್ರಭಾತ್ ಪಟ್ನಾಯಕ್   ಅನು:ಕೆ.ಎಂ.ನಾಗರಾಜ್

2019–20ರ ಬಜೆಟ್‌ನಲ್ಲಿ ಒದಗಿಸಿರುವ ಅಂಕಿ ಅಂಶಗಳು ನಿರಾಧಾರವಾಗಿವೆ ಎಂಬುದು ಈಗಾಗಲೇ ಸ್ಪಷ್ಟವಾಗಿದೆ. 2018–19 ವರ್ಷದ ಜಮಾ–ಖರ್ಚುಗಳ ವಿವರಗಳು ಸರ್ಕಾರದ ಬಳಿ ವಾಸ್ತವಿಕವಾಗಿ ಲಭ್ಯವಿದ್ದರೂ ಅವುಗಳನ್ನು ಸರ್ಕಾರವು ಮುಚ್ಚಿಟ್ಟಿದೆ. ಏಕೆಂದರೆ, ಈ ಬಗ್ಗೆ ಸರ್ಕಾರ ಮಾಡಿದ್ದ ಅಂದಾಜಿಗೂ ಮತ್ತು ಸರ್ಕಾರದ ಸಾಧನೆಗೂ ಬಹು ದೊಡ್ಡ ವ್ಯತ್ಯಾಸವಿದೆ. 2019–20 ವರ್ಷದ ಜಮಾ–ಖರ್ಚುಗಳ ಬಗ್ಗೆ ಮಾಡಿರುವ ಎಲ್ಲಾ ಮುನ್ನಂದಾಜುಗಳು, 2018–19 ವರ್ಷದಲ್ಲಿ ವಾಸ್ತವಿಕವಾಗಿ ಇಳಿದಿರುವ ಜಮಾ–ಖರ್ಚುಗಳನ್ನು ಆಧರಿಸುವುದರ ಬದಲಾಗಿ, 2018–19 ವರ್ಷದ ಪರಿಷ್ಕೃತ ಜಮಾ–ಖರ್ಚುಗಳ ಅಂದಾಜನ್ನೇ ಆಧರಿಸಿವೆ. ಹಾಗಾಗಿ, ಮುಂದಿನ ಬಜೆಟ್‌ನ ಅಂಕಿ ಅಂಶಗಳನ್ನು ಗಂಭೀರವಾಗಿ ಪರಿಗಣಿಸುವಂತಿಲ್ಲ. ಇಡೀ ಬಜೆಟ್‌ಅನ್ನು ಒಂದು ಅಸತ್ಯದ ಭಾವ ಆವರಿಸಿದೆ.

ಈ ಬಜೆಟ್‌ನಲ್ಲಿರುವ ಅಂಕಿ ಅಂಶಗಳಿಗೆ ವಿಶ್ವಾಸಾರ್ಹತೆ ಇಲ್ಲ. ಆದರೂ, ಬಜೆಟ್‌ನಲ್ಲಿ ವ್ಯಕ್ತಪಡಿಸಿರುವ ಕೆಲವು ಆತಂಕಕಾರೀ ಪ್ರವೃತ್ತಿಗಳನ್ನು ಗಂಭೀರವಾಗಿಯೇ ತೆಗೆದುಕೊಳ್ಳಬೇಕಾಗುತ್ತದೆ. ಈ ಪ್ರವೃತ್ತಿಗಳಲ್ಲಿ ಮೊದಲನೆಯದು, ಇನ್ನು ಮುಂದೆ ಸರ್ಕಾರವು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾಲ ಎತ್ತುವ ಘೋಷಣೆ. ಇಂತಹ ಒಂದು ಪರಿಸ್ಥಿತಿ ಇಲ್ಲಿಯವರೆಗೂ ಬಂದಿರಲಿಲ್ಲ. ಮೇಲಾಗಿ, ಸರ್ಕಾರ ವಿದೇಶಗಳಿಂದ ಎತ್ತಿದ ಸಾಲದ ಮಟ್ಟ ಜಿಡಿಪಿಯ ಕೇವಲ ಶೇ.5ರಷ್ಟಿತ್ತು. ಮತ್ತು, ವಿಶ್ವದ ಯಾವುದೇ ದೇಶಕ್ಕಿಂತಲೂ ಅತಿ ಕೆಳಗಿನ ಮಟ್ಟದಲ್ಲಿತ್ತು. ಈ ವರೆಗೆ ಕಾಪಾಡಿಕೊಂಡಿದ್ದ ಇಂತಹ ಒಂದು ಸಂಯಮದ ನೀತಿಯನ್ನು ತೊರೆಯಲು ಹೊರಟಿದೆ ಸರ್ಕಾರ.

ಸಾಲ ಎತ್ತಲು ಸರ್ಕಾರವು ಈಗ ಅಂತಾರಾಷ್ಟ್ರೀಯ ಮಾರುಕಟ್ಟೆಯತ್ತ ಮುಖ ಮಾಡಿದೆ. ಅದು ಅನಿವಾರ್ಯವೂ ಅಲ್ಲ, ಅಂತಹ ಒತ್ತಾಯವೂ ಇಲ್ಲ. ದೇಶದ ಖಾಸಗಿ ಮೂಲಗಳಿಂದ ಸರ್ಕಾರಕ್ಕೆ ಸಾಲ ದೊರೆಯದು ಎಂಬುದೂ ಕಾರಣವಲ್ಲ. ಅಥವಾ, ಹೊರ ದೇಶಗಳಿಂದ ಸಾಲ ಪಡೆದರೆ ಅದು ವಿತ್ತೀಯ ಕೊರತೆಯಾಗುವುದಿಲ್ಲ ಎಂದು ಭಾವಿಸಿ, ಸರ್ಕಾರವು ತಾನೇ ಹೇರಿಕೊಂಡಿರುವ ವಿತ್ತೀಯ ಕೊರತೆಯ ಮಿತಿಯನ್ನು ದಾಟಿ, ತನಗೆ ಬೇಕಾದಷ್ಟು ಖರ್ಚು ಮಾಡಬಹುದು ಎಂಬುದೂ ಕಾರಣವಲ್ಲ. ಹೊರ ದೇಶಗಳಿಂದ ಪಡೆದ ಸಾಲವೂ ಸಹ, ಆಂತರಿಕ ಸಾಲದ ರೀತಿಯಲ್ಲಿಯೇ, ವಿತ್ತೀಯ ಕೊರತೆಯ ಭಾಗವೇ ಆಗುತ್ತದೆ. ಹೊರ ದೇಶದ ಸಾಲಗಳು ಅಗ್ಗದ ಸಾಲಗಳೂ ಅಲ್ಲ. ಮೇಲಾಗಿ, ಹೊರಗಿನಿಂದ ಸಾಲ ಎತ್ತುವ ತನ್ನ ಅಪೇಕ್ಷೆಗೆ ಹೊರಗಿನ ಬಡ್ಡಿ ಕಡಿಮೆ ಎಂಬ ಕಾರಣವನ್ನೂ ಸರ್ಕಾರ ಮಂಡಿಸಿಲ್ಲ.

ಮುಂದಿನ ದಿನಗಳಲ್ಲಿ, ಬಹುಶಃ, ಬಂಡವಾಳದ ಒಳ ಹರಿವು ತಗ್ಗಿ, ವಿದೇಶಿ ವಿನಿಮಯದ ಸಂಗ್ರಹವೂ ತಗ್ಗಬಹುದು ಮತ್ತು ಅದರ ಪರಿಣಾಮವಾಗಿ ವಿದೇಶ ವ್ಯಾಪಾರದ ಬಾಕಿ ಚುಕ್ತಾ ಆಗದ ಪರಿಸ್ಥಿತಿ ಉದ್ಭವವಾಗಬಹುದು ಎಂಬ ಅನುಮಾನದಲ್ಲಿ ಸರ್ಕಾರವು ಹೊರ ದೇಶಗಳಿಂದ ಸಾಲ ಪಡೆಯುವ ಮೂಲಕ ವಿದೇಶಿ ವಿನಿಮಯವನ್ನು ಸಂಗ್ರಹಿಸಿಕೊಳ್ಳಲು ಬಯಸುತ್ತದೆ ಎಂಬುದಾಗಿ ವಾದಿಸಬಹುದು. ಇದು, ವ್ಯವಹಾರ ಜ್ಞಾನದಿಂದ ಕೂಡಿದ ವಾದವಲ್ಲ. ಏಕೆಂದರೆ, ವಿದೇಶ ವ್ಯಾಪಾರದ ಬಾಕಿ ಚುಕ್ತಾ ಮಾಡಲು ಬೇಕಾಗುವ ವಿದೇಶಿ ವಿನಿಮಯದ ಜೊತೆಗೆ ಹೊರಗಿನ ಸಾಲವನ್ನೂ ವಿದೇಶಿ ವಿನಿಮಯದಲ್ಲೇ ತೀರಿಸುವ ಹೊರೆಯನ್ನೂ ಅಧಿಕವಾಗಿ ಹೊರಬೇಕಾಗುತ್ತದೆ ಎಂಬ ಅಂಶವನ್ನು ಈ ವಾದವು ನಿರ್ಲಕ್ಷಿಸುತ್ತದೆ.



ಇನ್ನೊಂದು ತಪ್ಪು ವಾದವೂ ಸುತ್ತು ಹೊಡೆಯುತ್ತಿದೆ. ಈ ವಾದದ ಪ್ರಕಾರ, ದೇಶದಲ್ಲಿ ಸಾಲ ಎತ್ತಲು ಉಳಿತಾಯಗಳು ಲಭ್ಯವಿಲ್ಲದ ಕಾರಣದಿಂದಾಗಿ ಸರ್ಕಾರವು ವಿದೇಶಿ ನಿಧಿ ಮೂಲಗಳ ಬಾಗಿಲು ತಟ್ಟುತ್ತಿದೆ. ಈ ವಾದವೂ ತಪ್ಪು. ಏಕೆಂದರೆ, ಸರ್ಕಾರವು ಯಾರೋ ಕೆಲವರು ಕೂಡಿಟ್ಟ ಉಳಿತಾಯಗಳ ಮೂಲದಿಂದ ಸಾಲ ಎತ್ತುವುದಿಲ್ಲ. ಖರ್ಚು ಮಾಡುವ ಉದ್ದೇಶದಿಂದ ಸರ್ಕಾರವು ಯಾವ ಖಾಸಗಿ ಮೂಲಗಳಿಂದ ಎಷ್ಟು ಸಾಲ ಪಡೆದಿರುತ್ತದೆಯೋ ಅದೇ ಹಣವನ್ನು ಸರಕಾರವು ತನ್ನ ಖರ್ಚುಗಳ ಮೂಲಕ, ವಾಸ್ತವವಾಗಿ, ಅದೇ ಖಾಸಗಿಯವರ ಕೈಗಿಡುತ್ತದೆ. ಈ ಕ್ರಿಯೆ, ನೇರವಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ನಡೆಯುವುದಿಲ್ಲ. ವ್ಯವಸ್ಥೆಯ ಕಾರ್ಯವೈಖರಿ ಇರುವುದೇ ಹಾಗೆ. ಹಾಗಾಗಿ, ಸರ್ಕಾರವು ಹೆಚ್ಚು ಹೆಚ್ಚು ಹಣ ಖರ್ಚುಮಾಡುತ್ತಾ ಹೋದಹಾಗೆ, ಅಧಿಕ ಉದ್ಯೋಗ, ಅಧಿಕ ಉತ್ಪತ್ತಿ, ಮತ್ತು ಅಧಿಕ ವರಮಾನಗಳ ಮೂಲಕ ಅಧಿಕ ಉಳಿತಾಯಗಳೂ ಸೃಷ್ಟಿಯಾಗುತ್ತವೆ. ಈ ಪ್ರಕ್ರಿಯೆ ಹೀಗೆಯೇ ಸಾಗುತ್ತದೆ ಎಲ್ಲಿಯವರೆಗೆ ಅಂದರೆ, ಅಧಿಕ ಉಳಿತಾಯಗಳ ಒಟ್ಟು ಮೊತ್ತವು ಸರ್ಕಾರದ ಅಧಿಕ ಖರ್ಚುಗಳಿಗೆ ಯಾವಾಗ ಸಮನಾಗುತ್ತದೋ ಅಲ್ಲಿಯವರೆಗೆ. ಆದ್ದರಿಂದ, ಸರ್ಕಾರವು ಕೈಗೊಳ್ಳುವ ವೆಚ್ಚಗಳಿಗೆ ಬೇಕಾಗುವ ಹಣವನ್ನು ಇಂತಹ ಅಧಿಕ ಉಳಿತಾಯಗಳಿಂದಲೇ ಸುಮ್ಮನೇ ಸಾಲ ಪಡೆಯುತ್ತಲೇ ಹೋಗಬಹುದು. ಹಾಗಾಗಿ, ದೇಶದಲ್ಲಿ ಉಳಿತಾಯಗಳ ಲಭ್ಯತೆ ಇಲ್ಲ ಎನ್ನುವ ಪ್ರಶ್ನೆಯೇ ಏಳುವುದಿಲ್ಲ.

ಆದ್ದರಿಂದ, ಸರ್ಕಾರವು ಸಾಲ ಎತ್ತಲು ವಿದೇಶಿ ನಿಧಿ ಮೂಲಗಳ ಬಾಗಿಲು ತಟ್ಟುವುದು ಈ ಯಾವ ಕಾರಣಗಳಿಂದಲೂ ಅಲ್ಲ. ಅದು, ಸರ್ಕಾರದ ಒಂದು ಆಯ್ಕೆ. ವಿದೇಶಿ ಮೂಲಗಳಿಂದ ಈ ವರೆಗೆ ಪಡೆದಿರುವ ಸಾಲಗಳು ಬಹಳ ಕಡಿಮೆ ಎಂಬುದೇ ಈ ಆಯ್ಕೆಯ ಹಿಂದಿರುವ ಕಾರಣ. ಆದರೆ, ಇದೊಂದು ಅಪಾಯಕಾರೀ ಹೆಜ್ಜೆ. ಏಕೆಂದರೆ, ಈ ಕ್ರಮದಿಂದಾಗಿ, ಭಾರತದ ಪ್ರಭುತ್ವದ ಜುಟ್ಟು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಕೈ ಸೇರುತ್ತದೆ.

ಸರ್ಕಾರವು, ಸಾಮಾನ್ಯವಾಗಿ, ದೇಶದ ಹಣಕಾಸು ವಲಯದಿಂದ ಸಾಲ ಪಡೆಯುತ್ತದೆ. ಭಾರತದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯು ಪ್ರಧಾನವಾಗಿ ಪ್ರಭುತ್ವದ ಒಡೆತನದಲ್ಲಿದೆ. ಬ್ಯಾಂಕಿಂಗ್ ವ್ಯವಸ್ಥೆಯನ್ನೊಳಗೊಂಡ ಹಣಕಾಸು ವಲಯವೂ ಹೆಚ್ಚು ಕಡಿಮೆ ಸರ್ಕಾರದ ಹಿಡಿತದಲ್ಲಿದೆ. ಹಣಕಾಸು ವಲಯದ ಮೇಲೆ ಒಂದು ಸ್ವಾಯತ್ತ ಸಂಸ್ಥೆಯಾಗಿರುವ ರಿಸರ್ವ್ ಬ್ಯಾಂಕಿನ ನಿಯಂತ್ರಣವಿದ್ದರೂ ಸಹ, ಹಣಕಾಸು ವಲಯವು ಸರ್ಕಾರದ ವ್ಯಾಪ್ತಿಯಿಂದ ಹೊರಗುಳಿಯುವುದಿಲ್ಲ.

ಸರ್ಕಾರದ ವ್ಯಾಪ್ತಿಯೊಳಗಿರುವ ಹಣಕಾಸು ವಲಯದಿಂದ ಸರ್ಕಾರವು ಸಾಲ ಪಡೆಯುವುದರಿಂದ ಎರಡು ಅನುಕೂಲಗಳಿವೆ: ಮೊದಲನೆಯದು, ಸಾಲ ತೀರಿಸುವಲ್ಲಿ ಸರ್ಕಾರ ಹಿಂದೆ ಬಿದ್ದರೆ, "ಮಿತವ್ಯಯ" ಪಾಲಿಸುವಂತೆ ಸರ್ಕಾರದ ಮೇಲೆ ಹಣಕಾಸು ವಲಯ ಒತ್ತಡ ಹೇರುವುದು ಸಾಧ್ಯವಿಲ್ಲ. ಎರಡನೆಯದು, ರೂಪಾಯಿ ಕರೆನ್ಸಿ ಸಾಲವನ್ನು ತೀರಿಸಲು ಸರ್ಕಾರ ಅಸಮರ್ಥವಾಗುವ ಪ್ರಶ್ನೆ ಏಳುವುದೇ ಇಲ್ಲ, ಏಕೆಂದರೆ, ತೆರಿಗೆ ವಿಧಿಸುವ ಸಾರ್ವಭೌಮಾಧಿಕಾರ ಸರ್ಕಾರಕ್ಕೆ ಇದ್ದೇ ಇದೆ.

ಸರ್ಕಾರವು ಒಂದು ವೇಳೆ ಹೊರ ದೇಶಗಳಿಂದ ಸಾಲ ಪಡೆದರೆ, ಆ ಸಾಲಗಳು ವಿದೇಶಿ ಕರೆನ್ಸಿಯಲ್ಲಿರುತ್ತವೆ. ಹೊರಗಿನ ಈ ಸಾಲ ತೀರಿಸುವ ಸಂದರ್ಭದಲ್ಲಿ ಅಕಸ್ಮಾತ್ ವಿದೇಶಿ ವಿನಿಮಯದ ಕೊರತೆಯಾದರೆ, ಜನತೆಯ ಮೇಲೆ ಎಷ್ಟು ತೆರಿಗೆ ಹೇರಿದರೂ ಹೊರಗಿನ ಸಾಲ ತೀರಿಸಲು ಸಾಧ್ಯವಿಲ್ಲ. ಇಂತಹ ಸಂದರ್ಭಗಳಲ್ಲೇ, ಕರಾರುವಾಕ್ಕಾಗಿ, "ಮಿತವ್ಯಯ ಕ್ರಮ"ಗಳನ್ನು ಸಾಲಗಾರರು ಅನುಸರಿಸಲೇಬೇಕು ಎಂದು ವಿದೇಶಿ ಸಾಲದಾತರು ಒತ್ತಾಯ ಹೇರುತ್ತಾರೆ. ಈ ಮಿತವ್ಯಯ ಕ್ರಮಗಳಲ್ಲಿ, ಆಹಾರದ ಮೇಲಿನ ಸಬ್ಸಿಡಿ ಕಡಿತ, ಕಲ್ಯಾಣ ಕಾರ್ಯಕ್ರಮಗಳ ಖರ್ಚಿನ ಕಡಿತ, ಸರ್ಕಾರಿ ನೌಕರರ ಸಂಬಳ ಹೆಚ್ಚಳದ ಮುಂದೂಡಿಕೆ, ಶಾಲಾ ಉಪಾಧ್ಯಾಯರು ಸೇರಿದಂತೆ ಸರ್ಕಾರದ ಹಲವಾರು ಸಂಸ್ಥೆಗಳ ಹಂಗಾಮಿ ನೌಕರರ ಸೇವೆಯನ್ನು ಹಂಗಾಮಿತನದಲ್ಲೇ ಹತ್ತಿಪ್ಪತ್ತು ವರ್ಷಗಳವರೆಗೆ ಮುಂದುವರಿಸುವ ಮೂಲಕ ಪೂರ್ಣಾವಧಿ ಸರ್ಕಾರಿ ನೌಕರರ ಸಂಖ್ಯೆಯ ಇಳಿಕೆ ಮುಂತಾದವು ಸೇರಿಕೊಂಡಿರುತ್ತವೆ. ಸಕಾಲದಲ್ಲಿ ಸಾಲ ತೀರಿಸಲಾಗದ ಸರ್ಕಾರಗಳ ಮೇಲೆ ಇಂತಹ "ಮಿತವ್ಯಯ ಕ್ರಮ"ಗಳನ್ನು ಹೇರಿರುವ ಹಲವಾರು ಉದಾಹರಣೆಗಳಿವೆ. ಈ ಬಗ್ಗೆ, ಎಲ್ಲರಿಗೂ ಗೊತ್ತಿರುವ ಗ್ರೀಸ್ ದೇಶದ ಪರಿಸ್ಥಿತಿಯೇ ಇತ್ತೀಚಿನ ಉದಾಹರಣೆ.

ವಿದೇಶಿ ವಿನಿಮಯದ ಕೊರತೆಯಾದಾಗ ಸರ್ಕಾರಕ್ಕೆ ಸಾಲ ತೀರಿಸುವುದು ಸಾಧ್ಯವಾಗುವುದಿಲ್ಲ ಎಂದು ವಾದಿಸಬಹುದು. ಆದರೆ, ವಿದೇಶಿ ವಿನಿಮಯದ ಕೊರತೆಯ ಪರಿಸ್ಥಿತಿಯಲ್ಲಿ, ಸರ್ಕಾರ ಸಾಲ ಮಾಡಿದೆಯೊ ಅಥವಾ ಸಾಲ ಮಾಡಿಲ್ಲವೊ, ಹೇಗಿದ್ದರೂ, ಮಿತವ್ಯಯ ಕ್ರಮಗಳು ಹೇರಿಕೆಯಾಗುತ್ತವೆ. ಒಂದು ವೇಳೆ ಸರ್ಕಾರವು ಸಾಲದ ಕಂತು ಮತ್ತು ಬಡ್ಡಿ ತೆರಲಾರದ ಪರಿಸ್ಥಿತಿಗೆ ತಲುಪಿದರೆ, ಸರ್ಕಾರವು ಅಂತಾರಾಷ್ಟ್ರೀಯ ಸಾಲದಾತರ ಅಧೀನಕ್ಕೆ ನೇರವಾಗಿ ಒಳಪಡುತ್ತದೆ. ಸಾಲದಾತರು ಎಷ್ಟು ಒತ್ತಡ ಹೇರುತ್ತಾರೆ ಎಂದರೆ, ವಿದೇಶಿ ವಿನಿಮಯದ ಕೊರತೆ ನೀಗಿಸಲು ಸರ್ಕಾರವು ಆಮದು ನಿಯಂತ್ರಣ ಹೇರುವ ಮಾತಿರಲಿ, ಆರ್ಥಿಕ ನೀತಿಗಳಿಗೆ ಸಂಬಂಧಿಸಿದ ಯಾವುದೇ ನೀತಿ ಕೈಗೊಳ್ಳಲು ಅವರು ಬಿಡುವುದಿಲ್ಲ.

ಅಂದರೆ, ಸರ್ಕಾರದ ಮೇಲೆ ವಿದೇಶಿ ಸಾಲದಾತರು ನೇರ ಹಿಡಿತ ಹೊಂದುತ್ತಾರೆ – ಪರಿಸ್ಥಿತಿ ಬೇರೆಯಾಗಿದ್ದರೆ, ಅವರಿಗೆ ಈ ಹಿಡಿತ ಸಾಧ್ಯವಾಗುತ್ತಿರಲಿಲ್ಲ. ಒಮ್ಮೆ ಅವರ ಹಿಡಿತಕ್ಕೆ ಸಿಕ್ಕಿದರೆ, ಬೇರೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ, ವಿದೇಶಿ ಸಾಲದಾತರು ಆ ಸರ್ಕಾರದ ಕೈಯನ್ನೂ ಕಟ್ಟಿಹಾಕುತ್ತಾರೆ. ಒಂದು ವೇಳೆ, ರೈತರು ಮತ್ತು ದುಡಿಮೆಗಾರರ ಬೆಂಬಲದಿಂದ ಒಂದು ಹೊಸ ಸರ್ಕಾರ ಅಧಿಕಾರಕ್ಕೆ ಬಂದರೆ, ಅಂತಹ ಸರ್ಕಾರಕ್ಕೆ ದೇಶವನ್ನು ನವ ಉದಾರವಾದದ ಕಕ್ಷೆಯಿಂದ ಬಿಡಿಸಿಕೊಳ್ಳುವ ಧೈರ್ಯವಿದ್ದರೆ, ಆ ಸರ್ಕಾರವು ವಿದೇಶಿ ಸಾಲದಾತರನ್ನು ಎದುರಿಸುತ್ತದೆ ಎಂಬುದು ನಿಜ. ಆದರೆ, ವಿದೇಶಿ ಸಾಲದ ಬಳುವಳಿ ಅವರ ಆ ಕಾರ್ಯವನ್ನು ಬಲು ಕಷ್ಟಮಯವಾಗಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ನವ ಉದಾರವಾದವು, ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಸಾರ್ವಭೌಮತ್ವಗಳನ್ನು ಮೊಟಕುಗೊಳಿಸುತ್ತದೆ. ಸರ್ಕಾರವು ವಿದೇಶಿ ಸಾಲದಾತರಿಗೆ ಋಣಿಯಾದಾಗ, ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಸಾರ್ವಭೌಮತ್ವಗಳು ಇನ್ನೂ ಹೆಚ್ಚು ಮೊಟಕುಗೊಳ್ಳುತ್ತವೆ. ಹಾಗಿದ್ದರೂ ಸಹ, ಎನ್‌ಡಿಎ ಸರ್ಕಾರವು ವಿದೇಶಿ ಸಾಲದಾತರಿಗೆ ಋಣಿಯಾಗಲು ಉದ್ದೇಶಿಸಿದೆ, ಪೂರ್ಣ ಅನಪೇಕ್ಷಿತವಾಗಿ.

ಈ ಬಜೆಟ್‌ನ ಎರಡನೆಯ ಆತಂಕಕಾರೀ ಅಂಶವು ಸಂಪನ್ಮೂಲಗಳ ಕೇಂದ್ರೀಕರಣಕ್ಕೆ ಸಂಬಂಧಿಸಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಈಗಾಗಲೇ ಉಂಟಾಗಿರುವ ಕೊರತೆಯು ಕೇಂದ್ರ ಮತ್ತು ರಾಜ್ಯಗಳನ್ನು ಸಮಾನವಾಗಿ ಬಾಧೆಗೊಳಪಡಿಸಿದೆ. ಈ ಪರಿಸ್ಥಿತಿಯಲ್ಲಿ, ಕೇಂದ್ರ ಸರ್ಕಾರವು ರಾಜ್ಯಗಳೊಂದಿಗೆ ಹಂಚಿಕೆಯಾಗದಂತಹ ಸರ್ಚಾರ್ಜ್(ಅಧಿಭಾರ) ಮತ್ತು ಸೆಸ್‌ಗಳ ಮೂಲಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ಆಯ್ಕೆ ಮಾಡಿಕೊಂಡಿದೆ. ಉದಾಹರಣೆಗೆ, 2ರಿಂದ 5 ಕೋಟಿ ರೂಗಳ ವರಮಾನದ ಅತಿ ಶ್ರೀಮಂತರ ಮೇಲಿನ ಸರ್ಚಾರ್ಜ್(ತೆರಿಗೆ) ದರ ಏರಿಸಲಾಗಿದೆ. ಸರ್ಚಾರ್ಜ್ ಮೂಲಕ ಸಂಗ್ರಹವಾಗುವ ಹಣ ರಾಜ್ಯಗಳೊಂದಿಗೆ ಹಂಚಿಕೆಯಾಗುವುದಿಲ್ಲ. ಪರಿಣಾಮವಾಗಿ, ರಾಜ್ಯಗಳು ಈಗಾಗಲೇ ವಿತ್ತೀಯ ಕೊರತೆಗೆ ಒಳಗಾಗಿರುವ ಪರಿಸ್ಥಿತಿಯಲ್ಲಿ, ಅವರಿಗೆ ನ್ಯಾಯಯುತವಾಗಿ ದಕ್ಕಬೇಕಾಗಿದ್ದ ಆದಾಯ ದಕ್ಕದಾಗಿದೆ.

ಮೊದಲಿಗೆ, ಜಿಎಸ್‌ಟಿಯೇ ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸಿದೆ. ಆಮೇಲೆ, ಬೇಕಾದಷ್ಟು ಆದಾಯ ತರುವಲ್ಲಿ ಜಿಎಸ್‌ಟಿಯ ಸೋಲು ರಾಜ್ಯಗಳ ಹಣಕಾಸಿನ ಪರಿಸ್ಥಿತಿ ಮತ್ತಷ್ಟು ಹದಗೆಡುವಂತೆ ಮಾಡಿದೆ. ಹಾಗಾಗಿ, ಈಗ ರಾಜ್ಯಗಳಿಗೆ ಆದಾಯ ಹೆಚ್ಚಿಸಿಕೊಳ್ಳುವ ಮಾರ್ಗವೇ ಇಲ್ಲವಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಕೇಂದ್ರ ಸರ್ಕಾರವು, ಉದ್ದೇಶಪೂರ್ವಕವಾಗಿಯೇ, ರಾಜ್ಯಗಳೊಂದಿಗೆ ಹಂಚಿಕೆಯಾಗದಂತಹ ರೀತಿಯಲ್ಲಿ ತನಗೆ ಮಾತ್ರ ಆದಾಯ ಹೆಚ್ಚಿಸಿಕೊಳ್ಳುವ ಕ್ರಮವು ರಾಜ್ಯಗಳನ್ನು ಇಕ್ಕಟ್ಟಿಗೆ ತಳ್ಳಿದೆ.

ಬಲ ಪಂಥೀಯ ನಿರಂಕುಶಾಧಿಕಾರದತ್ತ ದೇಶ ಬದಲಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ಬದಲಾವಣೆಯಲ್ಲಿ, ರಾಜ್ಯಗಳ ಅಧಿಕಾರ ಮತ್ತು ಆದಾಯಗಳ ಮೊಟುಕುಗೊಳಿಸುವಿಕೆ ವಹಿಸಿದ ಪಾತ್ರ ಸಣ್ಣದೇನಲ್ಲ. ಈ ಬಜೆಟ್ ಈ ಪ್ರವೃತ್ತಿಯನ್ನೇ, ಇನ್ನಷ್ಟು ಪ್ರತೀಕಾರ ಭಾವದೊಂದಿಗೆ ಮುಂದಕ್ಕೆ ಒಯ್ಯುತ್ತಿದೆ.

'ಬಂಡವಾಳ' ಬಿಡುಗಡೆಗೆ ಅಗಸ್ಟ್ 2 ರಂದು ಬನ್ನಿ!


(ಸಮಾರಂಭದ ವಿವರಗಳು ಪುಟ 16 ರಲ್ಲಿರುವ ಆಹ್ವಾನ ಪತ್ರಿಕೆಯಲ್ಲಿದೆ)

ಜಗತ್ತಿನ ಮೇಲೆ ಅಗಾಧ ಪ್ರಭಾವ ಬೀರಿರುವ ಒಂದು ಮೇರು ಗ್ರಂಥ 'ಬಂಡವಾಳ' ಈಗ ಕನ್ನಡದಲ್ಲಿ ಪ್ರಕಟವಾಗುತ್ತಿದೆ. ಇದು ಮುಖ್ಯವಾಗಿ, ಜಗತ್ತಿನ ಸಂಪತ್ತನ್ನು ಸೃಷ್ಟಿಸುವ ದುಡಿಮೆಗಾರರ ಆಂದೋಲನವನ್ನು ಒಂದು ಪ್ರಮುಖ ಶಕ್ತಿಯಾಗಿ ರೂಪಿಸಿರುವ ಗ್ರಂಥ. ಜಗತ್ತಿನ ಹಲವಾರು ಭಾಷೆಗಳಿಗೆ ಅನುವಾದಗೊಂಡಿರುವ ಉದ್ಗ್ರಂಥ.

1867ರಲ್ಲಿ ಜರ್ಮನ್ ಭಾಷೆಯಲ್ಲಿ ಇದು ಪ್ರಕಟವಾದ ಎರಡು ದಶಕಗಳ ನಂತರ ಇಂಗ್ಲೀಷಿಗೆ ಅನುವಾದಗೊಂಡು ಪ್ರಕಟವಾದಾಗ ಕಾರ್ಲ್ ಮಾರ್ಕ್ಸ್‌ರವರ ನಿಕಟ ಸಹಯೋಗಿ ಫ್ರೆಡರಿಕ್ ಎಂಗೆಲ್ಸ್ "ದಾಸ್ ಕ್ಯಾಪಿಟಲ್"ನ ಇಂಗ್ಲೀಷ್ ಆವೃತ್ತಿಯ ಪ್ರಕಟಣೆಗೆ ಯಾವುದೇ ಸಮರ್ಥನೆ ಬೇಕಾಗಿಲ್ಲ. ಅದಕ್ಕೆ ಬದಲು, ಇಂಗ್ಲೀಷ್ ಆವೃತ್ತಿ ಬರಲು ಇಷ್ಟು ದೀರ್ಘ ವಿಳಂಬ ಯಾಕೆ ಆಯಿತು ಎಂಬುದಕ್ಕೆ ಸಮಜಾಯಿಷಿ ಕೊಡಬೇಕಾದೀತು" ಎಂದು ಹೇಳಿರುವ ಮಾತನ್ನು ಈಗ 150 ವರ್ಷಗಳ ನಂತರ ಬಹುಶಃ ಕನ್ನಡ ಅನುವಾದ ಪ್ರಕಟವಾಗುತ್ತಿರುವಾಗಲೂ ಹೇಳಬಹುದು. ವಿಶೇಷವಾಗಿ, ದೇಶದಲ್ಲಿ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಬಂಡವಾಳಿಗರಿಗೆ ಸಕಲ ಪ್ರೋತ್ಸಾಹಗಳನ್ನು ಒದಗಿಸಬೇಕು, ಅದಕ್ಕಾಗಿ ಕಾರ್ಮಿಕರ ವೇತನ/ಕೂಲಿಗಳೂ ಸೇರಿದಂತೆ ಅವರು ದಶಕಗಳಿಂದ ಹೋರಾಡಿ ಪಡೆದ ಹಕ್ಕುಗಳನ್ನು, ಸೌಲಭ್ಯಗಳನ್ನು ಮೊಟಕುಗೊಳಿಸಬೇಕು, ರೈತರ ಮತ್ತು ಸಣ್ಣ ಉತ್ಪಾದಕರ ಉತ್ಪಾದನಾ ಸಾಧನಗಳನ್ನು (ಭೂಮಿ ಇತ್ಯಾದಿಗಳನ್ನು) ಕಿತ್ತುಕೊಂಡು ಅವನ್ನು ಬೃಹತ್ ಕಾರ್ಪೊರೇಟ್‌ಗಳಿಗೆ ಕೊಡಬೇಕು, ಸಾಮಾಜಿಕ ಸಂಪನ್ಮೂಲಗಳಿಂದ ಕಟ್ಟಿದ ಸಾರ್ವಜನಿಕ ಕ್ಷೇತ್ರದ ಉದ್ಯಮಗಳನ್ನು ಹಾಗೂ ಪ್ರಾಕೃತಿಕ ಸಂಪನ್ಮೂಲಗಳಾದ ನದಿ, ಗಣಿ, ಮತ್ತು ಕಾಡುಗಳನ್ನು (ಮೊಬೈಲ್‌ಗೆ ಬಳಸುವ ಜಿ ಇತ್ಯಾದಿ ತರಂಗಾಂತರಗಳನ್ನು ಸಹ) ದೊಡ್ಡ ಖಾಸಗಿ ಬಂಡವಾಳಗಾರರಿಗೆ ಮೂರು ಕಾಸಿಗೆ ವಹಿಸಿಕೊಡಬೇಕೆಂದು ನಮ್ಮನ್ನು ಆಳುವ ಸರಕಾರಗಳು 'ಒಮ್ಮತ'ದಿಂದ ಹೇಳುತ್ತಿರುವಾಗ.

ಈ 'ಒಮ್ಮತ' ಕಾರ್ಮಿಕರು ಮತ್ತು ರೈತರು ಮತ್ತು ಇತರ ಸಣ್ಣ ಉತ್ಪಾದಕರನ್ನಷ್ಟೇ ಅಲ್ಲ, ವಿದ್ಯಾರ್ಥಿಗಳು, ಯುವಜನರು ಮತ್ತಿತರ ಸಮಾಜದ ಬಹುಸಂಖ್ಯಾತ ವಿಭಾಗಗಳನ್ನೂ ತಟ್ಟುತ್ತಿವೆ. ನಮ್ಮನ್ನು ಆಳುವವರ ಇಂತಹ ಯೋಜನೆಗಳನ್ನು ಅರ್ಥಮಾಡಿಕೊಳ್ಳಲು ಈ ಗ್ರಂಥದಲ್ಲಿ ಪ್ರತಿಪಾದಿಸಿರುವ ಬಂಡವಾಳ ಶೇಖರಣೆಯ ಸಿದ್ಧಾಂತ, ಹಣ, ಶ್ರಮದ ಮೌಲ್ಯ, ಮಿಗುತಾಯ ಮೌಲ್ಯ, ಕೂಲಿಯ ಸಿದ್ಧಾಂತ ಇತ್ಯಾದಿಗಳು ಬಹಳಷ್ಟು ನೆರವಾಗುತ್ತವೆ.

ಇದು ಆಳವಾದ ಅಧ್ಯಯನದ ಆಧಾರದಲ್ಲಿ ರಚಿಸಿದ ಗ್ರಂಥ. ರಾಜಕೀಯ ಅರ್ಥಶಾಸ್ತ್ರದ ಬೆಳವಣಿಗೆಯಲ್ಲಿಯೇ ಮೈಲಿಗಲ್ಲಾದ ಒಂದು ಗ್ರಂಥ. 1950ರ ಮೊದಲು ಪ್ರಕಟವಾದ ಸಮಾಜಶಾಸ್ತ್ರದ ಕೃತಿಗಳಲ್ಲಿ ಅತ್ಯಂತ ಹೆಚ್ಚು ಉಲ್ಲೇಖಿತ ಗ್ರಂಥ. 2008ರ ಆರ್ಥಿಕ ಕುಸಿತವನ್ನು ಅರ್ಥ ಮಾಡಿಕೊಳ್ಳಲು ಹಲವು ಅರ್ಥಶಾಸ್ತ್ರಜ್ಞರು ಮತ್ತೆ ತಿರುವಿ ಹಾಕಿದ ಗ್ರಂಥ. ಯುರೋಪಿನಲ್ಲಿ ಬಂಡವಾಳಶಾಹೀ ವ್ಯವಸ್ಥೆಯ ಏರುಗತಿಯ ಸಂದರ್ಭದಲ್ಲಿ ಅದರ ಕಾರ್ಯವೈಖರಿಯ ಎಲ್ಲ ಆಯಾಮಗಳನ್ನು ಪರಿಶೀಲಿಸಿ ಅಪಾರ ಮಾಹಿತಿಗಳನ್ನು ಕಲೆಹಾಕಿ ಅವುಗಳನ್ನು ಪ್ರಖರ ವಿಶ್ಲೇಷಣೆಗೆ ಒಳಪಡಿಸಿರುವ ಒಂದು ಸಾರ್ವಕಾಲಿಕ ಮಹತ್ವವುಳ್ಳ ಅಧ್ಯಯನ ಗ್ರಂಥ. ಈ ದೃಷ್ಟಿಯಲ್ಲಿ ಸಾಮಾಜಿಕ ವಿಜ್ಞಾನಗಳ ಅದರಲ್ಲೂ ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರದ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕರು ಇಡಿಯಾಗಿ ಓದಲೇಬೇಕಾದ ಕೃತಿ.



ಹಲವರು ಭಾವಿಸಿರುವಂತೆ ಈ ಗ್ರಂಥ ಕಬ್ಬಿಣದ ಕಡಲೆಯೇನೂ ಅಲ್ಲ. ಕಾರ್ಮಿಕರಂತೂ, ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಇತರರಿಗಿಂತ ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದಾದ ಗ್ರಂಥ. ಕಾರ್ಲ್ ಮಾರ್ಕ್ಸ್ ಮೇಧಾವಿ ತತ್ವಶಾಸ್ತ್ರಜ್ಞರೂ, ರಾಜಕೀಯ ಅರ್ಥಶಾಸ್ತ್ರಜ್ಞರೂ ಆಗಿದ್ದರೂ ಈ ಗ್ರಂಥವನ್ನು ರಚಿಸಿದ್ದು ಕೇವಲ ಪರಿಣತರೊಂದಿಗೆ ಚರ್ಚೆ, ವಾಗ್ವಾದಕ್ಕೆಂದಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಾಗಿ ಕಾರ್ಮಿಕರು ಮತ್ತು ಕಾರ್ಮಿಕ ಚಳುವಳಿಯ ನೇತಾರರು ವಸ್ತುಸ್ಥಿತಿಯನ್ನು ಅರ್ಥಮಾಡಿಕೊಂಡು ಬದಲಾವಣೆಯ ಹರಿಕಾರರಾಗಬೇಕು ಎಂಬುದು ಅವರ ಬಯಕೆಯಾಗಿತ್ತು. ಏಕೆಂದರೆ ತತ್ವಜ್ಞಾನಿಗಳು ಜಗತ್ತಿನ ಬಗ್ಗೆ ವ್ಯಾಖ್ಯಾನಗಳನ್ನೇನೋ ಬಹಳಷ್ಟು ಕೊಟ್ಟಿದ್ದಾರೆ, ಆದರೆ ನಿಜವಾಗಿ ಜಗತ್ತನ್ನು ಬದಲಾಯಿಸುವುದು ಹೇಗೆ ಎಂಬುದೇ ಮನುಕುಲದ ಮುಂದಿರುವ ಪ್ರಶ್ನೆ ಎಂದ ತತ್ವಜ್ಞಾನಿ ಇವರು. ಮತ್ತು ಈ ಬದಲಾವಣೆ ಕಾರ್ಮಿಕ ವರ್ಗದಿಂದ ಮಾತ್ರ ಸಾಧ್ಯ ಎಂದು ಯುರೋಪಿನಾದ್ಯಂತ ಕಾರ್ಮಿಕ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ಕೂಡ.

ಹೀಗೆ ಗಂಭೀರ ಅಧ್ಯಯನಶೀಲರಿಗೂ, ದೇಶದ ಸಂಪತ್ತನ್ನು ಸೃಷ್ಟಿಸುತ್ತಿರುವ ಶ್ರಮಜೀವಿಗಳಿಗೂ ಸಮಾನ ರೀತಿಯಲ್ಲಿ ಬಹು ಉಪಯುಕ್ತವಾದ ಈ ಗ್ರಂಥವನ್ನು ನಾಡಿನ ಇಪ್ಪತ್ತಕ್ಕೂ ಹೆಚ್ಚು ಅನುವಾದಕರ ನೆರವಿನಿಂದ ಕನ್ನಡದಲ್ಲಿ ತರುತ್ತಿದ್ದು, ಆಗಸ್ಟ್ 2 ರಂದು 'ಬಂಡವಾಳ'ದ ಬಿಡುಗಡೆಯ ಸಮಾರಂಭವನ್ನು ಯೋಜಿಸ ಲಾಗಿದೆ.

ಕ್ರಿಯಾ ಮಾಧ್ಯಮ

ಕೆಆರ್ ಪೇಟೆ ತಾಲ್ಲೂಕು ಕಛೇರಿ ಎದುರು ದಲಿತ ಹಕ್ಕುಗಳ ಸಮಿತಿಯಿಂದ ಪ್ರತಿಭಟನೆ

ದಲಿತರ ಭೂಮಿ ಕಬಳಿಸಲು ಸ್ಥಳೀಯ ಮಾಜಿ ಶಾಸಕನ ದಬ್ಬಾಳಿಕೆಯ ಯತ್ನ ಮತ್ತು ರಾಜಕೀಯ ಕುಮ್ಮಕ್ಕಿನಿಂದ ದಲಿತರ ಮೇಲೆ ಪೋಲೀಸರ ದೌರ್ಜನ್ಯ ಖಂಡಿಸಿ 18 ಜುಲೈ 2019 ರಂದು ಕೆ.ಆರ್ ಪೇಟೆ ತಾಲ್ಲೂಕು ಕಛೇರಿ ಮುಂದೆ ದಲಿತ ಹಕ್ಕುಗಳ ಸಮಿತಿಯು ಪ್ರತಿಭಟನೆಯನ್ನು ನಡೆಸಿತು.



ತಾಲೂಕಿನ ಬೊಮ್ಮೇನಹಳ್ಳಿ ಗ್ರಾಮದ ದಲಿತ ವ್ಯಕ್ತಿ ರಾಮಕೃಷ್ಣಯ್ಯ ಅವರ ಜಮೀನನ್ನು ಕಬಳಿಸಲು ದೌರ್ಜನ್ಯ ನಡೆಸಿ, ಹುನ್ನಾರ ನಡೆಸುತ್ತಿರುವ ಕೆ.ಆರ್ ಪೇಟೆ ಮಾಜಿ ಶಾಸಕ ಬಿ. ಪ್ರಕಾಶ್ ಹಾಗೂ ಸಹೋದರ ಬಿ. ಸೋಮಶೇಖರ್ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ, ದಲಿತ ಹಕ್ಕುಗಳ ಸಮಿತಿ (ಡಿಎಚ್‌ಎಸ್) ಕಾರ್ಯಕರ್ತರು ಕೆಆರ್ ಪೇಟೆ ತಾಲ್ಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರ ವೃತ್ತದಿಂದ ಮೆರವಣಿಗೆ ಹೊರಟ ನೂರಾರು ದಲಿತ ಹಕ್ಕುಗಳ ಸಮಿತಿಯ ಕಾರ್ಯಕರ್ತರು ದಲಿತ ವ್ಯಕ್ತಿ ರಾಮಕೃಷ್ಣಯ್ಯ ಅವರ ಮೇಲೆ ದೌರ್ಜನ್ಯ ನಡೆಸುತ್ತಿರುವರ ವಿರುದ್ಧ ಘೋಷಣೆಗಳನ್ನು ಕೂಗಿದರು. ಹಾಗೂ ರಕ್ಷಣೆ ನೀಡದೆ ಸವರ್ಣೀಯರಿಗೆ ಕುಮ್ಮಕ್ಕು ನೀಡುತ್ತಿರುವ ಪೋಲೀಸ್ ಅಧಿಕಾರಿಗಳ ಕ್ರಮವನ್ನು ಖಂಡಿಸಿದರು.

ಬೊಮ್ಮೇನಹಳ್ಳಿ ಯ ಸರ್ವೆ ನಂಬರ್ 149 ರಲ್ಲಿರುವ ಜಮೀನನ್ನು ಮೈಸೂರಿನ ಪರಕಾಲ ಸ್ವಾಮಿ ಮಠ ಅವರಿಂದ 1958ನೇ ಇಸವಿಯಲ್ಲಿ ಕುಲವಾಡಿಕೆ ಭೂಮಿಯಾಗಿ ಶುದ್ಧ ಕ್ರಯಕ್ಕೆ ರಾಮಕೃಷ್ಣಯ್ಯ ಅವರ ತಂದೆ ಈರಯ್ಯನವರು ಪಡೆದುಕೊಂಡಿದ್ದರು. ಅಲ್ಲದೆ ಸ್ವಾಧೀನಾನುಭವದಲ್ಲಿದ್ದಾರೆ.

ಈಗ ಈ ಜಮೀನಿನ ಪಕ್ಕದಲ್ಲಿರುವ ಸವರ್ಣೀಯ ವ್ಯಕ್ತಿಯಾದ ಮಾಜಿ ಶಾಸಕ ಬಿ. ಪ್ರಕಾಶ್ ರವರ ಸಹೋದರ ಬಿ ಸೋಮಶೇಖರ್ ಅವರು ದಲಿತರ ಜಮೀನು ಕಬಳಿಸಲು ಹುನ್ನಾರ ನಡೆಸುತ್ತಿದ್ದಾರೆ.

ರಾಮಕೃಷ್ಣಯ್ಯ ಬಳಿ ತಮ್ಮ ಜಮೀನಿನ ಎಲ್ಲಾ ದಾಖಲೆಗಳು ಇದ್ದರೂ ಸಹ ಜಮೀನಿಗೆ ಹೋಗದಂತೆ ತಂಟೆ-ತಕರಾರು ಮಾಡುತ್ತಿದ್ದಾರೆ.

ಈ ಸಂಬಂಧ ತೆಂಗಿನ ತೋಟದಲ್ಲಿರುವ ಫಸಲುಗಳನ್ನು ಸವರ್ಣೀಯ ವ್ಯಕ್ತಿ ದೋಚಿಕೊಂಡು ಹೋಗುತ್ತಿದ್ದರೂ ಸಹ ಪೋಲೀಸರು ರಕ್ಷಣೆ ನೀಡಿರುವುದಿಲ್ಲ ಬದಲಾಗಿ ದಲಿತರ ಮೇಲೆ ದೌರ್ಜನ್ಯ ನಡೆಸಲು ಕುಮ್ಮಕ್ಕು ನೀಡುತ್ತಿರುತ್ತಾರೆ.

ಹಾಗಾಗಿ ದಲಿತರಾದ ರಾಮಕೃಷ್ಣಯ್ಯ ಅವರಿಗೆ ಅವರ ಜಮೀನಿನ ದಾಖಲೆ ಪತ್ರಗಳ ಆಧಾರದ ಮೇಲೆ ಖಾತೆ ಮಾಡಿಕೊಡಬೇಕು ರಾಮಕೃಷ್ಣಯ್ಯ ಕುಟುಂಬಕ್ಕೆ ಸೂಕ್ತ ರಕ್ಷಣೆ ಕೊಡಿಸಬೇಕು.

ಪೋಲೀಸರ ಕಣ್ಣಮುಂದೆಯೇ ದೌರ್ಜನ್ಯ ನಡೆಯುತ್ತಿದ್ದರೂ ಸೂಕ್ತ ರಕ್ಷಣೆ ನೀಡದ ಗ್ರಾಮಾಂತರ ಪೋಲೀಸರ ವಿರುದ್ಧ ಹಾಗೂ ದೌರ್ಜನ್ಯ ನಡೆಸಿರುವ ವಿ ಸೋಮಶೇಖರ್ ವಿರುದ್ಧ ಎಸ್ಸಿ-ಎಸ್ಟಿ ದೌರ್ಜನ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ತಹಸೀಲ್ದಾರ್ ರವರನ್ನು ಒತ್ತಾಯಿಸಿ, ಮನವಿ ನೀಡಿದರು.

ಪ್ರತಿಭಟನೆಯಲ್ಲಿ ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕ ಗೋಪಾಲಕೃಷ್ಣ, ರಾಜ್ಯ ಸಹ ಸಂಚಾಲಕ ಪೃಥ್ವಿ ಎಂ.ಜಿ. ಮಂಡ್ಯ ಜಿಲ್ಲಾ ಸಂಚಾಲಕ ಆರ್. ಕೃಷ್ಣ ರಾಜ್ಯ ಸಮಿತಿ ಸದಸ್ಯರಾದ ರಾಜು ಸಿಗರನಹಳ್ಳಿ, ಶೈಲಜಾ, ಸಹ ಸಂಚಾಲಕರಾದ ಅಂಬುಜಿ ನೊಂದ ದಲಿತ ರಾಮಕೃಷ್ಣಯ್ಯ ಮತ್ತು ಕುಟುಂಬ ವರ್ಗ, ಜಿಲ್ಲಾ ಕೂಲಿಕಾರರ ಸಂಘದ ಅಧ್ಯಕ್ಷ ಆಂಜನಪ್ಪ ದಲಿತ ಹಕ್ಕುಗಳ ಸಮಿತಿಯ ಮೈಸೂರು ಸಂಚಾಲಕ ರವಿಶಂಕರ್ ಮಂಡ್ಯ ತಾಲೂಕು ಸಂಚಾಲಕ ಮಂಜುನಾಥ್ ಸೇರಿದಂತೆ ನೂರಾರು ಕಾರ್ಯಕರ್ತರು ಹಾಗು ದಲಿತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮದ್ದೂರು ತಾ.ಸ. ತನುಜಾ ಭಾಗವಹಿಸಿ ಮಾತನಾಡಿದರು. ನಂತರ ತಹಸಿಲ್ದಾರ್ ಎಂ. ಶಿವಮೂರ್ತಿಯವರಿಗೆ ಹಕ್ಕೊತ್ತಾಯದ ಮನವಿ ಪತ್ರ ಸಲ್ಲಿಸಲಾಯಿತು. ■



ಸುಡಾನ್ : ಮಧ್ಯಂತರ ಸರಕಾರದಲ್ಲಿ ಭಾಗವಹಿಸದಿರಲು ಕಮ್ಯುನಿಸ್ಟರ ನಿರ್ಧಾರ



ಶರತ್‌ಚಂದ್ರ

ಪ್ರತಿಭಟನಾ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಸುಡಾನ್ ಕಮ್ಯುನಿಸ್ಟ್ ಪಕ್ಷ ಮಧ್ಯಂತರ ಜಂಟಿ ಸರಕಾರದಲ್ಲಿ ಭಾಗವಹಿಸದಿರಲು ನಿರ್ಧರಿಸಿದೆ. ಎರಡನೇ ಸುತ್ತಿನ ಮಾತುಕತೆಯಲ್ಲಿ ಮಧ್ಯಂತರ ಜಂಟಿ ಸರಕಾರದ ಬಗ್ಗೆ ಮಾಡಿರುವ ಪ್ರಸ್ತಾವಗಳನ್ನು ಒಪ್ಪಲಾಗದು. ಈ ಪ್ರಸ್ತಾವಗಳು ಪ್ರತಿಭಟನಾ ಚಳುವಳಿಯ ಆಶೋತ್ತರಗಳನ್ನು ಮತ್ತು ಜನತೆಯ ಕ್ರಾಂತಿಯ ಉದ್ದೇಶಗಳನ್ನು ಈಡೇರಿಸುವುದಿಲ್ಲ ಎಂದು ಅದು ಹೇಳಿದೆ. ಮಿಲಿಟರಿ ಆಡಳಿತ ನೈಜ ನಾಗರಿಕ ಆಡಳಿತಕ್ಕೆ ದಾರಿ ಮಾಡುವವರೆಗೆ ಸಾಮಾಹಿಕ ಕಾರ್ಯಾಚರಣೆಗಳನ್ನು ಮುಂದುವರೆಸಬೇಕೆಂದು ಕರೆ ನೀಡಿದೆ.

ಸುಡಾನಿನಲ್ಲಿ ಮಿಲಿಟರಿ ಸರಕಾರ (ಟಿ.ಎಂ.ಸಿ. – ಟ್ರಾನ್ಸಿಶನಲ್ ಮಿಲಿಟರಿ ಕೌನ್ಸಿಲ್) ಮತ್ತು ಅದರ ವಿರುದ್ಧ ಪ್ರತಿಭಟನಾ ಚಳುವಳಿಯ ನಾಯಕತ್ವ (ಡಿ.ಎಫ್.ಸಿ.ಎಫ್ – ಡಿಕ್ಲರೇಶನ್ ಆಫ್ ಫ್ರೀಡಂ ಅಂಡ್ ಚೇಂಜ್ ಫೋರ್ಸಸ್) ಒಂದು ಮಧ್ಯಂತರ ಒಪ್ಪಂದಕ್ಕೆ ಕಳೆದ ವಾರ ಬಂದಿದ್ದು, ಮಧ್ಯಂತರ ಜಂಟಿ ಸರಕಾರ ನಡೆಸಲು ನಿರ್ಧರಿಸಿದ್ದವು. ಆದರೆ ಈಗ ಪ್ರತಿಭಟನಾ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಸುಡಾನ್ ಕಮ್ಯುನಿಸ್ಟ್ ಪಕ್ಷ ಮಧ್ಯಂತರ ಜಂಟಿ ಸರಕಾರದಲ್ಲಿ ಭಾಗವಹಿಸದಿರಲು ನಿರ್ಧರಿಸಿದೆ. ಎರಡನೇ ಸುತ್ತಿನ ಮಾತುಕತೆಯಲ್ಲಿ ಮಧ್ಯಂತರ ಜಂಟಿ ಸರಕಾರದ ಬಗ್ಗೆ ಮಾಡಿರುವ ಪ್ರಸ್ತಾವಗಳನ್ನು ಒಪ್ಪಲಾಗದು. ಈ ಪ್ರಸ್ತಾವಗಳು ಪ್ರತಿಭಟನಾ ಚಳುವಳಿಯ ಆಶೋತ್ತರಗಳನ್ನು ಮತ್ತು ಜನತೆಯ ಕ್ರಾಂತಿಯ ಉದ್ದೇಶಗಳನ್ನು ಈಡೇರಿಸುವುದಿಲ್ಲ ಎಂದು ಅದು ಹೇಳಿದೆ. ಮಿಲಿಟರಿ ಆಡಳಿತ ನೈಜ ನಾಗರಿಕ ಆಡಳಿತಕ್ಕೆ ದಾರಿ ಮಾಡುವವರೆಗೆ ಸಾಮಾಹಿಕ ಕಾರ್ಯಾಚರಣೆಗಳನ್ನು ಮುಂದುವರೆಸಬೇಕೆಂದು ಕರೆ ನೀಡಿದೆ.

ಮೊದಲ ಸುತ್ತಿನಲ್ಲಿ ಟಿ.ಎಂ.ಸಿ. ಒಪ್ಪಿದ್ದ ಹಲವು ಅಂಶಗಳಿಂದ ಎರಡನೇ ಸುತ್ತಿನ ಪ್ರಸ್ತಾವದಲ್ಲಿ ಅದು ಹಿಂದೆ ಸರಿದಿದೆ. ಇನ್ನೂ ಹಲವು ಅಂಶಗಳ ಬಗ್ಗೆ ಹೊಸ ಷರತ್ತುಗಳನ್ನು ವಿಧಿಸಿದೆ. ಪ್ರತಿಭಟನಾ ಚಳುವಳಿಗಳ ಕೂಟ ಡಿ.ಎಫ್.ಸಿ.ಎಫ್ ಮತ್ತು ಸುಡಾನ್ ಕಾಲ್ (ಮಿಲಿಟರಿ ಸರಕಾರದ ವಿರುದ್ಧ ಸಶಸ್ತ್ರ ಹೋರಾಟದಲ್ಲಿ ಗೆರಿಲ್ಲಾ ಗುಂಪುಗಳ ಕೂಟ) ಸಹ ಟಿ.ಎಂ.ಸಿ.ಯ ಈ ಪ್ರಸ್ತಾವಗಳಿಗೆ ವಿರೋಧ ವ್ಯಕ್ತ ಪಡಿಸಿದೆ. ಟಿ.ಎಂ.ಸಿ ಈ ಪ್ರಸ್ತಾವಗಳನ್ನು ರಾಜಕೀಯ ಮತ್ತು ಸಾಂವಿಧಾನಿಕ ಘೋಷಣೆಯ ರೂಪದಲ್ಲಿ ಪ್ರಕಟಿಸಿದೆ.

ಈ ಎರಡು ಘೊಷಣೆಗಳನ್ನು ಒಪ್ಪಿಕೊಂಡರೆ, ಮಧ್ಯಂತರ ಜಂಟಿ ಸರಕಾರ ತನ್ನ ಅವಧಿಯಲ್ಲಿ ಮಾಡಬೇಕಾದ ಹಲವು ಕೆಲಸಗಳನ್ನು ಮಾಡುವುದು ಸಾಧ್ಯವಾಗುವುದಿಲ್ಲ. ಈ ಕೆಲಸಗಳನ್ನು ಒಪ್ಪಂದದ ನಂತರ ಸಹಿ ಹಾಕಲಾಗಿದ್ದ 'ಸ್ವಾತಂತ್ರ್ಯ ಮತ್ತು ಬದಲಾವಣೆಯ ಘೊಷಣೆ'ಯ ಪ್ರಕಾರ ಮಧ್ಯಂತರ ಸರಕಾರ ನಿರ್ವಹಿಸಬೇಕಾಗಿತ್ತು.

ವಿದೇಶ ನೀತಿ ಮತ್ತು ವಿದೇಶದ ಸರಕಾರದ ಜತೆ ಮಾಡಿದ್ದ ಒಪ್ಪಂದಗಳನ್ನು ಬದಲಿಸುವಂತಿಲ್ಲ ಎಂಬುದು ಟಿ.ಎಂ.ಸಿ ರಾಜಕೀಯ ಮತ್ತು ಸಾಂವಿಧಾನಿಕ ಘೋಷಣೆಯ ಒಂದು ಅಂಶ. ಹಿಂದಿನ ಅಲ್–ಬಶೀರ್ ಮತ್ತು ಮಿಲಿಟರಿ ಆಡಳಿತಗಳು ತನ್ನ ಹಿತಾಸಕ್ತಿ ಕಾಪಾಡಿಕೊಳ್ಳಲು ಮಾಡಿದ್ದ, ಆದರೆ ಬಹುಸಂಖ್ಯಾತ ಜನತೆಯ ಹಿತಾಸಕ್ತಿಗಳಿಗೆ ವಿರೋಧವಾಗಿದ್ದ ನೀತಿ ಮತ್ತು ಒಪ್ಪಂದಗಳನ್ನು ಬದಲಿಸುವುದು ಅಗತ್ಯ ಎಂಬುದು ಕಮ್ಯುನಿಸ್ಟರ ವಾದ.

ಸೌದಿ ನಾಯಕತ್ವದಲ್ಲಿ ಅಮೆರಿಕದ ಕುಮ್ಮಕ್ಕಿನಿಂದ ನಡೆಯುತ್ತಿರುವ ಬರ್ಬರ ಯೆಮೆನ್ ಯುದ್ಧದಲ್ಲಿ ಸುಡಾನ್ ಭಾಗವಹಿಸುತ್ತಿದ್ದು, ಅದರಿಂದ ಹಿಂದೆ ಸರಿಯಬೇಕು. ಅಮೆರಿಕದ ಮಿಲಿಟರಿ ವ್ಯವಸ್ಥೆಯ ಭಾಗವಾದ ಆಫ್ರಿಕಾಂ ಜತೆ ಆದ ಒಪ್ಪಂದಗಳಿಂದ ಹೊರ ಬರಬೇಕು. ಸಿಐಎ ಗೆ ಕೊಟ್ಟಿರುವ ನೆಲೆಗಳನ್ನು ತೆರವುಗೊಳಿಸಬೇಕು. ಇವು ಸುಡಾನ್ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ನೀತಿಗಳು ಮತ್ತು ಒಪ್ಪಂದಗಳು ಎಂಬುದು ಕಮ್ಯುನಿಸ್ಟರ ನಿಲುವು.

ಜುಲೈ 5ರಂದು ಸಹಿ ಮಾಡಲಾದ ಒಪ್ಪಂದದ ಪ್ರಕಾರ ಒಂದು ವಿಧಾನ ಸಭೆ ರಚಿಸಬೇಕಾಗಿತ್ತು. ಅದರ ಮೂರನೇ ಎರಡು ಭಾಗದ ಸದಸ್ಯರ ಆಯ್ಕೆ ಮಾಡುತ್ತದೆ. ಉಳಿದ ಸದಸ್ಯರು ಪದಚ್ಯುತಗೊಳಿಸಲಾದ ಒಮರ್ ಅಲ್–ಬಶೀರ್ ಸರಕಾರದಲ್ಲಿ ಭಾಗಿಯಾಗಿದ್ದವನ್ನು ಬಿಟ್ಟು ಇತರ ರಾಜಕೀಯ ಪಕ್ಷಗಳಿಗೆ ಸೇರಿದವರಾಗಿರುತ್ತಾರೆ. ಎರಡನೇ ಸಭೆಯಲ್ಲಿ ಈ ವಿಧಾನ ಸಭೆಯನ್ನು ತಕ್ಷಣವೇ ರಚಿಸಲು ಟಿ.ಎಂ.ಸಿ ನಿರಾಕರಿಸಿತು.



ಡಿ.ಎಫ್.ಸಿ.ಎಫ್ ನೇಮಿಸಿದ ಮಂತ್ರಿಮಂಡಲ ಆಯ್ಕೆ ಮಾಡಿದ ಸಮಿತಿ, ಆಫ್ರಿಕನ್ ಯೂನಿಯನ್ ಮೇಲ್ವಿಚಾರಣೆಯಲ್ಲಿ ಆರ್.ಎಸ್.ಎಫ್ (ರ್‍ಯಾಪಿಡ್ ಸಪೋರ್ಟ್ ಪೋರ್ಸಸ್) ಮಾಡಿದ ಯುದ್ಧಾಪರಾಧಗಳನ್ನು ತನಿಖೆ ಮಾಡಬೇಕು ಸಹ ಒಪ್ಪಂದದ ಭಾಗವಾಗಿತ್ತು. ಟಿ.ಎಂ.ಸಿ ಯ ಉಪಾಧ್ಯಕ್ಷ ನಾಯಕತ್ವದ ಈ ಕುಖ್ಯಾತ ಖಾಸಗಿ ಸೈನ್ಯ ಜೂನ್ 3ರಂದು ನಡೆಸಿದ ಭೀಕರ ದಾಳಿಯಲ್ಲಿ 120 ಪ್ರತಿಭಟನಾಕಾರರ ಕೊಲೆ ಮಾಡಿತ್ತು. ಹತ್ತಾರು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿತ್ತು. 700 ಜನರನ್ನು ತೀವ್ರವಾಗಿ ಘಾಸಿಗೊಳಿಸಿತ್ತು.

ಇವೆಲ್ಲವನ್ನು ನೋಡಿದರೆ ಪ್ರಭುತ್ವದ ಪರಾವಲಂಬಿ ಗುಂಪುಗಳ ಹಿತಾಸಕ್ತಿಗಳು, ಆರ್.ಎಸ್.ಎಫ್ ನಂತಹ ಖಾಸಗಿ ಸೈನ್ಯಗಳು ಸೇರಿದಂತೆ ಪ್ರಭುತ್ವದ ದಮನಕಾರಿ ಶಕ್ತಿಗಳನ್ನು ಜೀವಂತವಾಗಿಡುವುದು; ಹಾಗೂ ಸರ್ವಾಧಿಕಾರಿ ಮತ್ತು ಆಳವಾದ ಗೋಪ್ಯ ಪ್ರಭುತ್ವದ ಅಂಗಗಳ ಚೌಕಟ್ಟನ್ನು ಕಳಚಿ ಹಾಕುವ ಬದಲು ಅವನ್ನು ಕಾಪಾಡುತ್ತಾ ಬಳಸುವುದು ಟಿ.ಎಂ.ಸಿಯ ಉದ್ದೇಶವೆಂಬುದು ಸ್ಪಷ್ಟವೆಂದು ಸುಡಾನ್ ಕಮ್ಯುನಿಸ್ಟ್ ಪಕ್ಷದ ಅಭಿಪ್ರಾಯ.

ಇಷ್ಟು ಮಾತ್ರವಲ್ಲ, ಟಿ.ಎಂ.ಸಿ ನೇಮಿಸುವ ಅಧ್ಯಕ್ಷೀಯ ಮಂಡಳಿಯ ಅಧ್ಯಕ್ಷ 39 ತಿಂಗಳಲ್ಲಿ 21 ತಿಂಗಳುಗಳ ಮೊಲದ ಅವಧಿಯಲ್ಲಿ ಮಿಲಿಟರಿ ಅಧಿಕಾರಿಯಾಗಿರುತ್ತಾನೆ. ಅಧ್ಯಕ್ಷೀಯ ಮಂಡಳಿಯ ಅಧ್ಯಕ್ಷನಿಗೆ ನ್ಯಾಯಾಂಗದ ಮುಖ್ಯಸ್ಥನನ್ನು, ಪ್ರಮುಖ ದಂಡಾಧಿಕಾರಿ ಮತ್ತಿತರ ಪ್ರಮುಖ ಹುದ್ದೆಗಳಿಗೆ ವ್ಯಕ್ತಿಗಳನನು ನೇಮಿಸುವ ಅಧಿಕಾರವಿರುತ್ತದೆ. ಇದರಿಂದಾಗಿ ಟಿ.ಎಂ.ಸಿಗೆ ಮುಬರುವ ಯಾವುದೇ ಕಾನೂನು ಕ್ರಮಗಳಿಂದ ಪೂರ್ಣ ರಕ್ಷಣೆ ಸಿಗುತ್ತದೆ.

ಇವೆಲ್ಲಾ ಕಾರಣಗಳಿಂದ ಸುಡಾನ್ ಕಮ್ಯುನಿಸ್ಟ್ ಪಕ್ಷ ಮಧ್ಯಂತರ ಸರಕಾರದಲ್ಲಿ ಭಾಗವಹಿಸದೆ ಇರಲು ನಿರ್ಧರಿಸಿದೆ ಎಂದು ಘೋಷಿಸಿದೆ. ■

ವಿಪರೀತ ವಿದ್ಯುತ್ ದರ ಏರಿಕೆ ವಿರುದ್ಧ ಮೆಸ್ಕಾಂ ಪ್ರಧಾನ ಕಚೇರಿಯೆದುರು ಸಿಪಿಐ(ಎಂ) ಪ್ರತಿಭಟನಾ ಪ್ರದರ್ಶನ



ವಿಪರೀತ ವಿದ್ಯುತ್ ದರ ಏರಿಕೆ, ಹೆಚ್ಚುವರಿ ಡಿಪಾಸಿಟ್, ತಪ್ಪು ಲೆಕ್ಕಾಚಾರ ಮುಂತಾದ ಮೆಸ್ಕಾಂನ ಅವ್ಯವಸ್ಥೆಗಳ ವಿರುದ್ದ ಸಿಪಿಐ(ಎಂ) ನೇತ್ರತ್ವದಲ್ಲಿ 19 ಜುಲೈ 2019 ರಂದು ಮೆಸ್ಕಾಂ ಪ್ರಧಾನ ಕಚೇರಿಯೆದುರು ಪ್ರತಿಭಟನಾ ಪ್ರದರ್ಶನ ಜರುಗಿತು.

ನೂರಾರು ಸಂಖ್ಯೆಯಲ್ಲಿದ್ದ ಸಿಪಿಐ(ಎಂ) ಕಾರ್ಯಕರ್ತರು, ಸಾರ್ವಜನಿಕರು, 'ವಿದ್ಯುತ್ ದರ ಏರಿಕೆಯನ್ನು ಹಿಂಪಡೆಯಿರಿ, ಹೆಚ್ಚುವರಿ ಡಿಪಾಸಿಟ್ ಬೇಡವೇ ಬೇಡ, ತಪ್ಪು ಲೆಕ್ಕಾಚಾರಗಳನ್ನು ಸರಿಪಡಿಸಿರಿ' ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಬಳಿಕ ಬಿಜೈನಲ್ಲಿರುವ ಮೆಸ್ಕಾಂ ಪ್ರಧಾನ ಕಚೇರಿಯೆದುರು ಜಮಾವಣೆಗೊಂಡರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು, 'ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವುದರ ಜೊತೆಗೆ ವಿದ್ಯುತ್ ದರವೂ ಕೂಡ ತೀವ್ರವಾಗಿ ಹೆಚ್ಚುತ್ತಿದ್ದು, ಜನಸಾಮಾನ್ಯರ ಬದುಕು ತೀರಾ ದುಸ್ತರವಾಗಿದ್ದು, ಗಾಯದ ಮೇಲೆ ಬರೆ ಎಳೆದಂತಾಗಿದೆ. ಮತ್ತೊಂದು ಕಡೆ ಡಿಪಾಸಿಟ್ ಮೌಲ್ಯ ಕಡಿಮೆಯಾಗಿದೆ ಎಂದು ಜನತೆಗೆ ಪಂಗನಾಮ ಹಾಕಿ ಅವರಿಂದ ಹೆಚ್ಚುವರಿ ಡಿಪಾಸಿಟನ್ನು ವಸೂಲಿ ಮಾಡುವ ಮೂಲಕ ಮೆಸ್ಕಾಂ ಹಗಲು ದರೋಡೆ ನಡೆಸುತ್ತಿದೆ. ವಿದ್ಯುತ್ ಸಂಪರ್ಕ ಪಡೆಯುವಾಗಲೇ ಮೆಸ್ಕಾಂ ನಿಗದಿಪಡಿಸಿದ ಡಿಪಾಸಿಟ್ ನೀಡಲಾಗಿದ್ದರೂ ವರ್ಷಕ್ಕೆರಡು ಬಾರಿ ಬಲವಂತದಿಂದ ಗ್ರಾಹಕರಿಂದ ಡಿಪಾಸಿಟ್ ಹೆಸರಿನಲ್ಲಿ ಅಕ್ರಮ ವಸೂಲಿ ಮಾಡಲಾಗುತ್ತಿದೆ. ಮಾತ್ರವಲ್ಲದೆ ಜನರಿಗೆ ಅರ್ಥವಾಗದ ಲೆಕ್ಕಾಚಾರಗಳನ್ನು ಬಳಸಿ ಹೆಚ್ಚಿನ ಮೊತ್ತದ ಬಿಲ್ ನೀಡಲಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಐ(ಎಂ) ಮಂಗಳೂರು ನಗರ ಉತ್ತರ ಕಾರ್ಯದರ್ಶಿಗಳಾದ ದಯಾನಂದ ಶೆಟ್ಟಿಯವರು ಮಾತನಾಡುತ್ತಾ, 'ದಶಕಗಳ ಹಿಂದೆ ವಿದ್ಯುತ್ ದರವನ್ನು ಪೈಸೆಗಳ ಲೆಕ್ಕಾಚಾರದಲ್ಲಿ ಏರಿಸಲೂ ಕೂಡ ಹಿಂಜರಿಯುತ್ತಿತ್ತು ಹಾಗೂ ಅದನ್ನು ಬಹಿರಂಗವಾಗಿ ಮಾಧ್ಯಮಗಳ ಮೂಲಕ ಘೋಷಣೆ ಮಾಡುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಜನತೆಗೆ ಯಾವುದೇ ರೀತಿಯ ಮುನ್ಸೂಚನೆ ನೀಡದೆ ವರ್ಷಕ್ಕೆ 2 ಬಾರಿ ಏಕಾಏಕಿಯಾಗಿ ವಿದ್ಯುತ್ ದರವನ್ನು ವಿಪರೀತವಾಗಿ ಹೆಚ್ಚಿಸಿದೆ. ಇದರಿಂದಾಗಿ ಕುಟುಂಬವೊಂದರ ಒಟ್ಟು ಖರ್ಚಿನ ಕಾಲು ಭಾಗ ವಿದ್ಯುತ್ ಬಿಲ್ ಪಾವತಿಸಲು ಮೀಸಲಿಡಬೇಕಾದ ಅನಿವಾರ್ಯತೆ ಸ್ರಷ್ಟಿಯಾಗಿದೆ' ಎಂದು ಹೇಳಿದರು.


ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕ್ರಷ್ಣ ಶೆಟ್ಟಿ ಹಾಗೂ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯರಾದ ಯೋಗೀಶ್ ಜಪ್ಪಿನಮೊಗರುರವರು ಮೆಸ್ಕಾಂ ಅವ್ಯವಸ್ಥೆಗಳನ್ನು ತೀವ್ರವಾಗಿ ಖಂಡಿಸುತ್ತಾ 'ಈ ಬಗ್ಗೆ ಮಧ್ಯಪ್ರವೇಶಿಸಿ ಜನತೆಯ ಪರವಾಗಿ ತೀರ್ಮಾನ ಕೈಗೊಳ್ಳಬೇಕಾದ ರಾಜ್ಯ ಸರಕಾರವು ಡೋಲಾಯಮಾನ ಪರಿಸ್ಥಿತಿಯಲ್ಲಿದೆ. ತನ್ನ ಸ್ವಾರ್ಥ ಸಾಧನೆಗಾಗಿ ಜಾತ್ಯತೀತ ನೆಲೆಗಟ್ಟಿನಲ್ಲಿ ರಚಿತವಾದ ಸರಕಾರವನ್ನು ಕೆಲವೊಂದು ಶಾಸಕರು ಬಿಜೆಪಿ ಯೊಂದಿಗೆ ಶಾಮೀಲಾಗಿ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ' ಎಂದು ಒಕ್ಕೊರಲಿನಿಂದ ಹೇಳಿದರು. ಬಳಿಕ ಉನ್ನತ ಮಟ್ಟದ ನಿಯೋಗವೊಂದು ಮೆಸ್ಕಾಂ ನ ವ್ಯವಸ್ಥಾಪಕ ನಿರ್ದೇಶಕರನ್ನು ಭೇಟಿಯಾಗಿ ಮನವಿಯನ್ನು ಅರ್ಪಿಸಿತು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ನಾಯಕರಾದ ಜಯಂತಿ ಬಿ.ಶೆಟ್ಟಿ, ಸಂತೋಷ್ ಬಜಾಲ್, ಸಿಪಿಐ(ಎಂ) ಮಂಗಳೂರು ನಗರ ಮುಖಂಡರಾದ ಬಾಬು ದೇವಾಡಿಗ,ಬಶೀರ್ ಪಂಜಿಮೊಗರು, ದಿನೇಶ್ ಶೆಟ್ಟಿ, ಅಶೋಕ್ ಶ್ರೀಯಾನ್, ಮುಸ್ತಫಾ ಮುಂತಾದವರು ಭಾಗವಹಿಸಿದ್ದರು. ■

JANASHAKTHI KANNADA VARA PATRIKE JULY 22-28, 2019 Price: Rs. 10/- Date of Publication: 19 JULY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕಾರ್ಲ್ ಮಾರ್ಕ್ಸ್
ಬಂಡವಾಳ
ಸಂಪುಟ-1

ಕೃತಿ ಬಿಡುಗಡೆಯ ಚಾರಿತ್ರಿಕ ದಿನಕ್ಕೆ ಸಾಕ್ಷಿಯಾಗ ಬನ್ನಿ!



ಅಗಸ್ಟ್ 2, 2019
ಬೆಳಿಗ್ಗೆ 10.00 ಗಂಟೆ

ಕೊಂಡಜ್ಜಿ ಬಸಪ್ಪ ಸಭಾಂಗಣ
ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ
(ಮಹಾರಾಣಿ ಕಾಲೇಜು ಪಕ್ಕ)
ಅರಮನೆ ರಸ್ತೆ, ಬೆಂಗಳೂರು 560001

ಕೃತಿ ಬಿಡುಗಡೆ ಸಮಾರಂಭ

ಬಿಡುಗಡೆ : **ಬರಗೂರು ರಾಮಚಂದ್ರಪ್ಪ** ಅವರಿಂದ

ವಿಚಾರಸಂಕಿರಣ

ದಿಕ್ಸೂಚಿ ಭಾಷಣ: **ಪ್ರೊ. ಪ್ರಭಾತ್ ಪಟ್ನಾಯಕ್**

ಗೋಷ್ಠಿ-1 : 'ಬಂಡವಾಳ'ದ 150 ವರ್ಷ ಮತ್ತು ಎಡಪಂಥದ ಮರು-ಶೋಧನೆ
ಗೋಷ್ಠಿ-2 : ಬಂಡವಾಳ ಇಂದು ಯಾಕೆ ಓದಬೇಕು

1

10.00-10.30 : ಫಿಲಂ ಶೋ

ವಿಚಾರಸಂಕಿರಣ

ಗೋಷ್ಠಿ-1 10.30 ಬೆಳಿಗ್ಗೆ

'ಬಂಡವಾಳ'ದ 150 ವರ್ಷಗಳು ಮತ್ತು ಎಡಪಂಥದ ಮರು-ಶೋಧನೆ'
150 Years of 'Capital' and Re-inventing the Left

ದಿಕ್ಸೂಚಿ ಭಾಷಣ : **ಪ್ರೊ. ಪ್ರಭಾತ್ ಪಟ್ನಾಯಕ್,** ಪ್ರಸಿದ್ಧ ಅರ್ಥಶಾಸ್ತ್ರಜ್ಞ
ಸಂವಾದ : **ಡಾ. ನಟರಾಜ ಹುಳಿಯಾರ್,** ಪ್ರಾಧ್ಯಾಪಕರು, ಬೆಂಗಳೂರು ವಿ.ವಿ.
ಡಾ. ಎಚ್.ಎಸ್.ಅನುಪಮ, ಚಿಂತಕರು ಲೇಖಕರು
ಕೆ.ಎಸ್. ಉಮೇಶ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು
ಸಂವಾದ ನಿರ್ವಹಣೆ: **ಡಾ ಕಿರಣ್ ಗಾಜನೂರು,**ಅಧ್ಯಾಪಕರು, ಬೆಂಗಳೂರು ಕೇಂದ್ರ ವಿ.ವಿ.
ಅಧ್ಯಕ್ಷತೆ : **ಜಿ.ವಿ.ಶ್ರೀರಾಮರೆಡ್ಡಿ,** ಮಾಜಿ ಶಾಸಕರು

ಊಟದ ವಿರಾಮ

ಗೋಷ್ಠಿ-2 2.00 ಮಧ್ಯಾಹ್ನ

'ಬಂಡವಾಳ' ಇಂದು ಯಾಕೆ ಓದಬೇಕು ?

ಜಿ.ರಾಜಶೇಖರ್ , ಹಿರಿಯ ಚಿಂತಕರು, ಲೇಖಕರು
ಡಾ. ಜಿ.ಎಂ.ಪುಟ್ಟಯ್ಯ, ಪ್ರಾಧ್ಯಾಪಕರು, ಹಂಪಿ ಕನ್ನಡ ವಿ.ವಿ.
ವಸಂತರಾಜ ಎನ್.ಕೆ., ಸಂಯೋಜಕ, ಬಂಡವಾಳ ಅನುವಾದ ಯೋಜನೆ

ಅಧ್ಯಕ್ಷತೆ :
ಪ್ರೊ. ವಿ.ಎನ್.ಲಕ್ಷ್ಮೀನಾರಾಯಣ,
ಸಂಪಾದಕ ಮಂಡಳಿ ಸದಸ್ಯ, ಬಂಡವಾಳ ಅನುವಾದ ಯೋಜನೆ

2

ಕಾರ್ಲ್ ಮಾರ್ಕ್ಸ್
ಬಂಡವಾಳ
ಸಂಪುಟ-1

ಕೃತಿ ಬಿಡುಗಡೆ ಸಂಜೆ 4.00 ಗಂಟೆಗೆ

ನಾಡೋಜ ಬರಗೂರು ರಾಮಚಂದ್ರಪ್ಪ
ಅವರಿಂದ ಕೃತಿ ಬಿಡುಗಡೆ
ಮತ್ತು ಪ್ರಧಾನ ಭಾಷಣ

ಕಾರ್ಮಿಕ ಪ್ರತಿನಿಧಿಗಳಿಗೆ ಮೊದಲ ಪ್ರತಿ ಪ್ರದಾನ
ಸಂಪಾದಕ ಮಂಡಳಿ ಮತ್ತು ಅನುವಾದಕರಿಗೆ ಗೌರವ ಪ್ರತಿ ಪ್ರದಾನ

ಡಾ.ಎಲ್.ಹನುಮಂತಯ್ಯ, ರಾಜ್ಯಸಭಾ ಸದಸ್ಯರು
ಎಸ್. ಮೀನಾಕ್ಷಿಸುಂದರಂ, ಪ್ರಧಾನ ಕಾರ್ಯದರ್ಶಿ, ಸಿಐಟಿಯು ಕರ್ನಾಟಕ
ಡಿ.ಎ.ವಿಜಯಭಾಸ್ಕರ್, ಪ್ರಧಾನ ಕಾರ್ಯದರ್ಶಿ, ಎಐಟಿಯುಸಿ ಕರ್ನಾಟಕ
ನೀಲಾ ಕೆ. , ಸಾಹಿತಿ, ಮಹಿಳಾ ಚಳುವಳಿಗಾರರು

ಅಧ್ಯಕ್ಷತೆ : **ಡಾ ಸಿದ್ಧನಗೌಡ ಪಾಟೀಲ,** ಸಂಪಾದಕರು, ಹೊಸತು

ಉಪಸ್ಥಿತಿ : 'ಬಂಡವಾಳ ಸಂಪುಟ-1' ಕನ್ನಡ ಅನುವಾದ ತಂಡ

ಸಂಪಾದಕ ಮಂಡಳಿ
ಡಾ.ಜಿ.ರಾಮಕೃಷ್ಣ, ವಸಂತರಾಜ ಎನ್.ಕೆ., ವಿ.ಎನ್.ಲಕ್ಷ್ಮೀನಾರಾಯಣ, ವೇದರಾಜ ಎನ್.ಕೆ., ಶಿವಾನಂದ ಸಾಸ್ವೆಹಳ್ಳಿ, ಡಾ.ಜಿ.ಆರ್.ಮಂಜುನಾಥ

ಅನುವಾದಕರು
ಎ.ಎಸ್.ಆಚಾರ್ಯ, ಜಿ. ರಾಜಶೇಖರ, ವಿ.ಎನ್.ಲಕ್ಷ್ಮೀನಾರಾಯಣ, ವೇದರಾಜ ಎನ್.ಕೆ., ನಗರಗೆರೆ ರಮೇಶ್, ಶಿವಾನಂದ ಸಾಸ್ವೆಹಳ್ಳಿ, ವಸಂತರಾಜ ಎನ್.ಕೆ., ಡಾ.ಟಿ.ವೆಂಕಟೇಶಮೂರ್ತಿ, ಯಡೂರ ಮಹಾಬಲ, ಡಾ.ಜಿ.ಆರ್.ಮಂಜುನಾಥ, ಟಿ.ಎಸ್.ವೇಣುಗೋಪಾಲ, ಶೈಲಜಾ, ಡಾ. ಎಸ್.ಶ್ರೀಧರ್, ಎಚ್.ವಿ.ರಾವ್, ಜಿ.ಶ್ರೀಪಾದ ಭಟ್, ಡಾ.ಎಚ್.ಜಿ.ಜಯಲಕ್ಷ್ಮಿ, ಡಾ. ಕೃಷ್ಣಪ್ಪ ಕೊಂಚಾಡಿ, ಎಚ್.ಎಸ್. ಜಯಕುಮಾರ್, ಎಂ.ಸಿ. ಡೋಂಗ್ರೆ, ಡಾ. ಆರ್. ಶೋಭಾ

3



"ಬಂಡವಾಳದೊಂದಿಗೇ ಜನ್ಮತಾಳಿ, ಅದರಡಿಯಲ್ಲಿ, ಅದರೊಂದಿಗೂ ಬೆಳೆದುಬಂದ ಉತ್ಪಾದನಾ ವಿಧಾನಕ್ಕೆ ಬಂಡವಾಳದ ಏಕಸ್ವಾಮ್ಯವು ಕಾಲಿಗೆ ತೊಡರುವ ಬೇಡಿಯಾಗುತ್ತದೆ, ಬಂಧನವಾಗುತ್ತದೆ. ಉತ್ಪಾದನಾ ಸಾಧನಗಳ ಕೇಂದ್ರೀಕರಣ ಮತ್ತು ಶ್ರಮದ ಸಾಮಾಜೀಕರಣ ಎರಡೂ ಹೆಚ್ಚುತ್ತಾ ಹೋಗಿ ಯಾವ ಹಂತವನ್ನು ಮುಟ್ಟುತ್ತವೆಯೆಂದರೆ, ಆ ಕ್ಷಣದಲ್ಲಿ ಅವೆರಡನ್ನೂ ಒಂದೆಡೆ ಹಿಡಿದಿಟ್ಟಿರುವ ಬಂಡವಾಳಶಾಹಿ ಬಾಹ್ಯಕವಚವು ಇನ್ನು ಅಸಮರ್ಥವಾಗುತ್ತದೆ. ಕವಚವು ಹರಿದುಬೀಳುತ್ತದೆ. ಬಂಡವಾಳಶಾಹಿ ಖಾಸಗಿ ಆಸ್ತಿಯ ಮೃತ್ಯು ಘಂಟೆ ಮೊಳಗುತ್ತದೆ."

ಅಗಸ್ಟ್ 2ರ ವರೆಗೆ ಪ್ರಕಟಣಾಪೂರ್ವ ರಿಯಾಯಿತಿ

	ಮುಖಬೆಲೆ	ಪ್ರಕಟಣಾಪೂರ್ವ ಬೆಲೆ
ಸಾದಾಪ್ರತಿ	ರೂ. 1000	ರೂ. 700
ಉತ್ತಮ ಪ್ರತಿ	ರೂ. 1250	ರೂ. 900

ಸಂಪರ್ಕಿಸಿ
kriyamadhyama@gmail.com 94485 78021, 90360 82005, 97416 13073
navaarnataka@gmail.com 99725 90106
ಆನ್‌ಲೈನ್ : www.navakarnataka.com

4

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**